ಕಲ್ಯಾಣ ಕಿರಣ

ಜೂನ್-1992



ಬೆಲೆ : 3-00 ರೂ.

ಕಲ್ಯಾಣ ಕಿರಣ

ಮಾಸ ಪತ್ರಿಕೆ, **ಬಿಡಿ ಸಂಚಿಕೆ 3-00 ರೂ.**

ಮೇ - ಜೂನ್ - 1992

ಸಂಪುಟ : 20 ಸಂಚಿಕೆ : 12-1 ಬಸವ ಶಕೆ : 887


ವಾರ್ಷಿಕ ಚಂದಾ : 30 ರೂ. ಅಜೀವ ಸದಸ್ಯತ್ವ : 300 ರೂ.

ಲೇಖನಗಳು ಕಿರಣಗನ್ನಡಿ

ಮುಖ ಪುಟ : ವಿಶ್ವಗುರು ಬಸವಣ್ಣನವರು

ಹೊದ್ದಿಕೆಯ 4ನೇ ಪುಟ : ಐಕ್ಯ ಮಂಟಪ

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 325335.



ಸತ್ತುದನೆಳೆವನು ಅದೆತ್ತಣ ಹೊಲೆಯ ?

ಹೊಲೆಯೊಳಗೆ ಹುಟ್ಟಿ ಕುಲವನರಸುವೆ
ಎಲವೋ, ಮಾತಂಗಿಯ ಮಗ ನೀನು !
ಸತ್ತುದನೆಳೆವನು ಅದೆತ್ತಣ ಹೊಲೆಯ ?
ಹೊತ್ತು (ಹೋತು) ತಂದು ನೀವು ಕೊಲುವಿರಿ !
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲ ಸಂಗನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು
ಅವರಿಗೆ ತೋರಲು ಪ್ರತಿ ಇಲ್ಲವೊ !

— ವಿಶ್ವಗುರು ಬಸವಣ್ಣ, 575

"ಸತ್ತುದನೆಳೆವನು ಅದೆತ್ತಣ ಹೊಲೆಯ. ಹೊತ್ತು ತಂದು ನೀವು ಕೊಲುವಿರಿ" ಎಂಬುದನ್ನು 800 ವರ್ಷಗಳ ಮೊದಲೇ ಸಮತಾವಾದಿ ಬಸವಣ್ಣನವರು ಅಲ್ಲಿಗಿಯ ಸವರ್ಣೀಯರನ್ನು ಉದ್ದೇಶಿಸಿ ಹೇಳಿದ್ದಾರೆ.

ವರ್ಣಾಂತರ ವಿವಾಹ ಧರ್ಮ - ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅಂದೊಮ್ಮೆ ನಡೆದಾಗ ಆದ ಮಾನವ ಬಲಿಯ (ಶರಣರ ಎಳೆಹೂಟೆ) ಪುನರಾವರ್ತನೆ ಇಂದು ಭಾರತವು ಸ್ವತಂತ್ರ ಪ್ರಜಾಪ್ರಭುತ್ವವಾದಿ ರಾಷ್ಟ್ರವಾದ ಬಳಿಕವೂ ಅಲ್ಲಗಿಯಲ್ಲಿ ನಡೆದಿದೆ, ಗುಲಬರ್ಗಾ ಜಿಲ್ಲೆಯ ಅಲ್ಲಗಿ (ಬಿ) ಗ್ರಾಮದಲ್ಲಿ 1992 ರ ಜೂನ್ ಮೂರರಂದು ಮೂವರು ದಲಿತರ ಕೊಲೆ ನಡೆಯಿತು. ಕಾರಣ ಲಕ್ಷ್ಮೀದೇವಿಗೆ ಕೋಣನ ಬಲಿ ಕೊಡಲು ಸವರ್ಣೀಯರು ನಿರ್ಧರಿಸಿದರು. ಬಲಿಕೊಡಬೇಕಾದ ದಲಿತರು ಒಪ್ಪಲಿಲ್ಲ. ಅದಕ್ಕಾಗಿ ವಿಚಾರಶೀಲರಾದ ದಲಿತರನ್ನು ಅಮಾನುಷವಾಗಿ ಹತ್ಯೆ ಮಾಡಲಾಯಿತು. ಈ ಪ್ರಸಂಗವು ಅತ್ಯಂತ ಹೃದಯಸ್ಪರ್ಶಿ, ವಿಚಾರ ಶೀಲರನ್ನು ದಿಗ್ಭ್ರಮೆಗೆ ಈಡು ಮಾಡಿದೆ. ಊರಿನಲ್ಲಿ ಪೋಲೀಸ್ ಪಹರೆ ಇದ್ದೂ ಈ ಘಟನೆ ಸಂಭವಿಸಿದೆ. ಕೊಲೆಯಾದ ಭೀಮಶ್ಯಾ ಇಂದು ಹುತಾತ್ಮರಾಗಿ, ಶರಣ. ಹರಳಯ್ಯನವರನ್ನು ಮತ್ತೊಮ್ಮೆ ನೆನಪಿಗೆ ತರುತ್ತಾರೆ.

ಈ ದೇಶದಲ್ಲಿ ಶ್ರೇಣೀಕೃತ ವರ್ಣವ್ಯವಸ್ಥೆ, ಜಾತಿ ಪದ್ಧತಿ, ಪರಿಣಾಮವಾಗಿ ಅಸ್ಪೃಶ್ಯತೆ ಎಷ್ಟು ಅಸಹ್ಯವಾಗಿದೆ ಎಂದರೆ ದಲಿತರು ತಾವು ಕೆಟ್ಟುದನ್ನು ಮಾಡುವು-ದಿಲ್ಲ ಎಂದರೂ ಸವರ್ಣೀಯರು ಸಹಿಸಿಕೊಳ್ಳರು. ಹಿಂದೆ ಕೆಲವಾರು ಪ್ರಕರಣಗಳು ಪತ್ರಿಕೆ ಗಳಲ್ಲಿ ವರದಿಯಾದರೂ ಅವುಗಳ ಹಿಂದೆ ರಾಜಕೀಯ ವಾಸನೆ ಇದ್ದುದರಿಂದ ನಾನು ಚಕಾರವನ್ನೂ ಬರೆದಿರಲಿಲ್ಲ. ಆದರೆ ಈಗ ಆದುದು ತಾತ್ತ್ವಿಕ ಹೋರಾಟಕ್ಕೆ ಪ್ರತೀಕಾರ. ಆದ್ದರಿಂದ ಮಾತನಾಡಲೇ ಬೇಕಾಗಿದೆ. ಕೆಲವೊಮ್ಮೆ, ದಲಿತ ತರುಣನೊಬ್ಬ ಕುಡಿದು ಬಂದು ಆಫೀಸಲ್ಲಿ ಗಲಾಟೆ ಮಾಡಿ, ನನ್ನನ್ನು ಹೊಲೆಯನೆಂದರು ಎಂದು ಮೇಲಧಿಕಾರಿಯ ವಿರುದ್ಧ ದೂರು ನೀಡಿದ್ದು ಇದೆ; ತಮ್ಮ ಗುಡಿಸಲುಗಳಿಗೆ ಬೆಂಕಿ ಹಚ್ಚಿಕೊಂಡು ಸವರ್ಣೀಯರು ಬೆಂಕಿ ಇಟ್ಟರೆಂದೂ ಗಲಾಟೆ ಎಬ್ಬಿಸಿ, ಆರಿಸಲು ಬಂದ ಅಗ್ನಿಶಾಮಕ ದಳದವರನ್ನೂ ಮುಂದೆ ಬಿಡದೆ, ಅಗಾಧವಾದ ಪರಿಹಾರವನ್ನು ಸರ್ಕಾರದಿಂದ ಪಡೆದುದೂ ಇದೆ. ಆದ್ದರಿಂದ ಅಂಥವನ್ನು ಸಮರ್ಥಿಸಿದರೆ ನಾವು ಅನ್ಯಾಯದ ಪಕ್ಷಪಾತಿಗಳೂ, ಸುಳ್ಳುಗಾರರೂ,ಆಗುವುದು ಸಹಜ. ತಪ್ಪನ್ನು ಯಾರು ಮಾಡಿದರೂ ತಪ್ಪೆ, ಸವರ್ಣೀಯರಾದರೂ ಅಷ್ಟೆ, ದಲಿತರಾದರೂ ಅಷ್ಟೆ.

ಆದರೆ ಈಗ ನಡೆದ ಅಲ್ಲಗಿ ಪ್ರಕರಣ ಮಾನವೀಯತೆ, ಪ್ರಗತಿಪರ ಚಿಂತನೆ ಹೊಂದಿರುವ ಎಲ್ಲರೂ ದನಿಗೂಡಿಸಬೇಕಾದ ಪ್ರಕರಣ.

ಇದೇ ಸನ್ನಿವೇಶದಲ್ಲೇ ನಡೆದ ಶ್ರೀ ಮದನಗೋಪಾಲ್ ಪ್ರಕರಣವೂ ಅಷ್ಟೇ ದಿಗ್ಭ್ರಾಂತಿ ಹುಟ್ಟಿಸುವಂಥದು. ಅವರು ದಲಿತರಲ್ಲಿ ಜಾಗೃತಿ ಉಂಟು ಮಾಡಿದುದು, ಪರಿಣಾಮವಾಗಿ ದಲಿತರು ಹೆಂಡದ ಅಂಗಡಿಗಳು ತಮಗೆ ಬೇಡವೆಂದುದು ಸರ್ಕಾರದ ಕಣ್ಣುಗಳನ್ನು ಕೆಂಪಗೆ ಮಾಡಿದೆ. ದಲಿತರ ಉದ್ಧಾರಕ್ಕಾಗಿ ಹಲವಾರು ಯೋಜನೆ

ಸಮಾಜ ಸುಧಾರಕರು ಯಾವ
ಹೊರಹಾಕಲು ನೋಡುವರೋ ಇನ್ನೊಂದು ಕೈಯಿಂದ ಹೆಂಡದ ಅಂಗಡಿಗಳ ತಂದು ನೆಲೆಯೂರಿಸುತ್ತಿ[illegible]ಕೊಂಡು ದಲಿತರನ್ನು (ಇನ್ನಿತರ ಹಿಂದುಳಿದವರನ್ನು) [illegible]ರರನ್ನಾಗಿ ಮಾಡುವುದು. ಎಂತಹ ವಿಪರ್ಯಾಸ ! ಹಿಂದುಳಿದವರ ಹಿತ ಚಿಂತಕರೆಂದು ಬಿರುದಾವಳಿಗಳನ್ನು ಕಟ್ಟಿಕೊಂಡ ಸರಕಾರ, ದಲಿತರು ತಾವು ಕುಡಿಯುವುದಿಲ್ಲ, ಹೆಂಡದ ಅಂಗಡಿ ಬೇಡ ಎಂದರೆ, ಅದರಿಂದ ಅಬಕಾರಿ ಬಾಂಧವರಿಗೆ ನಷ್ಟವಾಗುವುದೆಂದು ದಲಿತರ ನೀತಿ ಜಾಗೃತಿ ಚಳುವಳಿಯನ್ನು ಹತ್ತಿಕ್ಕುವುದೇ, ಮದನಗೋಪಾಲರಂತಹ ಒಬ್ಬ ಆದರ್ಶ ಅಧಿಕಾರಿಯನ್ನು ಅಮಾನತ್ತುಗೊಳಿಸುವುದೇ ? ಶ್ರೀನಿವಾಸರಂಥ ಪ್ರಾಮಾಣಿಕ ಅಧಿಕಾರಿಯನ್ನು ಕೊಂದ ವೀರಪ್ಪನ್‌ಗೂ ಮದನಗೋಪಾಲರಂಥ ಪ್ರಾಮಾಣಿಕ ಕಳಕಳಿಯುಳ್ಳ ಅಧಿಕಾರಿಯನ್ನು ಅಮಾನತ್ತು ಗೊಳಿಸಿದುದಕ್ಕೂ ವ್ಯತ್ಯಾಸವೇನಿದೆ ? ಕುಡಿದು ಹಾಳಾಗುವ ಮಗ ಗುಣವಂತನಾದರೆ ತಾಯಿ ತಂದೆಯರು ಎಷ್ಟು ಸಂತೋಷಪಡುವರೋ ಹಾಗೆ ಸರಕಾರ ಸಂತೋಷಪಟ್ಟು ಇದಕ್ಕೆ ಪ್ರೇರಕರಾದ ಮದನಗೋಪಾಲರನ್ನು ಸತ್ಕರಿಸಿ, ಮುಂಬಡ್ತಿ ಕೊಡಬೇಕಾಗಿತ್ತು. ಈ ಪ್ರಕರಣದಿಂದಾಗಿ ರಾಜಕೀಯದ ಜನರು ಹಿಂದುಳಿದ ವರ್ಗಗಳ ಬಗ್ಗೆ ಸುರಿಸುವುದು ಕೃತಕವಾದ ಮೊಸಳೆ ಕಣ್ಣೀರು ಎಂಬುದು ಸ್ಪಷ್ಟವಾಗುತ್ತದೆ. ದಲಿತ ಯುವಕರಿಗೆ ಒಂದು ಬಗೆಯ ತಿಳುವಳಿಕೆ ಈಗ ಬರುತ್ತಲಿದೆ. ಅಯ್ಯೋ ಪಾಪ ಎಂದು ಒಂದು ಕಡೆ ನುಡಿಯುತ್ತ, ಇನ್ನೊಂದು ಕಡೆ ದುರ್ವ್ಯಸನಗಳ ಕೂಪದಲ್ಲಿ ಆ ಜನರು ಬಿದ್ದು, ಮೇಲೇರಲಾರದಂಥ ವಾತಾವರಣ ನಿರ್ಮಾಣ ಮಾಡುವುದು ಸರಕಾರದ ಯಾವ ಸುಧಾರಣಾ ದೃಷ್ಟಿಕೋನ ?

ಗುರು ಬಸವಣ್ಣನವರ ಚಿಂತನೆ ಈ ಹಿನ್ನೆಲೆಯಲ್ಲಿ ಚಿಂತನಾರ್ಹ. ಶತಮಾನಗಳ ಹಿಂದೆ ಯಾವುದೋ ಧಾರ್ಮಿಕ (ರಕ್ಕಸೀ) ಕಟ್ಟುಪಾಡು ಹೇರಿ, ಅಸ್ಪೃಶ್ಯರೆಂದು ಅಸಂಖ್ಯಾತರನ್ನು ಕರೆದು ಅವರನ್ನು ಅಸ್ಪೃಶ್ಯತೆಯ ಗುಂಡಿಯೊಳಗೆ ತಳ್ಳಲಾಯಿತು. ಇದನ್ನರಿತ ಮಾನವೀಯ ಮೂರ್ತಿ ಬಸವಣ್ಣನವರು ಆ ಗುಂಡಿಯಿಂದ ಮೇಲೆತ್ತಿ ಸುಜ್ಞಾನದ ನೀರಿನಿಂದ ತೊಳೆದರು; ಸದಾಚಾರದ ವಸ್ತ್ರಗಳನ್ನುಡಿಸಿದರು, ಸದ್ಭಕ್ತಿಯ ಆಭರಣ ತೊಡಿಸಿದರು. ಬನ್ನಿ, ನೀವೂ ಎಲ್ಲರಂತೆ ಸಮಾನರು ಎಂದು ಎಲ್ಲ ರಂಗಗಳಲ್ಲಿ ಸಮಾನವಾಗಿ ನಡೆಸಿಕೊಂಡರು. ಅದರ ಪರಿಣಾಮವೇ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಕಂಬಳಿ ನಾಗಿದೇವ ಮುಂತಾದ ಶರಣ ಚೇತನಗಳ ಸೃಷ್ಟಿ.

ನಾವಿಂದು ದಲಿತರ ಬಗ್ಗೆ ಮಾತ್ರವೇ ಚಿಂತಿಸುವುದಲ್ಲ. ಅತ್ಯಂತ ದುಃಖಿತವಾದ, ಹೀನವಾದ, ದುರ್ವ್ಯಸನಗಳ ಮುದ್ದೆಗಳಾಗಿರುವ ಇನ್ನೂ ಸಾಕಷ್ಟು ಜನಾಂಗಗಳಿವೆ. ಸಂಯುಕ್ತ ಕರ್ನಾಟಕದ ಸಾಪ್ತಾಹಿಕ ಪುರವಣಿಯಲ್ಲಿ ಎರಡು ವಾರ ಬಂದ

ಬೇಡ ಸಮಾಜದ ಒಬ್ಬ ಲೇಖಕರು ಬರೆದ ಬೇಡ ಗಳ ಹಿನ್ನೆಲೆಯಲ್ಲಿ ಅಂದೊಮ್ಮೆ ಲೇಖನ ಅಷ್ಟೇ ಹೃದಯ ಸ್ಪರ್ಶಿಯಾಯಿತ್ತು. ಗಾಂಧೀಜಿ. ಪುನರಾವರ್ತನೆ ಇಂದು ದವರೂ ಆದ ಶ್ರೀ ಚಂದ್ರಾಮ ಗುರೂಜಿ ಎಂಬ ಲಂಬಾಣಿ ನಾಯಕರು ಸಿಂದ್ರಲ್ಪುರ ದಲ್ಲಿ ದಿನಾಲು ಪ್ರವಚನಕ್ಕೆ ಬರುತ್ತಿದ್ದರು. ಅವರು ಹೇಳಿದರು "ಹೋಳಿ ಹಬ್ಬದಂದು ಏನೇನು ನಮ್ಮ ಜನರ ಮಧ್ಯೆ ಸಂಭವಿಸಬಹುದು ಎಂಬುದನ್ನು ಹೇಳಲು ಸಾಧ್ಯವೇ ಆಗದು ಎಂದು, ತಿಳುವಳಿಕೆಯುಳ್ಳವರು ಮನೆಯನ್ನೇ ಅಂದು ಬಿಡರು. ಇಲ್ಲವೇ ಹಿಂದಿನ ದಿನವೇ ಬೇರೆ ಎಲ್ಲಾದರೂ ಹೋಗಿ ಮರುದಿನ ಬರುವರು. ಇಂಥ ಜನರನ್ನು ಸುಧಾರಿಸುವುದು ಹೇಗೆ ?"

ಮಾನವ, ಮಾನವನ ಸ್ಥಿತಿಯನ್ನು ಕಳೆದುಕೊಂಡು ಪಶುವಿನ ಅದೂ ಹಿಂಸ್ರ ಪಶುವಿನ ಮಟ್ಟಕ್ಕೆ ಏರುವುದು ಸೆರೆಯ ನಿಶೆ ಏರಿದಾಗಲೇ, ಆ ವಿಷವನ್ನು ಜನರಿಗೆ ಕುಡಿಸುವ ತನಕ ಯಾವುದೇ ಸರಕಾರ ಹಿಂದುಳಿದ ಜನರ ಸುಧಾರಣೆಯ ಮಾತನಾಡುವುದು ಹಾಸ್ಯಾಸ್ಪದ. ಸರಕಾರಗಳಿಂದ ನಮ್ಮ ಏಳ್ಗಿ ಆಗದು, ನಾವು ನಾವೇ ಜಾಗ್ರುತರಾಗೋಣ ಸನ್ಮಾರ್ಗಿಗಳಾಗೋಣ ಎಂದು ರಾಯಚೂರು ಜಿಲ್ಲೆಯ ದಲಿತರು, ಶ್ರೀ ಮದನ ಗೋಪಾಲರಂಥ ಪ್ರಜ್ಞಾವಂತ ಅಧಿಕಾರಿಗಳಿಂದ ಜಾಗೃತರಾಗಿ ಹೆಂಡ ಕುಡಿಯುವುದಿಲ್ಲ ಎಂದರೆ ಜಾಗೃತಿ ಉಂಟು ಮಾಡಿದ ಅಧಿಕಾರಿಗೇ ಸರಕಾರದಿಂದ ಅರ್ಧಚಂದ್ರ ಪ್ರಯೋಗ ! ಎಂತಹ ಕರಾಳ ವ್ಯವಸ್ಥೆ ಇದು. ಆಳುವ ಜನರ ಅಂತಃಸಾಕ್ಷಿ ಸತ್ತು ಹೋಗುತ್ತಿದೆ.

ಅಂದು ಸ್ವಾತಂತ್ರ್ಯವನ್ನು ಗಳಿಸಲು ಹೇಗೆ ಲಕ್ಷಾಂತರ ಜನರು ಪ್ರಾಣತೆತ್ತರೋ. ತಮ್ಮ ಆಸ್ತಿ-ಪಾಸ್ತಿಗಳನ್ನು ಕಳಕೊಂಡರೋ ಅಂಥದೊಂದು ಹೋರಾಟ ಇಂದು ಆರಂಭವಾಗಬೇಕಾಗಿದೆ, ಸ್ವರಾಜ್ಯವನ್ನು ಸುರಾಜ್ಯ ಮಾಡಲು, ಅನೇಕರು ಆದರ್ಶದ ಮಾತುಗಳಿಂದ ಹೊರಡುತ್ತಾರೆ, ಮುಖಂಡತ್ವ ಗಟ್ಟಿಗೊಳ್ಳುತ್ತಲೇ ಪುಂಡಾಟಿಕೆಗೆ, ಸ್ವಾರ್ಥಕ್ಕೆ ಇಳಿಯುತ್ತಾರೆ. ಆದರ್ಶದ ಧ್ಯೇಯ ಹಿಡಿದು ಅವರ ಬೆನ್ನು ಹತ್ತಿದ ಹಿಂಬಾಲಕರು ದಿಗ್ಭ್ರಾಂತರಾಗುತ್ತಾರೆ. ಹೀಗಾಗಿ ಯಾರನ್ನು ನಂಬಬೇಕು ಎಂಬ ಸಂದಿಗ್ಧತೆ ಆದರ್ಶವಾದಿ ಹಿಂಬಾಲಕರಲ್ಲಿ ಬರುತ್ತದೆ. "ಇಂಥ ಪತನಕ್ಕೆ ಎಂದೂ ಒಳಗಾಗುವುದಿಲ್ಲ, ಬಡತನ ಬರಲಿ. ಸಂಕಷ್ಟಗಳ ಸರಮಾಲೆಯೇ ಎದುರಾಗಲಿ ನಾನು ಧ್ಯೇಯವಾದಿಯಾಗಿಯೇ ಇರುತ್ತೇನೆ" ಎಂಬ ಛಲವಂತರು ದೇಶವನ್ನು ಸಂಸ್ಕೃತಿಯನ್ನು, ಜನರ ಹಿತವನ್ನು ಕಾಪಾಡಲು ಸನ್ನದ್ಧರಾಗಬೇಕಾಗಿದೆ, ಶ್ರೀ ಮದನ ಗೋಪಾಲರಂಥವರು ಸರ್ಕಾರಿ ವಿಷವೃತ್ತದೊಳಗಿದ್ದು ಸುಧಾರಣೆ ಮಾಡಲು ಸಾಧ್ಯವಿಲ್ಲವೆಂಬುದನ್ನರಿತು ಪ್ರಜ್ಞಾವಂತ ಹೋರಾಟಗಾರರಾಗಿ ಸಾತ್ವಿಕ ಶಕ್ತಿಯನ್ನು ಕ್ರೋಢೀಕರಿಸಬೇಕಾಗಿದೆ.

ಸಮಾಜ ಸುಧಾರಕರು ಯಾವ ಯಾವ ಅನಿಷ್ಟಗಳನ್ನು ಮಾನವ ಸಮಾಜದಿಂದ ಹೊರಹಾಕಲು ನೋಡುವರೋ ಅವನ್ನೆಲ್ಲ ನಮ್ಮ ರಾಜಕಾರಣಿಗಳು ಭದ್ರವಾಗಿ ತಂದು ನೆಲೆಯೂರಿಸುತ್ತಿದ್ದಾರೆ.

1. ಬಸವಣ್ಣ — ಗಾಂಧೀಜಿಯವರಂಥವರು ಮೇಲ್ವರ್ಣೀಯರಲ್ಲಿದ್ದ ಮೇಲರಿಮೆ ಕೆಳವರ್ಣೀಯರಲ್ಲಿದ್ದ ಕೀಳರಿಮೆ ತೊಡೆದು ಉಭಯತರನ್ನೂ ಪರಿವರ್ತಿಸಿದರು. ಮೇಲಿನವರು ತೋರೆಯಬೇಕಾಗಿತ್ತು ಮೇಲರಿಮೆಯನ್ನು, ಕೆಳಗಿನವರು ಅದನ್ನು ಬೆಳೆಸಿಕೊಳ್ಳಬೇಕಾಗಿತ್ತು. ಪರಿಣಾಮವೇ ಸುಂದರ ಸಮಾಜ, ಇಂದಿನ ರಾಜಕಾರಣಿಗಳು ಎಲ್ಲ ಜಾತಿಗಳನ್ನು ಚೌಕಟ್ಟು ಹಾಕಿ ಭದ್ರಗೊಳಿಸಿ ಕೆರಳಿಸಿ, ಕಚ್ಚಾಡುವಂತೆ ಮಾಡಿ ಊರುಗಳನ್ನು ಸ್ಮಶಾನ ಸದೃಶವಾಗಿ ಮಾಡುತ್ತಿದ್ದಾರೆ.
2. ಬಸವಣ್ಣ—ಗಾಂಧೀಜಿ ಜನರನ್ನು ದುಶ್ಚಟಗಳಿಂದ ಬಿಡುಗಡೆ ಮಾಡಿಸಿ 'ನೋಡಿ ಸಾಧನೆಯಿಂದ ಎಂಥವರೂ ದೊಡ್ಡವರಾಗುವರು' ಎಂದು ಆ ಉತ್ಥಾನಗೊಂಡವರನ್ನು ಮೇಲ್‌ಜಾತಿಯವರೆಂದು ಬೀಗುತ್ತಿದ್ದವರ ಮುಂದೆ ಮಾದರಿಯಾಗಿ ನಿಲ್ಲಿಸಿ ತೋರಿಸಿದರು. ಉದಾಹರಣೆಗೆ ಬಿಜ್ಜಳನ ಆಸ್ಥಾನದಲ್ಲಿ ವಿಚಾರಣೆ ಎದುರಿಸಿ ಸನ್ಮಾನಿತನಾದ ಕಂಬಳಿನಾಗಿದೇವ ಮತ್ತು ಮೀಮಾಂಸಕನನ್ನು ವಾದದಿಂದ ಸೋಲಿಸಿ ಬಿಜ್ಜಳನ ಗೌರವಕ್ಕೆ ಪಾತ್ರನಾದ ಹುಲ್ಲುಮಾರುವವ. ಇದು ವಿಧಾಯಕ ಬದಲಾವಣೆ. ಆದರೆ ಇಂದಿನ ಮಾದರಿ ರಾಜಕಾರಣಿಗಳು "ಲೋ ಕುಡಿರೋ, ಅವರು ನಿಮ್ಮನ್ನು ತುಳಿದಿದ್ದಾರೆ, ನೀವು ಅವರ ಮನೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡ್ರೊ" ಎಂದು ಕರೆ ಕೊಡುವರು. ಈತ ತಮ್ಮ ಹಿತಶತ್ರು ಎಂಬುದನ್ನರಿಯದ ಮುಗ್ದರು ಹಿತಚಿಂತಕ ಎಂದು ನಂಬುತ್ತಾರೆ. ಕೇರಿಕೇರಿಗೆ ಹೆಂಡದ ಅಂಗಡಿ ತೆರೆದು ಮುಗ್ಧ ಜನರ ಸಂಸಾರವನ್ನು, ಸಂತಾನವನ್ನೂ ಪಾಪ ಕೂಪಕ್ಕೆ ತಳ್ಳುತ್ತಿದ್ದಾರೆ.

ಒಬ್ಬ ತರುಣನಿದ್ದ. ಅತ್ಯುತ್ತಮ ಮನೆತನದಲ್ಲಿ ಹುಟ್ಟಿದರೂ ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡು ಮಾರ್ಗದರ್ಶನವಿಲ್ಲದೆ ದುರ್ವ್ಯಸನಕ್ಕೆ ಬಲಿಯಾದ. ತಂದೆ ಮಾಡಿಟ್ಟ ಆಸ್ತಿ ಇತ್ತು. ಹೀಗಾಗಿ ಆಸ್ತಿಯನ್ನು ಹೊಡೆಯಬೇಕೆಂದು ಕೆಲವು ಧೂರ್ತರು ಹೊಂಚು ಹಾಕುತ್ತಿದ್ದರು. "ಸಾಹುಕಾರ ನಿನಗಿಲ್ಲ ಅಂದೀವಾ ? ಎಷ್ಟು ಬೇಕಾದರೂ ಹಣ ಕೊಡ್ತೀವಿ" ಎಂದು ಸಾಲ ಕೊಡೋದು. ತಾವೂ ಜೊತೆ ಸೇರಿಕೊಂಡು ಅದೇ ಹಣದಲ್ಲಿ ಕುಡಿಯುವುದು. ಕುಡಿದ ನಿಶೆಯಲ್ಲಿ ಅತ ಬಿದ್ದಾಗ ಜೇಬಿನಿಂದ ಹಣ ಲಪಟಾಯಿಸುವುದು, ತಮ್ಮ ಸಾಲದ ಹಣಕ್ಕಾಗಿ ಬೆಲೆಯುಳ್ಳ ಮನೆ, ತೋಟ, ಹೊಲ, ಎಲ್ಲ ಬರೆಸಿಕೊಂಡು ಆತನನ್ನು ಆತನ ಕುಟುಂಬವನ್ನು ನಿರ್ಗತಿಕರಾಗುವಂತೆ ಮಾಡಿದರು.

ಇದನ್ನು ಸರಕಾರವೇ ಮಾಡಿದರೆ ? ಛೇ ಛೇ ಸರ್ಕಾರ ಮಾಡುತ್ತದೆಯೇ ಜನ ಕಲ್ಯಾಣಕ್ಕಾಗಿ ಇರುವ ಸರ್ಕಾರ ? ಎಂದು ನೀವು ಹುಬ್ಬು ಏರಿಸಬಹುದು. ಸರಕಾರ ಮಾಡುತ್ತಿರುವುದು ಅದನ್ನೇ. ಶಬ್ದಗಳಿಂದ ಆಕರ್ಷಣೀಯವಾಗಿ ತೋರುವ ಯೋಜನೆಗಳನ್ನು ಜಾರಿಗೆ ತರುವುದು ಹಣ ಕೊಡುವುದು, ಬ್ಯಾಂಕುಗಳಿಂದ ಕೊಡಿಸು-ವುದು. ಜೊತೆ ಜೊತೆಗೇ ಸೆರೆಯ ಅಂಗಡಿಗಳನ್ನು ತೆಗೆಸುವುದು, ಸಾಲ ಪಡೆದವನು ಎಲ್ಲ ಕಳೆದುಕೊಂಡು ಕಡೆಗೆ ಸಾಲಗಾರನಾಗಿ ಉಳಿಯುವುದು.

3. ಹಾಳು ಮೊರಡಿ ಊರದಾರಿಗಳಲ್ಲಿ ಇರುವ ಮಾರಿ, ದುರ್ಗಿ, ಕೇತ, ಪೋತ ಇಂಥ ದೈವಗಳ ಆರಾಧನೆಯಿಂದ ಜನರು ಮೂಢರಾಗುವರು ಎಂದು ಬಸವಣ್ಣನವರು ವೈಚಾರಿಕ, ಪ್ರಗತಿಪರ, ಸುಸಂಸ್ಕೃತ ಧರ್ಮವನ್ನು ಕೊಟ್ಟರೆ ನಮ್ಮ ಮಂತ್ರಿಮಹೋದಯರು ತಾವು ಮಾಡುತ್ತಿರುವ ಅಪರಾಧ ಅರಿಯದೆ, ಕ್ಷುದ್ರ ದೈವಂಗಳ ಗುಡಿಗಳನ್ನು ಕಟ್ಟಿಸುವುದರೊಡನೆ ಮೂಢನಂಬಿಕೆಗಳನ್ನು ಗಟ್ಟಿಗೊಳಿಸುತ್ತಾರೆ. ಸರ್ಕಾರ ಎಂಥಾ ಹಿತೈಷಿ ; ನಮ್ಮ ಮಾರಮ್ಮನ ಗುಡಿಗೆ ಹಣ ಕೊಟ್ಟಿತು. ಎಂದು ಇಲ್ಲೂ ಮುಗ್ಧರು, ವಂಚನೆಗೊಳಗಾಗುತ್ತಾರೆ. "ಕುಡಿದುಕೊಂಡು ಅಲ್ಲೇ ಬಿದ್ದಿರಿ, ಹೊಲೆಗೇರಿ ಬಿಟ್ಟು ಆಚೆ ಬರಬೇಡಿ ಸುಧಾರಣೆಗೊಳ್ಳಬೇಡಿ" ಎಂದು ಹೇಗೆ ಹೆಂಡದ ಅಂಗಡಿ ತೆರೆಸುತ್ತದೋ ಹಾಗೆ, ಮೂಢ ಆಚರಣೆಗಳಲ್ಲೇ ಇರಿ ಎಂದು ಆ ಜನರನ್ನು ವಂಚಿಸುವ ಇನ್ನೊಂದು ತಂತ್ರವಿದು. ಮಾರಮ್ಮನ ಗುಡಿ, ದುರ್ಗಮ್ಮನ ಗುಡಿ ಆದ ಮೇಲೆ ಮತ್ತೆ ಅವಕ್ಕೆ ಕೋಣ, ಕುರಿ ಬೇಕಲ್ಲವೆ ? ಹೀಗಾಗಿ ಆಚರಣೆ ಇಲ್ಲದಲ್ಲೂ ಅದು ಶುರುವಾಗಬೇಕು. "ಇದು ಸಲ್ಲದ ಆಚರಣೆ ; ನಾವು ಕಡಿಯಲ್ಲ" ಎಂದುದರ ಪರಿಣಾಮವೇ ಅಲ್ಲಿಗಿ ದುರಂತ. 'ಆರಾಧನಾ' ಎಂಬ ಸುಂದರ ತಾತ್ತ್ವಿಕ ಪದವನ್ನು ಅಂದಗೆಡಿಸುತ್ತಿರುವ ಸರ್ಕಾರ ಈ ಹಾಳೂಮೂಳು ಗುಡಿಗಳ ಬದಲು ಪ್ರಾರ್ಥನಾ ಭವನ, ಬಸವ ಮಂಟಪ, ಗಾಂಧೀ ಮಂಟಪ, ಅಂಬೇಡ್ಕರ್ ಭವನ ಎಂದು ತೆರೆದು ಆ ಜನರಿಗೆ ಯೋಗ-ಧ್ಯಾನಗಳ ಶಿಕ್ಷಣ ಕೊಡಲು ಬರುವುದಿಲ್ಲವೆ ?

ರಾಜಕಾರಣಿಗಳ ಸಂಖ್ಯೆ ಪಾರ್ಥೇನಿಯಮ್‌ದಂತೆ ಬೆಳೆಯುತ್ತಿದೆ ; ಮುತ್ಸದ್ದಿಗಳು ಹುಡುಕಿದರೂ ಸಿಗುವುದು ವಿರಳವಾಗುತ್ತಿದೆ. ಜನರ ದೀನ ಸ್ಥಿತಿ ಕಂಡು ಮರುಕ ಪಡದ ಅಟ್ಟಹಾಸದ ರಾಜಕಾರಣಿಗಳ ಪ್ರೇತ ನೃತ್ಯದ ಮಧ್ಯೆ ದೇಶದಿಕ್ಕು ಗಾಣದಾಗಿದೆ. ಈ ವಿಷಕುಂಡದಿಂದ ದೇಶದ ಜನತೆಯನ್ನು ಮೇಲೆತ್ತಿ ಎಂದು ಯಾರಲ್ಲಿ ಮೊರೆ ಇಡುವುದು ?

—ಜಗದ್ಗುರು ಮಾತೆ ಮಹಾದೇವಿ

ಸ್ವಾಭಿಮಾನಿ -- ಶರಣ ಪ್ರೇಮಿ

-ಮಾತಾಜಿ

ಅಡ್ಡದೊಡ್ಡ ನಾನಲ್ಲಯ್ಯ, ದೊಡ್ಡ ಬಸುರೆನಗಿಲ್ಲಯ್ಯಾ
ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ
ಬೋಧಿಸಲು, ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯ
ದೊಡ್ಡತನವೆನಗಿಲ್ಲ, ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ
[ಅನಾಥ ನಾನಯ್ಯಾ] ಕೂಡಲ ಸಂಗಮದೇವಾ.

--ಬ.ಷ.ವ ೪೧೨

ಇದೊಂದು ಅಮೋಘವಾದ ಮತ್ತು ಧರ್ಮಪಿತ ಬಸವಣ್ಣನವರ ಆದರ್ಶ ನಿಲುವನ್ನು ಬಿಂಬಿಸುವ ವಚನ. ಇಂಥದೊಂದು ಬೆಲೆಬಾಳುವ ವಚನವನ್ನು ಡಾ॥ ಎಲ್. ಬಸವರಾಜು ಅವರು ಖೊಟ್ಟಿ ವಚನವನ್ನಾಗಿ ಮಾಡಿದ್ದಾರೆ.

ಕಲಬುರ್ಗಿಯ ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾನಿಲಯ ಪ್ರಕಟಣೆ ವಚನ 414 ಶ್ರೀ ಬಸವರಾಜು ಅವರ ವಿವರಣೆ ಹೀಗಿದೆ. "ಶರಣರು ದಘೂತಿ ದೇಷದ ಧನಿಕರನ್ನೇ ಹುಡುಕಿಕೊಂಡು ಹೋಗಿ ಪುರಸ್ಕರಿಸುವರೆನ್ನುತ್ತ, ಹಾಗೆ ಸೂಳೆಯಂತೆ ಧನಿಕರನ್ನೇ ಹುಡುಕಿಕೊಂಡು ಹೋಗಿ ಬೋಧಿಸುವುದು ಬೇಡುವುದು ತಮಗೆ ಹಿಡಿಸುವುದಿಲ್ಲವೆನ್ನುತ್ತ, ಶರಣರನ್ನೆಲ್ಲ ಸಾರಾಸಗಟಾಗಿ ನಿಂದಿಸಿ ತಮ್ಮನ್ನೇ ಪ್ರಶಂಸೆ ಮಾಡಿಕೊಂಡಂತಿರುವ-(ಅಷ್ಟರಲ್ಲೇ) ಮರಳಿ "ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ ಅನಾಥ ನಾನಯ್ಯ" ಎನ್ನುತ್ತ ಇಡೀ ವಚನದ ದಾಟಿಗೆ ವಿರೋಧವಾಗಿ ವಿನಯವನ್ನು (ಧೂರ್ತನಂತೆ) ತೋರಿಸಿಕೊಂಡಿರುವ ಈ ವಚನ ಬಸವಣ್ಣನವರ ನಿಜ ವಚನವಲ್ಲ ಒಬ್ಬ ಸಣ್ಣಸ್ವಾಮಿ ಒಬ್ಬ ದೊಡ್ಡಸ್ವಾಮಿಯ ವಿರುದ್ಧ ತಂಟೆ ಮಾಡಲು ಬಸವಣ್ಣನವರ ಅಂಕಿತದಲ್ಲಿ ಬರೆದು ಸೇರಿಸಿದ ಖೊಟ್ಟಿ ವಚನವಿದು" —ಪುಟ 139

ಡಾ॥ ಎಲ್. ಬಸವರಾಜರಂಥ ಅಸಾಮಾನ್ಯ ಕನ್ನಡ ವಿದ್ವಾಂಸರಿಗೇ ಜೀವನಾನುಭವವನ್ನು ಬಿಂಬಿಸುವ ಈ ವಚನವನ್ನು ಅರ್ಥಮಾಡಿಕೊಳ್ಳಲು ಆಗಿಲ್ಲ ಎಂದಮೇಲೆ ಜನಸಾಮಾನ್ಯರಿಗೆ ವಚನಗಳು ಅಷ್ಟು ಸುಲಭವಾಗಿ ತಿಳಿಯುತ್ತವೆಯೇ ? ಎಂದು ಸಂದೇಹ ಉಂಟಾಗುತ್ತದೆ. ಇದರ ನಿಜಾರ್ಥ ನೋಡೋಣ.

ಬಸವಣ್ಣನವರು ಅಡ್ಡಡ್ಡಲಾಗಿ ಬೆಳೆದ ಸ್ಥೂಲಕಾಯದ ವ್ಯಕ್ತಿಯಾಗಿರಲಿಲ್ಲ; ಭೂತಿ ದೇಹದವರಿರಲಿಲ್ಲ ಎಂಬುದು ಈ ವಚನದಿಂದ ತಿಳಿದುಬರುತ್ತದೆ. ಕೆಲವರು ಬೊಜ್ಜು ಶ್ರೀಮಂತಿಕೆಯ ಸಂಕೇತವೆಂದು, ಅದು ಸಮಾಜದಲ್ಲಿ ವ್ಯಕ್ತಿಯ ತೂಕವನ್ನು (?) ಸ್ಥಾನಮಾನವನ್ನು ಹೆಚ್ಚಿಸುತ್ತದೆ ಎಂದು ಭ್ರಮಿಸಿರುತ್ತಾರೆ. ಮತ್ತು ವೇಷಭೂಷಣದಲ್ಲಿ ಬಹಳ ಸಿರಿವಂತಿಕೆ ಆಡಂಬರ ಪ್ರದರ್ಶಿಸುತ್ತ ರೀತಿಯಿಂದ ಗತ್ತಿನಿಂದ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಡೆಯುತ್ತಿರುತ್ತಾರೆ.

ಬಸವಣ್ಣನವರಿಗೆ ಇಂಥ ಗತ್ತು ಅಸಹ್ಯವೆನಿಸುತ್ತಿತ್ತು. ಯಾವುದೇ ಆದರ್ಶ ಜೀವಿಗೆ ಹಾಗನ್ನಿಸುತ್ತದೆ. .ಗಾಂಧೀಜಿ ಎಂತಹ ಸರಳ ಸ್ವಭಾವದವರು; ಹೇಗೆ ಚಟಪಟ ನಡೆಯುತ್ತಿದ್ದರು ಎಂಬುದನ್ನು ನೆನಪಿಗೆ ತಂದುಕೊಳ್ಳಬಹುದು,

[ಇಲ್ಲಿ ಕೆಲವರು ಸಂದೇಹಿಸಬಹುದು, ಕುರ್ಚಿ ಮೇಲೆ ಕುಳಿತ ಭಾವಚಿತ್ರದಲ್ಲಿ ಶ್ರೀಮಂತ ಪೋಷಾಕು ಧರಿಸಿ, ಕಿರೀಟವಿಟ್ಟು ಬಸವಣ್ಣನವರು ಇದ್ದಾರಲ್ಲಾ ಎಂದು 1. ಇದು ಕಲಾಕಾರನ ಕಲ್ಪನೆ. ಗುರು ಬಸವಣ್ಣನವರ ಫೋಟೋಗಳು 1950 ರ ನಂತರ ಬರೆಯಲ್ಪಟ್ಟವು. 2. ಅವರು ಪ್ರಧಾನಿ ಇದ್ದುದರಿಂದ ಆ ಸಮವಸ್ತ್ರ ಧರಿಸಲೇ ಬೇಕಿತ್ತು ಎಂದು ಭಾವಿಸೋಣ: ಪೋಲೀಸ್ ಅಧಿಕಾರಿ ಕರ್ತವ್ಯದಲ್ಲಿರುವಾಗ ಸಮವಸ್ತ್ರಧರಿಸುವುದಿಲ್ಲವೇ ಹಾಗೆ. 3. ಪ್ರಧಾನಿಯಿದ್ದರೂ ಯಾವಾಗಲೂ ಆ ವೇಷದಲ್ಲೇ ಇರುವರೇ ? ಅವರು ನಮ್ಮ ರಕ್ಷಕ, ಗುರು, ಪ್ರವಾದಿ ಇರುವುದರಿಂದ ಗುರುವಿನ ಸರಳತೆಯಲ್ಲಿರಲಿ ಎಂದು ಹೊಸದಾಗಿ ಅಭಯಮುದ್ರೆ, ನಿಂತ ನಿಲುವು ಮುಂತಾಗಿ ಭಾವಚಿತ್ರಗಳನ್ನು ನಾವು ಬರೆಸಿ ಬಳಕೆಗೆ ತಂದೆವು. ಆದರೆ ಕಿರೀಟಧಾರಿಯ ಭಾವಚಿತ್ರವನ್ನೇ ಜನರು ಇಂದಿಗೂ ಹೆಚ್ಚು ಇಷ್ಟಪಡುತ್ತಾರೆ ಎಂಬುದು ಸ್ಪಷ್ಟ ಸತ್ಯ. ಹಿಂದೂ ದೇವತೆಗಳೆಲ್ಲ ಕಿರೀಟ ತೊಟ್ಟಾಗ ತಮ್ಮ ಗುರುವನ್ನು ಹಾಗೆಯೇ ಕಾಣುವ ಬಯಕೆ ಬಸವ ಭಕ್ತರದು ಇರುವಂತೆ ತೋರುತ್ತದೆ.]

ಬೊಜ್ಜು ಸೋಮಾರಿತನದ ಲಕ್ಷಣವಾದಂತೆ, ಆಡಂಬರವೂ ಅಜ್ಞಾನಿಯ ಲಕ್ಷಣ. ಅದನ್ನು ಮೊದಲವಾಕ್ಯದಲ್ಲಿ ಹೇಳಿ ಕೈಬಿಡುತ್ತಾರೆ. ಬಹುಶಃ ಈ ವ್ಯಂಗ್ಯಾರ್ಥದ ಮಾತನ್ನು ಅರ್ಥಮಾಡಿಕೊಳ್ಳದೆ ಮೂಢರು ಮತ್ತು ಕುಹಕಿಗಳು ತನ್ನ ಬಗ್ಗೆ ತಪ್ಪು ಪ್ರಚಾರ ಮಾಡಬಾರದು ಎಂದು ಇನ್ನೊಂದು ರೀತಿ ಅದನ್ನು ವಿವರಿಸುತ್ತಾರೆ.

"ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡಲಿ ಬಡವನಯ್ಯ" ? ಎಂಬ ವಚನ ತೆಗೆದುಕೊಂಡು ನಮ್ಮಲ್ಲಿ ಕೆಲವು ಶೈವಾಚಾರ್ಯರು ಹೇಳುವುದುಂಟು "ಬಸವಣ್ಣನವರಲ್ಲಿ ದೇವಾಲಯ ಕಟ್ಟಿಸಲು ಹಣವಿರಲಿಲ್ಲ, ಹಣವಿದ್ದರೆ ಕಟ್ಟಿಸುತ್ತಿದ್ದರು" ಅದೇ ರೀತಿ "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ " ಎಂಬ

ಭೃತ್ಯಾಚಾರದ ಘನ ಸೂತ್ರವನ್ನು ತೆಗೆದುಕೊಂಡು ಬಸವಣ್ಣ ಶರಣರ ಸೇವಕ ಅಂದು ಬಿಡುವರು. ಮಾದಾರ ಚನ್ನಯ್ಯನ ದಾಸಿಯ ಮಗ, ಡೋಹರ ಕಕ್ಕಯ್ಯನ ದಾಸಿಯ ಮಗಳು ಬೆರಣಿಯನಾಯಲು ಹೋಗಿ ಸಂಗವ ಮಾಡಿದಾಗ ಹುಟ್ಟಿದವ ನಾನು ಅನ್ನುವುದನ್ನು ತೆಗೆದುಕೊಂಡು ಅವರು ಹುಟ್ಟಿನಿಂದ ಬ್ರಾಹ್ಮಣರಲ್ಲ ಎನ್ನುವವರೂ ಉಂಟು. ಆದಕ್ಕಾಗಿ ಎರಡನೆ ವಾಕ್ಯದಲ್ಲಿ ಹೇಳುತ್ತಾರೆ, "ನಾನು ಆಡಂಬರ, ಗತ್ತು, ಆಢ್ಯತೆಗಳ ದೃಷ್ಟಿಯಲ್ಲಿ ದೊಡ್ಡವನಲ್ಲ. ಆದರೆ ಬೇರೊಂದು ರೀತಿಯಲ್ಲಿ ದೊಡ್ಡವನು. ಇಲ್ಲದಿದ್ದರೆ ಸಂಗನ ಶರಣರು ನನ್ನನ್ನು ಇಷ್ಟೊಂದು ಪ್ರೀತಿಸುವುದಿಲ್ಲ" ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮೇಶ್ವರ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಯ್ಯ ಮುಂತಾದವರೆಲ್ಲ ಧಾವಿಸಿ ಬಂದು, ಇಷ್ಟೊಂದು ಪ್ರೀತಿ-ಗೌರವದಿಂದ ಕಾಣಬೇಕಾದರೆ ನಾನು ದೊಡ್ಡವನಿರಲೇಬೇಕು. ಆದರೆ ಶರಣರು ಹುಡುಕುವ ದೊಡ್ಡಸ್ತಿಕೆ ಸರಳತೆ, ಸದಾಚಾರ, ಸಹೃದಯತೆ, ಸಜ್ಜನಿಕೆಗಳ ಮೇಲೆ ನಿಂತಿರುತ್ತದೆ. ಏಕೆಂದರೆ ನಿಜ ಶರಣರು ಆಶೆ ಆಮಿಷಗಳಿಂದ ಯಾರನ್ನಾದರೂ ಓಲೈಸುವವರಲ್ಲ; ಅವರು ಗುಣಗ್ರಾಹಿಗಳು, ತತ್ತ್ವ ನಿಷ್ಠುರರು.

ಮೂರನೆಯ ವಾಕ್ಯದಲ್ಲಿ ಡಾ॥ ಬಸವರಾಜರು ತಿಳಿದಂತೆ ಶರಣರ ನಿಂದೆಯಿಲ್ಲ. ಒಮ್ಮೆ ಒಬ್ಬರು ಬಂದರು, ಹೇಳಿದರು "ನೀವು ಬಹಳ ದೊಡ್ಡ ಯೋಜನೆ ಹಾಕಿಕೊಂಡಿದ್ದೀರಿ. ನಾವೆಲ್ಲ ಮಧ್ಯಮ ವರ್ಗದವರು ಏನು ಕೊಟ್ಟೇವು? ಒಬ್ಬರು ದೊಡ್ಡ ಶ್ರೀಮಂತರಿದ್ದಾರೆ. ಅವರ ಮನೆಗೆ ನೀವಾಗಿ ಹೋಗಿ ಮಾತನಾಡಿದರೆ ಬಹಳಷ್ಟು ಕೊಡಬಹುದು" ಆಗ ನಾವು ಹೇಳಿದೆವು "ಅಂಥ ಯಾಚಕ ವೃತ್ತಿ ನಮಗೆ ಹಿಡಿಸದು. ಅವರು ಮನೆಗೆ ಆಮಂತ್ರಣ ಕೊಡಲಿ ಹೋಗೋಣ. ಆ ರೀತಿ ನೀವು ಪ್ರೇರಣೆ ನೀಡಿರಿ. ಅಥವಾ ನಮ್ಮ ಧ್ಯೇಯೋದ್ದೇಶಗಳನ್ನು ಅವರಿಗೆ ತಿಳಿಸುವ ಪ್ರಯತ್ನ ಮಾಡಿರಿ. ಇಲ್ಲವೇ ನಮ್ಮ ಕಾರ್ಯಕರ್ತರನ್ನು ಕರೆದುಕೊಂಡು ಹೋಗಿರಿ. ಅವರಿಗೆ ತಿಳಿಸಿ ಹೇಳುವರು" ಎಂದು ಉತ್ತರಿಸಿದೆವು. ಕೆಲವು ಜನ ಸಿರಿವಂತರನ್ನು ಓಲೈಸಿ, ಆರಡಿ ದೇಹವನ್ನು ಮೂರಡಿ ಮಾಡಿಕೊಂಡು ವಿನೀತರಾಗಿ ಅವರಿಂದ ದೇಣಿಗೆ ಪಡೆಯಲು ಯತ್ನಿಸುತ್ತಾರೆ. ಮನಸ್ಸು ಬಂದಂತೆ ಹೊಗಳುತ್ತಾರೆ. ಕೆಲವರು ಮಹಾತ್ಮರು ಎಷ್ಟೇ ಕಷ್ಟಬರಲಿ ಉಪವಾಸವಾದರು, ಇದ್ದು ದೇವರೆ ಇದು ನಿನ್ನ ಪರೀಕ್ಷೆ ಎನ್ನುವರೇ ವಿನಾ ಹೋಗಿ ಯಾಚಕರಾಗಿ ಕೈಯೊಡ್ಡರು.

ಆದರೆ ಇಂಥವರು ಮಹಾತ್ಮರ, ಗುರುವಿನ ಕಿಂಕರರಾಗಿ ಅವರ ಕರುಣ ಪ್ರಸಾದಕ್ಕಾಗಿ ದಿನಗಟ್ಟಳೆ ಕಾಯುವರು, ನಮಗೆ ಸೂಚಿಸಿದಂತೆ ಬಸವಣ್ಣನವರಿಗೂ ಯಾರೋ ಸೂಚಿಸಿರಬೇಕು " ನಿಮ್ಮ ಕಾರ್ಯ ಪೂರೈಕೆಗೆ ನೀವೇಕೆ ಹೋಗಿ ಆ ಧನಾ

ಧ್ಯರನ್ನು ಕಾಣಬಾರದು? ನಿಮ್ಮ ಬೋಧೆಯನ್ನು ಕೇಳಿದರೆ ಅವರು ಖಂಡಿತ ಕಾಣಿಕೆ ಕೊಡುವರು. ನೀವು ಸ್ವಲ್ಪ ವಿನೀತರಾಗಿ ಅವರನ್ನು ಕೇಳಿಕೊಂಡರೆ, ಸ್ತುತಿ ಪ್ರಿಯನಾದ ಆತ ಖಂಡಿತಾ ಕೊಡುವನು. " ಎಂಬ ಸಲಹೆ ಬಂದಿದೆ.

[ಕೆಲವರು ಶ್ರೀಮಂತರು ಬಲು ಸ್ತುತಿ[illegible]. ಅವರು ಕೊಟ್ಟುದನ್ನು ಮತ್ತೆ ಮತ್ತೆ ಹೊಗಳುತ್ತಲೇ ಇರಬೇಕು. ದೇಣಿಗೆ ಪಡೆದವನು ಯಾಚಕನೇ ಇರಲಿ ವಿರಕ್ತನೇ ಇರಲಿ ಅವರನ್ನು ಹೊಗಳುತ್ತಿರಲೇ ಬೇಕು. ಯಾಚಕರು ಉಬ್ಬುವಂತೆ ಹೊಗಳುವರು. ಆದರೆ ತ್ಯಾಗಿಗಳು-ವಿರಾಗಿಗಳು ಅತಿ ಎನಿಸುವಷ್ಟು ಹೊಗಳುವರೆ ? ಆಗ ಅಂಥ ಕೆಲವು ಶ್ರೀಮಂತರು ವಾಗ್ದಾನ ಮಾಡಿದ್ದನ್ನು ಪೂರ್ತಿಮಾಡರು.]

ಆಗ ಬಸವಣ್ಣನವರು ಹೇಳುತ್ತಾರೆ "ವೇಶ್ಯಾ ಸ್ತ್ರೀಯರು ಶ್ರೀಮಂತ ಪುರುಷರನ್ನು ನೀವು ಹಾಗೆ ನೀವು ಹೀಗೆ ಎಂದು ಹೊಗಳಿ ಹಣ ಸೆಳೆಯುತ್ತಾರೆ. ಹಾಗೆ ಶ್ರೀಮಂತರನ್ನೇ ಹುಡುಕಿಕೊಂಡು ಹೋಗಿ ಬೋಧೆ ಮಾಡಲು. ಅವರನ್ನು ಪ್ರಾರ್ಥಿಸಲ್ಲು,ಓಲೈಸಲು ನನಗೆ ಬರದು.ಆದರೆ ಶರಣರಿಗೆ ಮಾತ್ರ ನಾನು ವಿನೀತನಾಗುವೆ ಅವರನ್ನುಕುರಿತು ಯಾವ ಬಿಗುವೂ ನನ್ನಲ್ಲಿಲ್ಲ. ಅವರಿಗೆ ನಾನು ಅಂಜುವೆ. ಏಕೆಂದರೆ ಅವರು ಪ್ರಾಮಾಣಿಕವಾಗಿ ನಮ್ಮ ತಪ್ಪನ್ನು ತೋರಿಸುವರು. ತಿದ್ದುವರು, ಅವರು ಹಿತಚಿಂತಕರು. ಅದಕ್ಕಾಗಿ ನಾನು ಅವರನ್ನು ಆಶ್ರಯಿಸುವೆ." ಇಲ್ಲಿ ದೊಡ್ಡತನವೇನಗಿಲ್ಲ ಎಂದರೆ ಅಹಂಕಾರ, ಮದಗಳಿಲ್ಲ ಎಂದು ಅರ್ಥೈಸಬಹುದು.

ವಚನದ ಆಂತರ್ಯ ತಿಳಿಯದೆ ಯಾರೋ ಸೇರಿಸಿರಬಹುದಾದ ಪದಗಳು ಎರಡೇ ಎರಡು. ಅವೆಂದರೆ "ಅನಾಥ ನಾನಯ್ಯ" ಎಂಬುವು ಹಿಂದಿನ ವಚನ ವಾಕ್ಯಗಳಲ್ಲಿ ಆತ್ಮಸ್ಥೈರ್ಯ, ಧೃತಿಗೆಟ್ಟು ಅನ್ಯರ ಬೇಡದ ಮತಿಗೆಟ್ಟು ಅನ್ಯರ ಹೊಗಳದ ತತ್ತ್ವನಿಷ್ಠೆ ವ್ಯಕ್ತವಾಗಿ,ಶರಣರ ಬಳಗವನ್ನು ಹೊಂದಿದ ಬಸವಣ್ಣನವರಲ್ಲಿ,ಇದ್ದಕ್ಕಿಂತೆಯೇ ಖಿನ್ನತೆ ಹೇಗೆ ವ್ಯಕ್ತವಾಗುತ್ತವೆ ? 'ಅನಾಥ ನಾನಯ್ಯ' ಎಂಬಲ್ಲಿ ಮಾನಸಿಕ ಖಿನ್ನತೆ ಸ್ಪಷ್ಟವಾಗುವುದು. ಇವು ಯಾರೋ ಸೇರಿಸಿದ ಪದಗಳು. ಒಂದೋ ಅವು ಹೀಗಿರಬೇಕು "ಸನಾಥ ನಾನಯ್ಯ ಕೂಡಲ ಸಂಗಮದೇವಾ" ಇಲ್ಲವೇ ಆ ಎರಡೂ ಪದಗಳು ಅಗತ್ಯವೇ ಇಲ್ಲ. ವಚನವು "ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ ಕೂಡಲ ಸಂಗಮದೇವಾ" ಎಂದು ಮುಗಿದರೆ ಸಂಪೂರ್ಣವಾಗಿ ಅರ್ಥಪೂರ್ಣವಾಗುವುದು. ಈ ಎರಡು ಪದಗಳು ಪ್ರಕ್ಷೇಪವೇ ವಿನಾ ಇಡೀ ವಚನವು ಖೊಟ್ಟಿ ಅಲ್ಲ, ಡಾ॥ ಎಲ್. ಬಸವರಾಜರು ಅಭಿಪ್ರಾಯ ಪಟ್ಟಂತೆ. ★

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೇ ಅಯ್ಯಾ ! ಅ.ಮ.ವ.

ಯಾರ ಪಿತೂರಿಯಿಂದ ವೀರಶೈವ ಒಂದಾಗಿಲ್ಲ ?

ಕುಮಾರ ಕಕ್ಕಯ್ಯ ಪೋಳ, ಅಧ್ಯಕ್ಷರು,
ಕಲ್ಯಾಣ ನಾಡಿನ ಶರಣ ಪರಿಷತ್ತು, ಬಿಜಾಪೂರ-3

ದಿನಾಂಕ 31-5-92ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ "ವೀರಶೈವ ಸಮಾಜದ ಒಳಪಂಗಡಗಳು ಒಂದಾಗದೇ ಇರಲು, ರಾಜಕೀಯ ವ್ಯಕ್ತಿಗಳ ಪಿತೂರಿಯೂ ಒಂದು ಕಾರಣವೆಂದು, ರಂಭಾಪುರಿ ಜಗದ್ಗುರುಗಳು ಅಭಿಪ್ರಾಯ ಪಟ್ಟಿದ್ದು, ಪಂಚಾಚಾರ್ಯರೇ ವೀರಶೈವ ಧರ್ಮಸ್ಥಾಪಕರೆಂದು ಹೇಳಿದರೆ ತಪ್ಪೇನು ? " ಎಂದು ಕಾಶಿ ಜಗದ್ಗುರುಗಳು ಪ್ರಶ್ನಿಸಿದ್ದಾರೆ.

ನಿಜವಾಗಿಯೂ, ವೀರಶೈವ ಸಮಾಜದಲ್ಲಿಯ ಒಳಪಂಗಡಗಳು ಒಂದಾಗದಿರಲು ಯಾರ ಪಿತೂರಿ ಕಾರಣ ? ಮತ್ತು ವೀರಶೈವ ಧರ್ಮ ಸ್ಥಾಪಕರು ಎಂದು ಹೇಳಲ್ಪಡುವ, ಈ ಪಂಚಾಚಾರ್ಯರು ಯಾರು ? ಎಂಬ ಈ ಎರಡು ಪ್ರಶ್ನೆಗಳು ಬಹು ಮುಖ್ಯವಾದವುಗಳಾಗಿವೆ.

ಕೃತಾಯುಗ. ತ್ರೈತಾಯುಗ. ದ್ವಾಪಾರಯುಗ ಮತ್ತು ಕಲಿಯುಗಗಳಲ್ಲಿ, ಈ ಪಂಚಾಚಾರ್ಯರು, ಆಯಾ ಯುಗಗಳಲ್ಲಿ, ಆಯಾ ಜ್ಯೋತಿರ್ಲಿಂಗಗಳಲ್ಲಿ ಉದ್ಭವಿಸಿದ್ದಾರೆ ಎಂದು ಪಂಚಪೀಠದ ಜಗದ್ಗುರುಗಳು ಪ್ರತಿಪಾದಿಸುತ್ತಾರೆ. ಆದರೆ ಯುಗ ಯುಗಗಳಲ್ಲಿ ಆಗಿ ಹೋದ ಈ ಪಂಚಾಚಾರ್ಯರು, ಐತಿಹಾಸಿಕ ಪುರುಷರೋ? ಪೌರಾಣಿಕ ಪುರುಷರೋ? ಅಥವಾ ಕಾಲ್ಪನಿಕ ಪುರುಷರೋ? ಎಂಬುದು ವಿಚಾರ ಮಾಡುವಂಥ ವಿಷಯವು. ಆದರೆ ಅದೇ ಇಷ್ಟಲಿಂಗ ಧಾರಿ ವೀರಶೈವ ಧರ್ಮಸ್ಥಾಪಕನೆಂದು ಹೇಳಲ್ಪಡುವ ಬಸವಣ್ಣ-"ಹೊಲೆಗಂಡಲ್ಲದೆ ಪಿಂಡದಾಶ್ರಗೆ ನೆಲೆಯಿಲ್ಲ. ಏನು ಓದಿ ಏನು ಕೇಳಿ ಏನು ಫಲ ? ಕರ್ಣದಲೆ ಜನಿಸಿದವರುಂಟೆ ಲೋಕದೊಳೆ ?" ಎಂದು ಪ್ರಶ್ನಿಸಿದ್ದಾನೆ. ಪಂಚಾಚಾರ್ಯರ ಅಯೋನಿಜ ಹುಟ್ಟು ಕಾಲ್ಪನಿಕ ಎಂಬುದು ಸುಸ್ಪಷ್ಟವು.

ಪಂಚಾಚಾರ್ಯರ ಧರ್ಮಗ್ರಂಥವೆಂದು ಹೇಳಲ್ಪಡುವ -"ಸಿದ್ಧಾಂತ ಶಿಖಾಮಣಿ"ಯ ಒಂದು ಶ್ಲೋಕದಲ್ಲಿ-"ವರ್ಣಾಶ್ರಮಾದಿ ಧರ್ಮಾಣಾಂ ವ್ಯವಸ್ಥಾಹಿ ದ್ವಿಧಾ

ಮತಾ; ಏಕಾ ಶಿವೇನ ನಿರ್ದಿಷ್ಟಾ ಬ್ರಾಹ್ಮಣಾ ಕಥಿತಾ ಪರಾ:"–ಅಂದರೆ ಜಾತಿ ಪದ್ಧತಿ ವರ್ಣಾಶ್ರಮಗಳಲ್ಲಿ ಎರಡು ಪ್ರಕಾರಗಳು. ಒಂದು ಶಿವನು ಹೇಳಿದರೆ ಇನ್ನೊಂದನ್ನು ಬ್ರಹ್ಮ ಪ್ರತಿಪಾದಿಸಿದ್ದಾನೆ. ಅರ್ಥಾತ್ ವೈದಿಕ ಧರ್ಮದಲ್ಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಹೀಗೆ ನಾಲ್ಕು ಜಾತಿಗಳಿದ್ದರೆ, ಈ ಪಂಚಾಚಾರ್ಯರ ವೀರಶೈವದಲ್ಲಿ ಹದಿನಾರಾಣೆ, ಹನ್ನೆರಡಾಣೆ, ಎಂಟಾಣೆ ಮತ್ತು ನಾಲ್ಕಾಣೆ, ಹೀಗೆ ನಾಲ್ಕು ಶ್ರೇಣಿಕೃತ ಜಾತಿಗಳಿವೆ ಎಂದು ಇವರ ಸಿದ್ಧಾಂತವು. ಇವರ ಧರ್ಮಗ್ರಂಥವೇ ಹೀಗೆ ಹೇಳುತ್ತಿರುವಾ ?, ಇದರ ಒಳಜಾತಿಗಳು ಒಕ್ಕಟ್ಟಾಗದಿರಲು ಮತ್ತಾ? ಪಿತೂರಿ ಬೇಕು ?

ಆದರೆ ಇದೇ ವೀರಶೈವ ಧರ್ಮಸ್ಥಾಪಕನೆಂದು ಹೇಳಲ್ಪಡುವ ಬವಸಣ್ಣ–"ವಿಪ್ರಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ" ಎಂದು ಹೇಳಿದರೆ–ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ–"ಜಾತಿವಿಡಿದು ಜಂಗಮವ ಮಾಡುವ ಪಾತಕರು ನೀವು ಕೇಳಿರೋ"– ಎಂದು ಚನ್ನಬಸವಣ್ಣ ಆಹ್ವಾನಿಸಿದ್ದಾನೆ. ಬಸವಣ್ಣನ ಇಷ್ಟಲಿಂಗಧಾರಿ ವೀರಶೈವ ಜಾತ್ಯತೀತ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಬಹುದು.

ಇದೆಲ್ಲವನ್ನು ಬದಿಗಿರಿಸಿ–"ಪರಶಿವನೇ ವೀರಶೈವ ಧರ್ಮ ಸ್ಥಾಪಕ"–ಎಂದು ಒಬ್ಬ ಜಗದ್ಗುರುಗಳು ಪ್ರತಿಪಾದಿಸಿದ್ದಾರೆ. ಒಂದು ವೇಳೆ ಪರಶಿವನೇ ವೀರಶೈವ ಧರ್ಮ ಪ್ರತಿಪಾದಿಸಿದ್ದರೆ, ವೀರಶೈವ ಧರ್ಮದ ಆರಾಧ್ಯ ಕುರುಹು ಇಷ್ಟಲಿಂಗವನ್ನು ಅವನೇಕೆ ಧಾರಣ ಮಾಡಲಿಲ್ಲ ? ಅವನ ಮಡದಿ ಪಾರ್ವತಿ ಮತ್ತು ಮಕ್ಕಳಾದ ಗಣಪತಿ ಮತ್ತು ಷಣ್ಮುಖರಿಗೆ ಇಷ್ಟಲಿಂಗವನ್ನು ಏಕೆ ಕೊಡಲಿಲ್ಲ ? (ಕಲ್ಯಾಣ ಕಿರಣ ಎಪ್ರಿಲ್ ಸಂಚಿಕೆ) ಇಂಥ ಬಾಲ ಭಾಷೆಯಿಂದ ಯಾವುದೇ ಪ್ರಮೇಯ ಬಿಡಿಸಲಿಕ್ಕಾಗದು.

ಪ್ರತಿಯೊಂದು ಧರ್ಮಕ್ಕೆ ಆದರದೇ ಆದ ಒಬ್ಬ ಧರ್ಮಗುರು ಮತ್ತು ಅವನು ಕೊಟ್ಟ ಧರ್ಮಗ್ರಂಥ ಇರುತ್ತದೆ. ಉದಾಹರಣೆಗೆ, ಕ್ರೈಸ್ತ ಧರ್ಮಕ್ಕೆ, ಏಸು ಕ್ರಿಸ್ತ ಮತ್ತು ಬೈಬಲ್ ಇದೆ. ಇಸ್ಲಾಂ ಧರ್ಮಕ್ಕೆ ಪೈಗಂಬರ ಮತ್ತು ಕುರಾನ್ ಇದೆ. ಬೌದ್ಧ ಧರ್ಮಕ್ಕೆ ಬುದ್ಧ ಮತ್ತು ಧಮ್ಮಪದ ಇದೆ. ಸಿಖ್ಖ ಧರ್ಮಕ್ಕೆ ಗುರುನಾನಕ ಮತ್ತು ಅವನು ಕೊಟ್ಟ ಗ್ರಂಥಸಾಹೀಬ ಇದೆ. ಹೀಗೆ ಇಷ್ಟಲಿಂಗಧಾರಿ ವೀರಶೈವಕ್ಕೆ ಬಸವಣ್ಣ ಮತ್ತು ಅವನು ಕೊಟ್ಟ ವಚನ ಸಾಹಿತ್ಯವಿದೆ–ಎಂದು ಇಷ್ಟಲಿಂಗಧಾರಿ ವೀರಶೈವರು ಪ್ರತಿಪಾದಿಸುತ್ತಾರೆ.

ಇಲ್ಲಿ ವಿಚಾರ ಮಾಡುವ ಸಂಗತಿಯೆಂದರೆ, ಹೋದ 90 ವರ್ಷಗಳಿಂದ

ಪಂಚಾಚಾರ್ಯರ ವೀರಶೈವವನ್ನು, ಜನಗಣತಿಯಲ್ಲಿ ಒಂದು ಸ್ವತಂತ್ರ ಧರ್ಮವೆಂದು ಆದೇಕೆ ಪರಿಗಣಿಸುವದಿಲ್ಲ ? ಜನಗಣತಿಯವರು ಕೇಳುತ್ತಿರುವದು ಧರ್ಮಸ್ಥಾಪಕ ಮತ್ತು ಅವನು ಕೊಟ್ಟ ಧರ್ಮಗ್ರಂಥ ಮತ್ತು ಆ ಧರ್ಮದ ಅನುಯಾಯಿಗಳು. ಅಖಿಲ ಭಾರತ ವೀರಶೈವ ಮಹಾಸಭೆಯವರು ಇಷ್ಟೊಂದು ಹೋರಾಡಿದರೂ ಜನಗಣತಿಯಲ್ಲಿ ತಮ್ಮವನೇ ಆದ ಧರ್ಮಸ್ಥಾಪಕ ಗುರು ಮತ್ತು ಧರ್ಮಗ್ರಂಥ ಇಲ್ಲದಿರುವದೇ ಇದಕ್ಕೆ ಮೂಲ ಕಾರಣ ಎಂಬುದನ್ನು ಅಲ್ಲಗಳೆಯಲಿಕ್ಕಾಗದು. ಇದೂ ಅಲ್ಲದೆ ಇವರ ವೀರಶೈವರ ಒಳಪಂಗಡಗಳು ಯಾಕೆ ಒಕ್ಕಟ್ಟಾಗುತ್ತಿಲ್ಲ ? ಮತ್ತು ಜನಗಣತಿಯಲ್ಲಿ ಯಾಕೆ ಮನ್ನಣೆ ಸಿಗುತ್ತಿಲ್ಲ ? ಎಂಬುದನ್ನು ತಾವೇ ಪ್ರಶ್ನಿಸುತ್ತಿರುವ ಜಗದ್ಗುರುಗಳು, ತಮ್ಮ ಆತ್ಮಸಾಕ್ಷಿಯಾಗಿ ತಮ್ಮನ್ನೇ ಪ್ರಶ್ನಿಸಿಕೊಳ್ಳಬೇಕು. ಇದು ಯಾರ ಪಿತೂರಿ ? ಎಂಬುದನ್ನು ತಾವೇ ಮನಗಾಣಬೇಕು.

ಬಸವಣ್ಣನೇ ಇಷ್ಟಲಿಂಗಧಾರಿ ವೀರಶೈವ ಧರ್ಮಸ್ಥಾಪಕ, ವಚನ ಸಾಹಿತ್ಯವೇ ಧರ್ಮಗ್ರಂಥ ಎಂಬುದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡರೆ, ಇಂದೇ ಈ ಪ್ರಶ್ನೆ ತನ್ನಿಂದ ತಾನೇ ಪರಿಹಾರವಾಗುವದು. ಇಲ್ಲವಾದರೆ–"ಆ ಬಸವಣ್ಣನಿಗೂ ತಮಗೂ ಯಾವುದೇ ಸಂಬಂಧ ಇಲ್ಲಾ"–ಎಂದು,ಅವನ ಶ್ರಾದ್ಧ ಮಾಡಿ, ತಮ್ಮ ಅಡ್ಡಪಲ್ಲಕ್ಕಿ ಮತ್ತು ಸ್ಥಾವರಲಿಂಗಗಳಿಗೆ ಅಪ್ಪಿಕೊಳ್ಳಬೇಕು. ಬಸವಣ್ಣನ, ಜಾತ್ಯತೀತ, ಇಷ್ಟಲಿಂಗಧಾರಿ ವೀರಶೈವ ಧರ್ಮಕ್ಕೆ ಗುರು ವರ್ಗದ ಮುಟ್ಟುಗೋಲು ಹಾಕದೆ, ಅದು ಒಕ್ಕಟ್ಟಾಗಲು ಮತ್ತು ವಿಶ್ವಧರ್ಮವಾಗಲು ಆಸ್ಪದ ಕಲ್ಪಿಸಿಕೊಟ್ಟು ಪುಣ್ಯ ಕಟ್ಟಿಕೊಳ್ಳಬೇಕು.

ಕುಮಾರ ಕಕ್ಕಯ್ಯ ಪೋಳ

ವಿಜಾಪೂರ ಅಧ್ಯಕ್ಷರು,

31-5-1992 ಕಲ್ಯಾಣ ನಾಡಿನ ಶರಣ ಪರಿಷತ್ತು, ವಿಜಾಪೂರ-3

***

ಶರಣ ಬಂಧುಗಳೇ,

ಬೆಂಗಳೂರು ನಗರದ ರಾಷ್ಟ್ರೀಯ ಬಸವದಳದ ಸದಸ್ಯರು 'ಭಾವಸಂಗಮ' ಎಂಬ ವಧೂವರರ ಹೊಂದಾಣಿಕೆ ಕೇಂದ್ರವೊಂದನ್ನು ಆರಂಭಿಸಿ ಸುಮಾರು 6 ತಿಂಗಳುಗಳಾಯಿತು. ಈಗಾಗಲೇ ಹಲವಾರು ವಧೂವರರನ್ನು ಹೊಂದಾಣಿಕೆ ಮಾಡಿ ಪ್ರಗತಿಯಲ್ಲಿದೆ. ಬಸವ ತತ್ವಾಭಿಮಾನಿಗಳಾದ ತಾವುಗಳು 5 ರೂ. ಗಳನ್ನು ಕಳಿಸಿ ಅರ್ಜಿ ಪತ್ರಗಳನ್ನು ತರಿಸಿಕೊಂಡು ನೋಂದಣಿ ಶುಲ್ಕ 50 ರೂ. ಗಳೊಡನೆ ಅರ್ಜಿ ಪತ್ರವನ್ನು ಕಳುಹಿಸಿಕೊಡಿ. ದೂರವಾಣಿ 325335 'ಭಾವಸಂಗಮ' ವಧೂವರರ ಹೊಂದಾಣಿಕೆ ಕೇಂದ್ರ, ಬಸವಮಂಟಪ,2ನೇಬ್ಲಾಕು, ರಾಜಾಜಿನಗರ ಬೆಂಗಳೂರು-10

॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಚಿತ್ರದುರ್ಗದ ಜಗದ್ಗುರುಗಳಿಗೊಂದು ಪತ್ರ

ಚಿತ್ರದುರ್ಗದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದಂತಹ **ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ** ಮಹಾ ಸ್ವಾಮಿಗಳವರ ದಿವ್ಯ ಚರಣಾರವಿಂದಗಳಲ್ಲಿ.

ಚಾಮರಾಜನಗರದಲ್ಲಿರುವ ರೇಷ್ಮೆ ಇಲಾಖೆಯ ಅಧೀಕ್ಷಕ **ಸು. ಸದಾಶಿವಪ್ಪನು** ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ಆದಾಗಿ ಪೂಜ್ಯರೇ,

ದಿನಾಂಕ 10–5–92 ರಿಂದ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ 21ನೇ ಅಧಿವೇಶನದಲ್ಲಿ ತಾವು ಪಂಚಾಚಾರ್ಯರನ್ನು ವೀರಶೈವ ಮಹಾ ಮತಸ್ಥಾಪನಾಚಾರ್ಯರೆಂದು ಸಂಬೋಧಿಸಿರುವುದನ್ನು ಪ್ರತಿಭಟಿಸಿ ಭಾಗವಹಿಸದಿರಲು ನಿರ್ಧರಿಸಿ ಪತ್ರಿಕಾ ಪ್ರಕಟಣೆ ನೀಡಿರುವುದನ್ನು ದಿನಾಂಕಃ 10–5–92 ರ ಭಾನುವಾರದ ಪ್ರಜಾವಾಣಿ ಪತ್ರಿಕೆಯಲ್ಲಿ ಓದಿ ನನಗೆ ಅತ್ಯಂತ ಸಂತೋಷವಾಯಿತು. ಮಹಾ ಮಾನವತಾವಾದಿ ಮಂತ್ರ ಪುರುಷ ಅಪ್ಪ ಬಸವಣ್ಣನವರು ಇಲ್ಲದಿದ್ದರೆ ಗುರು-ವಿರಕ್ತ ಮಠಪೀಠಗಳು ಹಾಗೂ ವೀರಶೈವರ ಇನ್ನುಳಿದ ಮಠಪೀಠಗಳು ಅಸ್ತಿತ್ವದಲ್ಲಿ ಇರುತ್ತಿರಲಿಲ್ಲ. ಮತ್ತು ಅಪ್ಪ ಬಸವಣ್ಣನವರೇ ಈ ವೀರಶೈವ ಮಹಾಪರಂಪರೆಯ ಸಂಸ್ಥಾಪಕರೆಂದು ಇತಿಹಾಸ ಹೇಳುವ ಮಾತು ಎಂದು ತಾವು ನೀಡಿರುವ ಪತ್ರಿಕಾ ಹೇಳಿಕೆಯನ್ನು ಸಮಸ್ತ ವೀರಶೈವ ಸಮಾಜವು ಅಂಗೀಕರಿಸುವುದಲ್ಲದೇ ತಾವು ನೀಡಿದ ಈ ಹೇಳಿಕೆಯ ಪೂರ್ಣ ಪಾಠವು ವೀರಶೈವ ಸಮಾಜದ ಎಲ್ಲ ಮಠ ಪೀಠಾಧಿಕಾರಿಗಳಿಗೆ ಎಚ್ಚರಿಕೆಯಾಗಲಿ ಎಂದು ಈ ಮೂಲಕ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ತಾವು ಶೂನ್ಯ ಪೀಠಾಧೀಶರಾಗಿದ್ದು ಈ ರೀತಿಯ ಹೇಳಿಕೆಯನ್ನು ನೀಡಿರುವುದು ಸಕಾಲಿಕವೂ, ಯೋಗ್ಯವೂ, ಅತ್ಯಂತ ಸಮಂಜಸವೂ ಆಗಿದೆ ಎಂದು ಪ್ರಾಂಜಲ ಮನಸ್ಸಿನಿಂದ ಎಲ್ಲರೂ ತಮಗೆ ಹೃತ್ಪೂರ್ವಕವಾಗಿ ಶಿರಬಾಗಿ ನಮಿಸುತ್ತಾರೆ. ಬೆಳಗಾವಿಯಲ್ಲಿ ನಡೆದ ವೀರಶೈವ ಮಹಾಸಭೆಯ ಪ್ರಾಯೋಜಕರು ಮಂತ್ರ ಪುರುಷ ಶ್ರೀ, ಬಸವಣ್ಣನವರು 12 ನೇ ಶತಮಾನದಲ್ಲಿ ಸಾಧಿಸಿದ ಮಹತ್ ಕಾರ್ಯ

ಚಟುವಟಿಕೆಗಳನ್ನು ಮರೆತು ಶ್ರೀ. ಪಂಚಾಚಾರ್ಯರು ಶ್ರೀ. ವೀರಶೈವ ಮಹಾಮತ ಸ್ಥಾಪನಾಚಾರ್ಯರೆಂದು ಸಂಬೋಧಿಸಿ ಇಡೀ ವೀರಶೈವ ಜನಾಂಗಕ್ಕೆ ಅವಮಾನ ಮಾಡಿ ಶ್ರೀ. ಬಸವಣ್ಣನವರ ಹೆಸರಿಗೆ, ಇತಿಹಾಸಕ್ಕೆ ಅಪಚಾರ ಮಾಡಿರುತ್ತಾರೆ. ದಿನಾಂಕ 8–5–92 ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಆಮಂತ್ರಣ ಪತ್ರಿಕೆಯ ಹೊರ ಕವಚದ ಸುತ್ತಲೂ ಸ್ಥಾವರ ಲಿಂಗದ ಚಿತ್ರಗಳನ್ನು ಬಿಡಿಸಿದ್ದಾರೆ. ಆದರೆ ದಿನಾಂಕ 10–5--92 ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಉದ್ಘಾಟನಾ ಸಮಾರಂಭದ ವಿವರಗಳ ಹೊರ ಕವಚದಲ್ಲಿ ಕೂಡಲ ಸಂಗಮದ ಐಕ್ಯ ಸ್ಥಳದ ಚಿತ್ರಗಳನ್ನು ಬಿಡಿಸಿದ್ದಾರೆ. ಹಾಗೂ ಧರ್ಮ ಸಂಸ್ಥಾಪಕ ಅಪ್ಪ ಬಸವಣ್ಣನವರ ಚಿತ್ರವನ್ನೂ ಸಹ ಪ್ರಕಟಿಸಿದ್ದಾರೆ. ಪಟ್ಕೋಣ ಚಕ್ರದಲ್ಲಿ " ಶ್ರೀ ಗುರು ಬಸವ " ಎಂದು ಬರೆಯುವ ಬದಲು ಓಂ ನಮಃ ಶಿವಾಯ ಎಂದು ಮುದ್ರಿಸಿರುತ್ತಾರೆ. ಅಧಿವೇಶನ ನಡೆಸುವುದು ಸರಿಯೇ ಆದರೂ ಪಂಚಾಚಾರ್ಯರೇ ವೀರಶೈವ ಮತಸ್ಥಾಪನಾಚಾರ್ಯರುಗಳೆಂದು ಪ್ರಕಟಣೆ ನೀಡುವ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು? ಸ್ವಾಗತ ಸಮಿತಿಯು ಈ ನಿರ್ಧಾರ ಮಾಡಿದ್ದರೆ ವೀರಶೈವ ಸಮಾಜದ ಮೇಲೆ ತನ್ನ ನಿರ್ಧಾರ ಹೇರುವ ಅಧಿಕಾರ ಅದಕ್ಕೆ ಹೇಗೆ ಸಿಕ್ಕಿತು ಎಂದು ಅರ್ಥವಾಗುತ್ತಿಲ್ಲ. ಪಂಚಾಚಾರ್ಯರಿಂದ ವೀರಶೈವ ಮತಸ್ಥಾಪನೆ ಎಲ್ಲಾಯಿತು ? ಹೇಗಾಯಿತು? ಪಂಚಾಚಾರ್ಯರ ಉದ್ಭವ ವೈರುಧ್ಯಗಳು ಸ್ವಯಂಭುವಾಗಮದ 9ನೇ ಪಟಲ ವೀರಶೈವ ಸದಾಚಾರ ಸಂಗ್ರಹ ಸಿದ್ಧಾಂತ ಶಿಖಾಮಣಿಗಳಂತೆ ಕಲಿಯುಗದಲ್ಲಿ ರೇವಣಸಿದ್ಧನು ಕೊಲ್ಲಿಪಾಕಿ ಸೋಮೇಶ್ವರ ಲಿಂಗೋದ್ಭವ, ಬಾಳೇಹಳ್ಳಿ ಪೀಠಸ್ಥಾಪಕ; ಮರುಳ ಸಿದ್ಧನು ವಟಕ್ಷೇತ್ರ ಸಿದ್ಧೇಶ್ವರ ಲಿಂಗೋದ್ಭವ, ಉಜ್ಜಯನಿ ಪೀಠ ಸ್ಥಾಪಕ, ಏಕೋ ರಾಮನು ದಾಕ್ಷಾರಾಮ ರಾಮನಾಥ ಲಿಂಗೋದ್ಭವ. ಹಿಮವತ್ಕೇದಾರ ಪೀಠ ಸ್ಥಾಪಕ; ಪಂಡಿತಾರಾಧ್ಯನು ಸುಧಾ ಕುಂಡ ಮಲ್ಲಿಕಾರ್ಜುನ ಲಿಂಗೋದ್ಭವ. ಶ್ರೀ. ಶೈಲ ಪೀಠ ಸ್ಥಾಪಕ; ವಿಶ್ವಾರಾಧ್ಯನು ಕಾಶಿ ವಿಶ್ವೇಶ್ವರ ಲಿಂಗೋದ್ಭವ, ಕಾಶೀಪೀಠ ಸ್ಥಾಪಕರಾಗಿರುತ್ತಾರೆ; ಅಲ್ಲದೆ ವೀರಾಗಮದ 8ನೇ ಪಟಲದಲ್ಲಿ ವಿಶ್ವಾರಾಧ್ಯರ ಹೆಸರೇ ಇಲ್ಲ. ರೇವಣಸಿದ್ದನು ಶ್ರೀಶೈಲಶಾಂತ ಮಲ್ಲೇಶ್ವರ ಲಿಂಗೋದ್ಭವ, ಮರುಳ ಸಿದ್ಧನು ಶ್ರೀಶೈಲ ಕಪಿಲ ಸಿದ್ಧಮಲ್ಲೇಶ್ವರ ಲಿಂಗೋದ್ಭವ. ರಾಮದೇವನು ಶ್ರೀಶೈಲ ಭೋಗ ಮಲ್ಲೇಶ್ವರ ಲಿಂಗೋದ್ಭವ. ಪಂಡಿತಾರಾಧ್ಯನು ಶ್ರೀಶೈಲ ಚೆನ್ನಮಲ್ಲೇಶ್ವರ ಲಿಂಗೋದ್ಭವ, ಮತ್ತೊಬ್ಬ ಆಚಾರ್ಯ ವಿಶ್ವಾರಾಧ್ಯರ ಬಗ್ಗೆ ಉಲ್ಲೇಖವಿಲ್ಲ. ಆಂತರಿಕ ಪ್ರಮಾಣಗಳಂತೆ ಐತಿಹಾಸಿಕವಾಗಿ ನೋಡಿದಂತೆ ರೇವಣಸಿದ್ಧನು ಶಿರಿವಾಳ ಶಾಸನದಂತೆ (ನಿರ್ಲಜ್ಜ)ಶಾಂತಮಯ್ಯನ ಪುತ್ರ (ಶಿಷ್ಯ) ಮರುಳ ಸಿದ್ಧನು ಮರುಳ ಸಿದ್ಧ ಚಾರಿತ್ರ್ಯ ರೀತ್ಯಾ ಮೂಡೂರು ಕುಂಚಿಮೂರ

ಸೋಮಲೆಯರ ಪುತ್ರ ಏಕೋ ರಾಮನು ಏಕೋ ರಾಮೇಶ್ವರ ಪುರಾಣದಂತೆ ಪಾಂಡೆ
ನೂರು ಬ್ರಾಹ್ಮಣ ರಾಮರುದ್ರನ ಪುತ್ರ. ಪಂಡಿತಾರಾಧ್ಯನು ಆರಾಧ್ಯಚಾರಿತ್ರಗಳಂತೆ
ದಾಕ್ಷಾರಾಮ ಭೀಮ ಪಂಡಿತ-ಗೌರಾಂಬೆಯರ ಪುತ್ರ. ವಿಶ್ವಾರಾಧ್ಯನ ತಾಯಿ ತಂದೆ
ಯರ ಉಲ್ಲೇಖ ಎಲ್ಲಿಯೂ ದೊರೆತಿಲ್ಲ. ಚತುರಾಚಾರ್ಯ ಪುರಾಣದಂತೆ ಶಿವಲೆಂಕ
ಮಂಚಣ್ಣನವರೇ ಪಂಡಿತಾರಾಧ್ಯರು. ಪಂಡಿತಾರಾಧ್ಯ ಮಲ್ಲಿಕಾರ್ಜುನರವರು ಆರಾಧ್ಯ
ಚಾರಿತ್ರ್ಯಗಳಂತೆ ಶ್ರೀ ಬಸವೇಶ್ವರರ ಅನುಯಾಯಿಗಳು, ಏಕೋರಾಮರ ಶಿಷ್ಯಮಾಸ
ನು ಮಾದಾರ ಚೆನ್ನಯ್ಯನ ಕಿಂಕರ ಬಸವನು ಭೃತ್ಯ. ಚೆನ್ನಬಸವನ ಹಳೇ ಆಳು, ಮಡಿ
ವಾಳನ ಮಗ ತಾನೆಂದು ಬಿರುದನ್ನು ಕಟ್ಟುತ್ತಾನೆ. ಮರುಳ ಸಿದ್ಧನು ಹಿಂಡಿಯ
ಮರುಳ ಪಿಣ್ಯಾಕನಾಯನ್ಮಾರನೆನಿಸಿದ ರೇವಣಸಿದ್ಧನಿಂದ ಅಭಿನ್ನನಿರಬಹುದು. ಚೆಂಗಣ
ಗಿಲ ಮಂಟಪದ ರೇವಣಸಿದ್ಧನು ನಿರ್ಲಜ್ಜ ಶಾಂತಮಯ್ಯರ ಶಿಷ್ಯ. ಶಾಂತಮಯ್ಯರು
ಮೋಳಿಗೆ ಮಾರಯ್ಯರ ಶಿಷ್ಯರು. ಮೋಳಿಗೆ ಮಾರಯ್ಯ ಚೆನ್ನಬಸವಯ್ಯರ ಶಿಷ್ಯ
ಎಂಬುದು ಶೂನ್ಯ ಸಂಪಾದನೆಯಲ್ಲಿ ಚೆನ್ನಬಸವೇಶ್ವರರಿಗಾದ ಅನುಗ್ರಹದಲ್ಲಿ ಬಣ್ಣಿಸ
ಲಾಗಿದೆ. ಸಕಲ ಶರಣ ಸ್ತೋತ್ರಗಳೂ ನಿಸ್ಸಂದೇಹವಾಗಿ ತತ್ವ ಚಿದಾಕಾಶದಿಂದಲೇ
ಧರೆಗಿಳಿದು ಬಸವ ಮಹಾ ನದಿಯಲ್ಲಿ ಬೆರೆತು ಮರ್ತ್ಯರನ್ನು ಉದ್ಧರಿಸಿ ಕಲ್ಯಾಣ ಶಿವ
ಸಾಗರದಲ್ಲಿ ಸಂಗಮವಾಗಿ ಹೋಗಿವೆ. ಪಂಚಾಚಾರ್ಯರು ಚತುರಾಚಾರ್ಯರೆಂದೇ
ಪ್ರಖ್ಯಾತ ಪ್ರಸಿದ್ಧರು ಮತ್ತು ಗುರು ಬಸವಣ್ಣನವರ ಸಮಕಾಲೀನರು ಕೆಲವರಾದರೆ,
ನಂತರದವರು ಕೆಲವರು. ಈ ಪೈಕಿ ಕೇವಲ ಸಿದ್ಧರಾಗಿದ್ದು ಆಚಾರ್ಯರಾಗಿರದ
ಶ್ರೀ ರೇವಣಸಿದ್ಧರು, ಮರುಳಸಿದ್ಧರು ಅಭಿನ್ನರಾಗಿರುವ ಸಂಭಾವ್ಯತೆಯು ಬಹಳ
ವಾಗಿದೆ.ಏಕೋರಾಮರು ಅನೇಕಾಂತ ವಿರೋಧವಾಗಿ ಅಬ್ಬಲೂರಿನಲ್ಲಿ ಶಿರಪವಾಡಗೈದ
ಏಕಾಂತವಾದಿ ಶೈವ ರಾಮಯ್ಯನವರು ವೀರಶೈವ ಆಚಾರ್ಯರಾಗಿದ್ದುದಕ್ಕೆ ಏನೂ
ಆಧಾರಗಳಿಲ್ಲ. ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಮಾತ್ರವಿದ್ದು ಅವರ ಎಲ್ಲ ನಡೆ
ನುಡಿ ನೋಟಗಳಲ್ಲಿ ಬಸವಭಕ್ತಿಯು ಸಾಕಾರಗೊಂಡಿದೆ.ಬಸವ ಪೂರ್ವದಲ್ಲಿ ವೇದಾಗಮ
ಸಮ್ಮತವಾದ ಒಂದಾನೊಂದು ವೀರಶೈವ ಧರ್ಮವು ಶ್ರೀ ಮದಾಚಾರ್ಯ ಪ್ರಣೀತ
ವಾಗಿ ಪುರಾತನ ಪ್ರತಿಷ್ಠಿತವಾಗಿತ್ತು ಎನ್ನಲು ಯಾವ ಅನುಕೂಲ ಪ್ರಸ್ತಾಪ ಸಾಕ್ಷಿಗಳು
ಶಿವತತ್ವಸಾರದಲ್ಲಿ ಸಿಗುವುದಿಲ್ಲ. ಪರಿಸ್ಥಿತಿಯು ಹೀಗಿದ್ದರೂ ಸಹ ಪಂಚಾಚಾರ್ಯರು
ವೀರಶೈವ ಮತಸ್ಥಾಪಕರೆಂದು ಉದ್ಘೋಷಿಸಿದರೆ ಯಾರು ಒಪ್ಪುತ್ತಾರೆ ? ತಾವು
ಈ ಸಮಾರಂಭವನ್ನು ಈ ಕಾರಣದಿಂದ ಬಹಿಷ್ಕರಿಸಿರುವುದನ್ನು ನಮ್ಮ ವೀರಶೈವ
ಜನಾಂಗವು ಒಕ್ಕೊರಲಿನಿಂದ ಎತ್ತಿ ಹಿಡಿದಿದೆ. ಹುಟ್ಟಿನಿಂದ ಸಾಯುವ ತನಕವೂ
ಸೌದೆಯನ್ನು ಆಯ್ದುಕೊಳ್ಳುತ್ತಿದ್ದರೆ ಇನ್ನು ಅಡಿಗೆ ಮಾಡಿ ಊಟ ಮಾಡುವುದು
ಎಂದು ಎಂಬಂತಾಗಿದೆ ನಮ್ಮ ಸಮಾಜದ ಸ್ಥಿತಿ. ಈಗಲಾದರೂ ಎಲ್ಲ ಮತ ಬಾಂಧವ

ರಂಗಳು ಒಂದಾಗಿ ಅನಾದಿ ಸದ್ಭಕ್ತ ಆದಿ ಪ್ರಮಥ ಶ್ರೀ ಬಸವೇಶ್ವರರ ಮುಂದಾಳ್ತ
ನದಲ್ಲಿ 12ನೆಯ ಶತಮಾನದಲ್ಲಿ ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಸತ್ಯ
ಶರಣರಿಂದ ಕರ್ನಾಟಕ ಶಿರಸ್ಥಳವಾದ ಕಲ್ಯಾಣದಲ್ಲಿ ದ್ಯಾವಾ ಪೃಥ್ವಿ ಮಹಾ ಮಹತ್ತಿ
ನೊಳಗಾದ ಸಜ್ಜನ ಶುದ್ಧ ಶಿವಾಚಾರ ಸಂಪತ್ತು ಲೋಕ ಕಲ್ಯಾಣವಾಗಿ ಸಂಸ್ಥಾಪಿತ
ಗೊಂಡಿರುವುದನ್ನು ಗಮನಿಸಿ ನಾವು ನಾವೆಂದು ಮೇಲಾಟ ಮಾಡದೆ. ನಾವೆಲ್ಲರೂ
ಗುರುಬಸವ ಸ್ಥಾಪಿಸಿದ ವೀರಶೈವ ಧರ್ಮದವರೆಂದು ಮನ್ನಿಸಿ ಈ ಕೆಳಕಂಡ ಆರು
ಸೂತ್ರಗಳನ್ನು ಆಚರಣೆಗೆ ತರಬೇಕೆಂದು ಕೋರುವುದಲ್ಲದೆ ಈ ಒಂದು ಮಹತ್
ಕಾರ್ಯಕ್ಕೆ ಕರ್ನಾಟಕದ ಎಲ್ಲಾ ಮಠ ಪೀಠಾಧಿಕಾರಿಗಳು ಕಂಕಣಬದ್ಧರಾಗಿ ಒಮ್ಮ
ತದಿಂದ ಬಾಳುವಂತೆ ಜನಾಂಗಕ್ಕೆ ಕರೆ ಕೊಡಬೇಕೆಂದು ಕಳಕಳಿಯಿಂದ ಕೋರಿದ್ದೇನೆ.

ಧರ್ಮದ ಆರು ಸೂತ್ರಗಳು

1) ಧರ್ಮಗುರು – ವಿಶ್ವ ಗುರು ಬಸವಣ್ಣನವರು
2) ಧರ್ಮ ಸಂಹಿತೆ – ಸಮಾನತೆ ಸಾರುವ ವಚನ ಸಾಹಿತ್ಯ
3) ಧರ್ಮ ಲಾಂಛನ – ಜಾತ್ಯತೀತತೆ ಘೋಷಿಸುವ ಇಷ್ಟಲಿಂಗ
4) ಧರ್ಮ ಕ್ಷೇತ್ರ – ಬಸವಣ್ಣನವರ ಐಕ್ಯ ಸ್ಥಾನ ಕೂಡಲ ಸಂಗಮ
5) ಧರ್ಮ ಧ್ವಜ – ಬಸವ ಮಂತ್ರ ಸಹಿತ ಷಟಸ್ಥಲ ಧ್ವಜ
6) ಧರ್ಮದ ಧ್ಯೇಯ – ಜಾತಿ ವರ್ಣ ವರ್ಗ ರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣ

ತಮ್ಮ ವಿಶ್ವಾಸಿ.
(ಸು. ಸದಾಶಿವಪ್ಪ)
ಕಛೇರಿಯ ಅಧೀಕ್ಷಕರು.

ಚಾಮರಾಜನಗರ
ದಿನಾಂಕ॥ 26–5–92

ಪ್ರಣವಾರೂಢನು, ಪ್ರಣವ ಸ್ವರೂಪನು
ಪ್ರಣವ ಪ್ರಕೃತಿ ಸೌಂಜ್ಞನು
ಪ್ರಣವ ಷಡಂಗ ಸಮರಸ
ನಮ್ಮ ಕೂಡಲಂಗಮ ದೇವರು !

ಬಸವ ಶಕೆ 887, ಬಸವ ಜಯಂತಿ 5-5-1992 ರ ವರೆಗೆ ಆದ ರಾಷ್ಟ್ರೀಯ ಬಸವ ದಳಗಳ ವಿವರ.

ಕ್ರ.ಸಂಖ್ಯೆ	ಊರುಗಳು	ಕಾರ್ಯಾಧ್ಯಕ್ಷ/ಪ್ರಧಾನಕಾರ್ಯದರ್ಶಿ
1.	ಬೆಂಗಳೂರು	ಶರಣ ಎನ್. ಪುಟ್ಟರುದ್ರಪ್ಪ
2.	ಶಿವಮೊಗ್ಗ	ಶರಣೆ ಜಯಮ್ಮ ಚಂದ್ರಪ್ಪ
3.	ಬಾಗಲಕೋಟ	ಶರಣ ಬಸವರಾಜ ಚಂದ್ರಕಾಂತ ಲುಕ್
4.	ಬೀದರ	ಶರಣ ಬಸವಕುಮಾರ ಪಾಟೀಲ
5.	ವಿಜಯಪುರ (ಬೆಂಗಳೂರು)	ಶರಣ ಎಂ. ಮುನಿಯಪ್ಪ
6.	ಚಿಕ್ಕ ಮಗಳೂರು	ಶರಣ ಬಾಣೂರು ಚನ್ನಪ್ಪ
7.	ಚಿತ್ರದುರ್ಗ	ಶರಣ ಬಿ. ವಿ. ಸತ್ಯನಾರಾಯಣ ಶೆಟ್ಟರು
8.	ಮೈಸೂರು	ಶರಣೆ ಸರೋಜಾ ನಾಗರಾಜು
9.	ಕೊತ್ತೇಗಾಲ	ಶರಣ ಕೆ. ಎಸ್. ಶಿವಶಂಕರ್
10.	ಚಿಕ್ಕಬ್ಬಾಗಲು	ಶರಣ ಎಂ. ನಾಗಣ್ಣ
11.	ಸಿರ್ಸಿ (ಬೀದರ)	
12.	ರಾಸ್ತಾಪುರ	ಶರಣ ಅಯ್ಯಪ್ಪಯ್ಯ ಸ್ವಾಮಿಗಳು
13.	ಗುಲಬರ್ಗ	ಶರಣ ಶಂಕರಪ್ಪ ಗುಂ. ಮಹಾಂತಗೋಳ
14.	ಬಳ್ಳಾರಿ	ಶರಣೆ ಶಾರದಮ್ಮ ಭೀಮಲಿಂಗನಗೌಡ
15.	ಆಂಬೂರು (ತಮಿಳುನಾಡು)	ಶರಣ ಹೆಚ್. ಎಸ್. ಸಾವಳಪ್ಪ
16.	ಪಚ್ಚೂರು "	ಶರಣ ಎಸ್. ಆರ್. ನಾಗಪ್ಪ
17.	ಕಾಟೇರಿ "	ಶರಣೆ ಪುಷ್ಪ ಗುರುಬಸಪ್ಪ
18.	ಓಬಳಾಪುರ	ಶರಣ ಮಡಿವಾಳ ಬಸಯ್ಯ
19.	ಭದ್ರಾವತಿ	ಶರಣ ಜಿನಕೇರಿ ಷಡಕ್ಷರಪ್ಪ
20.	ಹಾಗರಗಾ (ಗುಲಬರ್ಗಾ)	ಶರಣ ಬಸವರಾಜ ಶಿವರಾವ ಬಿರಾದಾರ
21.	ಭಾತಂಬ್ರಾ	ಶಿವಶರಣೆ ಅನ್ನಪೂರ್ಣಮ್ಮ ಮಾತೆ
22.	ತರೀಕೆರೆ	ಶರಣ ಬಾಣೂರು ಹಿರಣ್ಣಯ್ಯ
23.	ಪುಟ್ಟಸಂದ್ರ (ತುಮಕೂರು)	ಶರಣ ಪಿ. ಎಸ್. ಗಂಗಾಧರಯ್ಯ
24.	ಹುಬ್ಬಳ್ಳಿ	ಶರಣ ಕಲ್ಯಾಣಪ್ಪ ಪರಮಾದಿ

ಕ್ರ.ಸಂಖ್ಯೆ	ಊರುಗಳು	ಕಾರ್ಯಾಧ್ಯಕ್ಷ/ಪ್ರಧಾನಕಾರ್ಯದರ್ಶಿ
25.	ಸಕಲಟ್ಟಿ (ತಮಿಳುನಾಡು)	ಶರಣ ಆರ್. ಚಂದ್ರಶೇಖರ್
26.	ತುಮಕೂರು	ಶರಣ ಜಿ. ಎಸ್. ಮಧುಡಯ್ಯ
27.	ಕುಸನೂರು (ಆಂಧ್ರ)	ಶರಣ ಶಂಕರಪ್ಪ ಪಾಟೀಲ
28.	ಗುಡಿಯಾತ್ತಂ (ತಮಿಳುನಾಡು)	ಶರಣ ಬಿ. ಎಸ್. ಜಗದೀಶ
29.	ಅಚನೂರು	ಶರಣ ಎಸ್. ಎಂ. ಹೂಗಾರ
30.	ಬೇವೂರ	ಶರಣ ಎಸ್. ಆರ್. ಹೊಸಮನಿ
31.	ಹಳ್ಳೂರು (ವಿಜಾಪೂರ)	ಶರಣ ಆರ್. ಹೆಚ್. ಸುನಗದ್
32.	ಹಳ್ಳೀಗುಡಿ (ಧಾರವಾಡ)	ಶರಣ ಸೋಮಶೇಖರ್ ವೀರಪ್ಪ ಚನ್ನಳ್ಳಿ
33.	ಶಿವಗಂಗಾ	ಶರಣ ದೊಡ್ಡಬಸಪ್ಪ
34.	ಎರಡುಕೆರೆ (ಆಂಧ್ರ)	ಶರಣ ಪಿ. ಎಂ. ಬಂಡೆಯ್ಯಸ್ವಾಮಿ
35.	ಹಿರೇಜಂತಕಲ್ (ಗಂಗಾವತಿ)	ಶರಣ ಜಿ. ಶಿವಲಿಂಗಪ್ಪ
36.	ಗುಳೇದಗುಡ್ಡ	ಶರಣ ವ್ಹಿ. ಡಿ. ತುಪ್ಪಾ
37.	ನರಗುಂದ	ಶರಣ ಬಸವರಾಜಪ್ಪ ಪಟ್ಟೇದ
38.	ಸೀ ಹಳ್ಳಿ (ಮೈಸೂರು)	ಶರಣ ಎಸ್. ಜಿ. ಪರಮೇಶ್ವರಪ್ಪ
39.	ತೊಟ್ಟವಾಡಿ ,,	ಶರಣ ಎಸ್. ಸೋಮಶೇಖರ
40.	ಕುಂಟೋಜಿ (ವಿಜಾಪೂರ)	ಶರಣ ಎಂ. ಸಿ. ಪಲ್ಯದ
41.	ಕಮಠಾಣ (ಬೀದರ)	ಶರಣ ಪ್ರಭುರಾವ ಬಿರಾದಾರ
42.	ಬೆಸ್ತರಹಳ್ಳಿ (ಆಂಧ್ರ)	ಶರಣ ಶಿವಶಂಕರಗೌಡ
43.	ಲಕ್ಕುಂಡಿ (ಗದಗ)	ಶರಣ ವೀರಣ್ಣ ಪುಂಡಪ್ಪ ಹಡಗಲಿ
44.	ಗಿರಣಚಾಳ (ಹುಬ್ಬಳ್ಳಿ)	ಶರಣ ನಾಗಪ್ಪ ವೈ. ಗಾಣಧಾಳ
45.	ಸವದತ್ತಿ	ಶರಣ ಎಸ್. ಎಲ್. ಗೌಡರ
46.	ಗನ್ನಾಯ್ಕನಹಳ್ಳಿ (ಚಿತ್ರದುರ್ಗ)	ಶರಣ ಜಿ. ಶಾಂತಯ್ಯ
47.	ರೇಣುಕಾಪುರ ,,	ಶರಣ ಅಂಜನಪ್ಪ
48.	ಚಳ್ಳಕೆರೆ ,,	ಶರಣ ಜಿ. ವಿ. ತಿಪ್ಪೇಸ್ವಾಮಿ
49.	ಭರಮಸಾಗರ ,,	ಶರಣ ಟಿ. ಕೊಟ್ರಪ್ಪ
50.	ಗಜೇಂದ್ರಗಡ (ಧಾರವಾಡ)	ಶರಣ ಅಂದಾನಪ್ಪ ಕುಂದರಗಿ
51.	ಬುಡರಕಟ್ಟೆ (ಬೆಳಗಾಂವ)	ಶರಣ ಚಂದ್ರಶೇಖರಯ್ಯ ಪೂಜಾರ್
52.	ಮುಳವಾಡ (ವಿಜಾಪೂರ)	ಶರಣ ಅಪ್ಪಣ್ಣ ಶಿವಪ್ಪ ಐಹೊಳಿ
53.	ಪುದುಪೇಟ್ಟೈ (ತಮಿಳುನಾಡು)	ಶರಣ ಪಿ. ಶಿವಲಿಂಗಪ್ಪ
54.	ದೇನಾಡು ,,	ಶರಣ ಬಿ. ಎಂ. ಮುದ್ದಪ್ಪ

ಕ್ರ.ಸಂಖ್ಯೆ	ಊರುಗಳು	ಕಾರ್ಯಾಧ್ಯಕ್ಷ/ಪ್ರಧಾನಕಾರ್ಯದರ್ಶಿ
55.	ಧಾರವಾಡ	ಶರಣ ಸಂಗನಗೌಡ ಖಾನಗೌಡ್ರು
56.	ಬೈಲಹೊಂಗಲ (ಬೆಳಗಾಂವ)	ಶರಣ ದುಂಡಪ್ಪ ಬಿ. ಕೊಳ್ಳಿ
57.	ವಣಗೇರಿ (ರಾಯಚೂರು)	ಶರಣ ಬಸನಗೌಡ ಮಾಲಿ ಪಾಟೀಲ
58.	ಸಂಕೇಶ್ವರ (ಬೆಳಗಾಂವ)	ಶರಣ ಡಾ॥ ಶಿವಗೌಡ ಪಾಟೀಲ
59.	ಲಾಡಗೇರಿ (ಬೀದರ)	ಶರಣ ಸಂಗಪ್ಪ ಶರಣಪ್ಪ ಉಪ್ಪೆ
60.	ತಿಪಟೂರು	ಶರಣ ಟಿ. ಸಿ. ಉಮೇಶಕುಮಾರ್
61.	ತಬಕದ ಹೊನ್ನಳ್ಳಿ(ಧಾರವಾಡ)	ಶರಣ ಫಕೀರಪ್ಪ ತಡಸ
62.	ಬಾದಾಮಿ (ವಿಜಾಪೂರ)	ಶರಣ ಬಸವರಾಜ ಬರಗುಂಡಿ
63.	ಜೊಳಜಗುಡ್ಡ ,,	ಶರಣ ಶಿವಮೂರ್ತೆಪ್ಪ ಹುಂಬಿ
64.	ದೊಡ್ಡಉಳ್ಳರ್ತಿ(ಚಿತ್ರದುರ್ಗ)	ಶರಣ ಎಂ. ಹನುಮಂತರೆಡ್ಡಿ
65.	ತಿಮ್ಮಪ್ಪಯ್ಯನಹಳ್ಳಿ ,,	ಶರಣ ಎ. ಹೆಚ್. ರುದ್ರಮುನಿ
66.	ದುರ್ಗಾವರ ,,	ಶರಣ ಹೆಚ್. ರಾಮಣ್ಣ
67.	ಹರವೀಗೊಂಡನಹಳ್ಳಿ ,,	ಶರಣ ವೀರಭದ್ರಪ್ಪ
68.	ಮತ್ಸಮುದ್ರ ,,	ಶರಣ ಅಂಜನಪ್ಪ
69.	ಉದಗೀರ (ಮಹಾರಾಷ್ಟ್ರ)	ಶರಣ ಅಶೋಕಸ್ವಾಮಿ
70.	ರಾಣೇಬೆನ್ನೂರು	ಶರಣ ಡಾ॥ ಚನ್ನವೀರಸ್ವಾಮಿ ಪುರಾಣಮಠ
71.	ಕುಂತೂರು (ಮೈಸೂರು)	ಶರಣ ಪಿ. ಪುಟ್ಟಸ್ವಾಮಿ
72.	ಗುಡಿಹಳ್ಳಿ (ಚಿತ್ರದುರ್ಗ)	ಶರಣ ಗೌಡರ ಚಿಕ್ಕಣ್ಣ
73.	ಮುಂಬಯಿ ,,	ಶರಣ ಉಮೇಶ ಮಂಠಾಳೆ
74.	ಗಡಹಿಂಗ್ಲಾಜ್(ಮಹಾರಾಷ್ಟ್ರ)	ಶರಣ ರಾ. ಬ. ಕಿತ್ತೂರಕರ
75.	ಹುಡಗಿ (ಬೀದರ)	ಶರಣ ಕಾಶೀನಾಥ ದಾಮಾ
76.	ನಾರಾಯಣಪುರ(ಚಿತ್ರದುರ್ಗ)	ಶರಣ ಟಿ. ಶಿವರಾಜು
77.	ಬಿಸಲೇರಿ (ಚಿಕ್ಕಮಗಳೂರು)	ಶರಣ ಜಿ. ಎಂ. ಪರಮೇಶ್ವರಪ್ಪ
78.	ಹೂವಿನಹೊಳೆ(ಚಿತ್ರದುರ್ಗ)	ಶರಣೆ ಬಿ. ಜಯಮ್ಮ
79.	ಚಿಕ್ಕಬಳ್ಳಾಪುರ	ಶರಣ ವಿಶ್ವೇಶ್ವರಯ್ಯ
80.	ಆಲಗೂರು (ವಿಜಾಪೂರ)	ಶರಣ ಡಾ॥ ವ್ಹಿ. ಬಿ. ಕುಂಬಾರ
81.	ಬಗದಲ್ (ಬೀದರ)	
82.	ದೇವದುರ್ಗ[ರಾಯಚೂರು]	ಶರಣ ರಂಗಣ್ಣ ಪಾಟೀಲ
83.	ಕಬ್ಬೇನೂರು (ಧಾರವಾಡ)	
84.	ಶೇಗುಣಸಿ (ಬೆಳಗಾಂವ)	ಶರಣ ನಾಗಪ್ಪ ಪರಪ್ಪ ಕರೆಪ್ಪನವರು

ಕ್ರ.ಸಂಖ್ಯೆ	ಊರುಗಳು	ಕಾರ್ಯಾಧ್ಯಕ್ಷ/ಪ್ರಧಾನಕಾರ್ಯದರ್ಶಿ
85.	ಸಾಗರ	ಶರಣ ಪಿ. ಇ. ಚನ್ನಬಸಪ್ಪ
86.	ನಾರಾಯಣಪುರ(ಗುಲಬರ್ಗಾ)	ಶರಣ ರಮೇಶ ಮಠಪತಿ
87.	ಮದ್ರಾಸ್	ಶರಣ ಜಿ. ಆರ್. ಬಸವರಾಜನ್
88.	ಹರವಾಳ	ಶರಣ ಎಂ. ಬಿ. ಪಾಟೀಲ
89.	ಸೊಲ್ಲಾಪುರ	ಶರಣ ಶಿವಶಂಕ್ರಪ್ಪ ಕಾಡಾದಿ
90.	ವಿಜಾಪುರ	ಶರಣ ಎಸ್. ಎಸ್. ಹಿರಂಡಗಿ
91.	ಕೊಪ್ಪಳ	ಶರಣ ವ್ಹಿ. ವ್ಹಿ. ಕೊಲ್

ಈ ವರೆಗೆ ಇಷ್ಟು ರಾಷ್ಟ್ರೀಯ ಬಸವ ದಳಗಳು ನೋಂದಣಿ ಗೊಂಡಿವೆ. ಕೆಲವರು ಅಲ್ಲಲ್ಲೇ ಸಂಘಟನೆ ಮಾಡಿಕೊಂಡು ನಡೆಸುತ್ತಿರುವುದು ಸಂತೋಷವನ್ನುಂಟು ಮಾಡಿದೆ. ಆದರೆ ಕೇಂದ್ರ ಸಂಸ್ಥೆಗೆ ನೋಂದಣಿ ಮಾಡಿ ಮಾರ್ಗದರ್ಶನ ಪಡೆಯುವುದು ಅತ್ಯಂತ ಅಗತ್ಯವಿದೆ. ನಮ್ಮ ಬಳಿ ಸ್ಥಳೀಯ ಘಟಕಗಳ ಹೆಸರು ವಿಳಾಸ ಇರದಿದ್ದರೆ ನಾವು ಸೂಚನಾ ಪತ್ರ, ಸುತ್ತೋಲೆ ಕಳಿಸಲು ಆಗದು. ಕೆಲವರು ನೋಂದಣಿ ಮಾಡಿದ್ದಾರೆ. ಆದರೆ ಕಾರ್ಯಕರ್ತರ ಪೂರ್ತಿ ವಿಳಾಸಗಳನ್ನೇ ಕೊಟ್ಟಿಲ್ಲ.

ಕೆಲವು ರಾಷ್ಟ್ರೀಯ ಬಸವ ದಳಗಳವರು ಉದಾಹರಣೆಗೆ ಬೀದರ, ಗುಲಬರ್ಗಾ, ಶಿವಮೊಗ್ಗಗಳವರು ಇನ್ನೂ ಹೆಚ್ಚಿನ ಶಾಖೆಗಳನ್ನು ತಮ್ಮ ನಗರ, ಜಿಲ್ಲೆಗಳಲ್ಲಿ ತೆರೆದು ಬಹಳ ಒಳ್ಳೆಯ ಸಂಘಟನೆ ಮಾಡಿದ್ದಾರೆ. ಆದರೆ ಆ ಶಾಖೆಗಳ ಹೆಸರು, ಕಾರ್ಯಕಾರಿ ಸಮಿತಿಯ ಸದಸ್ಯರ ವಿವರಗಳನ್ನೇ ಕಳಿಸಿಲ್ಲ. ಇದರಿಂದಾಗಿ ಸುತ್ತೋಲೆಗಳನ್ನು ಕಳಿಸಲು ಸಾಧ್ಯವಾಗದು.

ಆದ್ದರಿಂದ ಪ್ರತಿಯೊಂದು ಶಾಖೆಯು ತನ್ನ ಜಿಲ್ಲಾ ಶಾಖೆಯೊಡನೆ ಸಂಪರ್ಕವಿರಿಸಿ ಕೊಂಡರೂ, ಕೇಂದ್ರ ಸಂಸ್ಥೆಯೊಡನೆ ಸಂಪರ್ಕವಿರಿಸಿಕೊಳ್ಳಬೇಕು. ಅರ್ಜಿ ಪತ್ರ ತರಿಸಿಕೊಂಡು 25 ರೂ.ಗಳ ವಾರ್ಷಿಕ ಸದಸ್ಯತ್ವ ಕಳಿಸಿ, ಕ್ರಮಸಂಖ್ಯೆಯೊಡನೆ ಮಾನ್ಯತಾ ಪತ್ರ [Recognition Certificate] ಪಡೆಯಬೇಕು.

ವಿಶ್ವಕಲ್ಯಾಣ ಮಿಶನ್ ಸಂಸ್ಥೆಯು ಹೊರಡಿಸುವ "ಕಲ್ಯಾಣ ಕಿರಣ" ಮಾಸ ಪತ್ರಿಕೆಯ ಚಂದಾದಾರರಾಗಬೇಕು.

— ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ
ಕೂಡಲಸಂಗಮ 587115
ತಾ॥ ಹುನಗುಂದ, ಜಿ॥ ವಿಜಾಪೂರ.

ಪಂ. ಪೀ. ರ ಹುಕುಂ

"ಕೊಂಡೆಯ ಮಂಚಣ್ಣ ಗುರು ಬಸವಣ್ಣನವರ ರಾಜಕೀಯ ಜೀವನದ ಆರಂಭದಿಂದಲೂ ಮತ್ಸರಿಸಿದವನು. ಪ್ರಧಾನಿಯ ಹುದ್ದೆಯ ಮೇಲೆ ಕಣ್ಣಿಟ್ಟು ಅದಕ್ಕಾಗಿ ಮಾಡಬಾರದ್ದನ್ನು ಮಾಡಿದ. ಬಸವಣ್ಣನವರು ಗಡಿಪಾರಾದ ಮೇಲೆ ಆ ಹುದ್ದೆಯು ಸಿಕ್ಕಿತೇನೋ ನಿಜ, ಆದರೆ ಶರಣರ ವಧೆ, ಬಿಜ್ಜಳನ ಕೊಲೆ ಆಗಿ ಕಲ್ಯಾಣದಲ್ಲಿ ಉದ್ವಿಗ್ನ ಸ್ಥಿತಿಯುಂಟಾಯಿತು. ಪಾಪ! ಅಧಿಕಾರದ ಸುಖವನ್ನು ಅನುಭವಿಸಲೂ ಆಗಲಿಲ್ಲ, ಮತಿಭ್ರಾಂತನಾದ. ಆ ಮತಿಭ್ರಾಂತ ಸ್ಥಿತಿಯಲ್ಲಿ ತಾನು ಚಕ್ರವರ್ತಿಯಾದಂತೆಯೂ ಭ್ರಮಿಸಿದ. ಎಲ್ಲರೂ ತನ್ನ ಆಜ್ಞಾಧಾರಕರು ಎಂದು ಭಾವಿಸಿ. ಆದೇಶಗಳನ್ನು ಬಡಬಡಿಸಿದ". ಇದು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದಲ್ಲಿ ನೀವು ಕಾಣಬಹುದಾದ ಕೊಂಡೆಯ ಮಂಚಣ್ಣನ ನಿಲುವು.

ಯಾಕೋ ಈ ಪ್ರಸಂಗ ಬಲವಾಗಿ ನೆನಪಾಯಿತು. 29-5-1992 ರಂದು ಕೊಟ್ಟೂರಿನಲ್ಲಿ ಅಡ್ಡಪಲ್ಲಕ್ಕಿ ಹತ್ತಿ, ಇನ್ನೊಬ್ಬರ ಹೆಗಲೇರಿ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಘೋಷಿಸಿದ ಪಂಚಪೀಠಾಧೀಶ್ವರರು ಕೊಟ್ಟ ಪತ್ರಿಕಾ ಹೇಳಿಕೆ ನೋಡಿ.

ಅವರ ಎಲ್ಲ ಮಾತುಗಳನ್ನು ವಿಶ್ಲೇಷಿಸಲು ಹೋಗುವುದಿಲ್ಲ. ಎರಡು ಉಲ್ಲೇಖ ಮಾತ್ರ ಪ್ರಸ್ತಾಪಿಸುತ್ತೇನೆ.

1. "ವೀರಶೈವ ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಸಹ ಈ ಐದು ಪೀಠಗಳಲ್ಲಿ ಯಾವುದಾದರೊಂದು ಪೀಠದ ಶಿಷ್ಯನಾಗಿರಲೇಬೇಕು"
2. "ಶ್ರೀ ಜಗದ್ಗುರು ಪಂಚಾಚಾರ್ಯರು ಮತಸ್ಥಾಪಕರೆಂದೂ ಶ್ರೀ ಬಸವಾದಿ ಶರಣರು ಮತೋದ್ಧಾರಕರೆಂದು ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ಸಮಾಜಕ್ಕೆ ಸ್ಪಷ್ಟವಾಗಿ ಅಪ್ಪಣೆಯನ್ನು ಕೊಡಿಸಲಾಗಿದೆ. ಈ ನಿರ್ಣಯದ ಮೂಲಕ ಈ ಹಿಂದಿನ ಎಲ್ಲ ವಾದ ವಿವಾದಗಳಿಗೆ ತೆರೆಎಳೆದಂತಾಗಿದೆ" ಈ ಹೇಳಿಕೆಗೆ ಐವರೂ ಸಹಿ ಮಾಡಿದ್ದಾರೆ.

ಇವರ 'ಹುಕಂ'ದ ಶೈಲಿ ನೋಡಿದರೆ ತಮಗೆ ತಾವೇ ಇಡೀ ಸಮಾಜಕ್ಕೆ ಆದೇಶಕರೆಂದು ಭಾವಿಸಿದ್ದಾರೆ. ಇದು ಕೊಂಡೆಯ ಮಂಚಣ್ಣನು ಮತಿಭ್ರಾಂತ ಸ್ಥಿತಿಯಲ್ಲಿ ತಾನೇ ಚಕ್ರವರ್ತಿ ಎಂದು ಆದೇಶ ನೀಡಿದಂತಾಗಿದೆ. ಇವರ ಮೂಢಸಾಮ್ರಾಜ್ಯ ಇಪ್ಪತ್ತನೆಯ ಶತಮಾನದಲ್ಲಿ ತಲೆ ಎತ್ತಿ ಸ್ವಲ್ಪ ಕಾಲ ಪಲ್ಲಕ್ಕಿಯಲ್ಲಿ ಮೆರೆದು ಈಗ ಕ್ಷೀಣಿಸುವ ಕಾಲ ಬಂದಿದೆ.

"ನಮ್ಮ ಜಾತಿಯ ಗುರುಗಳು ಆದ್ದರಿಂದ ಅವರನ್ನು ಹೊತ್ತು ಮೆರೆಸಬೇಕು." ಎಂಬ ಅಂಧಅಭಿಮಾನದಿಂದ ಕೆಲವರು ಹೊತ್ತು ಮೆರಸುತ್ತಿರುವರಾದರೂ, ಅವರಲ್ಲಿ ವಿದ್ಯಾವಂತರೂ ವಿಚಾರಶೀಲರೂ ಹುಟ್ಟಿ ಚಿಂತನೆ ಮಾಡುವ ಕಾಲ ಬರುತ್ತಿದೆ; ಮನೋವೈಜ್ಞಾನಿಕವಾಗಿ ನೋಡಿದಾಗ ಕೆಲವರು ಅಯ್ಯನವರು ಮತ್ತು ಕೆಲವು ಬಣಜಿಗರನ್ನು ಬಿಟ್ಟರೆ, ಬೇರೆಯವರು ಒಂದು ವ್ಯವಹಾರಕ್ಕೆ ಕಟ್ಟುಬಿದ್ದು ಹೊರಲು ನೆರವಾಗುತ್ತಾರೆ, ಅಯ್ಯನವರ ವರ್ಗದಲ್ಲಿ ಬಸವ ವಾದಿಗಳು-ಆಚಾರ್ಯವಾದಿಗಳು ಎಂಬ ಎರಡು ಗುಂಪುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು: ಬಸವ ತತ್ತ್ವವಾದಿ ಅಯ್ಯನವರು ಖಂಡಿತಾ ಈ ಆಚಾರ್ಯವಾದಿಗಳನ್ನು ಬಸವ ಪೂರ್ವದವರೆಂದು ಮನ್ನಿಸುವುದಿಲ್ಲ. ಏನೋ ಜಾತಿವಾದಿಗಳಾಗಿ ತಮ್ಮ ಪವಿತ್ರ ಹುಟ್ಟಿನ ವಾದಕ್ಕೆ ಮಾನ್ಯತೆ ದೊರಕಿಸಿಕೊಳ್ಳಲು ಬಸವ ತತ್ತ್ವವಾದಿ ಅಯ್ಯನವರೂ ಆಚಾರ್ಯವಾದಿಗಳಾಗಿ ಪಕ್ಷಾಂತರ ಮಾಡುತ್ತಾರೆ (ಭವಿಷ್ಯದಲ್ಲಿ) ಎಂದು ಕೊಳ್ಳುವಾ. ಅಷ್ಟಾದರೂ ಉಳಿದ ಸಮಾಜದ ಗಾತ್ರದೃಷ್ಟಿಯಿಂದ ಅವರು ಅಲ್ಪಸಂಖ್ಯಾತರೆ.

ಇನ್ನು ಭಕ್ತವರ್ಗಕ್ಕೆ ಬಂದರೆ ಬಹುಪಾಲು ಜನರೆಲ್ಲ ಬಸವ ತತ್ತ್ವ ವಾದಿಗಳೆ. ಗೌಡರು, ಸಾದರು, ನೊಳಂಬರು, ಸಜ್ಜನರು, ಶಿವಸಿಂಪಿ, ಪಟ್ಟಸಾಲಿ, ಕುಂಬಾರರು, ಮುಂತಾದವರು ಎಂದೂ ಪಂಚಾಚಾರ್ಯರ ಪಾಳೆಯ ಸೇರಲಾರರು. ಸೇರಿದರೋ ಇವರೆಲ್ಲ ಅವರ ಸಂವಿಧಾನದ ಪ್ರಕಾರ ಲಿಂಗೀಶೂದ್ರರೆ. ಧರ್ಮಪಿತ ಬಸವಣ್ಣನ ಧರ್ಮವನ್ನುಆಶ್ರಯಿಸಿ, ಅಂಗದ ಮೇಲೆ ಲಿಂಗವಿದ್ದವನು ಸಂಗಮನಾಥ ಎಂಬ ತತ್ತ್ವದ ಬೆಂಬಳಿವಿಡಿದು ಗೌರವಿಸಲ್ಪಟ್ಟು, ಶರಣ ಎನ್ನಿಸಿಕೊಳ್ಳುವ ಗೌರವದ ಸ್ಥಾನ ಇವರಿಗೆ ಬೇಕೊ ? ಅಥವಾ ಅವರನ್ನು ಹೆಗಲು ದಣಿಯುವಂತೆ ಹೊತ್ತು 'ಲಿಂಗೀ ಶೂದ್ರ' ಎನ್ನಿಸಿಕೊಳ್ಳುವ ದುರಾದೃಷ್ಟ ಬೇಕೋ ? ಆದ್ದರಿಂದ ಇಂದು ಕೆಲವರು ಕೆಲವಾರು ಲಾಭಗಳಿಗಾಗಿ ಪಲ್ಲಕ್ಕಿ ಹೊರುತ್ತಿದ್ದರೂ ಅವರ ಮುಂದಿನ ಜನಾಂಗವಾದರೂ ಇದನ್ನು ಪ್ರಶ್ನಿಸುವ ಕಾಲ ಬರುವುದು. ಶತಮಾನಗಳ ಕಾಲದಿಂದ ತುಳಿಸಿಕೊಂಡ ದಲಿತರೇ ಇಂದು ಜೀವಂತಗೊಂಡು ಏಳುತ್ತಿದ್ದಾರೆ ಎಂದರೆ, ಈ ಶತಮಾನದಲ್ಲಿ ಹೊರಲು ಆರಂಭಿಸಿದ ಜನ ಏಕೆ ಏಳಲಾರರು ? ಇವರು ದಲಿತರಿಗಿಂತ ಮೂಢರೇ, ಕಡೆಯೆ ? ಅಂದಾಗ ಪತ್ರಿಕೆಗಳ ಜಾಹಿರಾತು, ಸುದ್ದಿಗಳ ಮೂಲಕ ಅಟ್ಟಹಾಸ ಪ್ರದರ್ಶಿಸುತ್ತಿರುವ ಕುಸಿಯುತ್ತಿರುವ, ಸಾಮ್ರಾಜ್ಯದ ಈ ಪೀಠಾಧೀಶರು ಇಡೀ ಸಮಾಜಕ್ಕೆ ಹುಕುಂ ಹೊರಡಿಸುವುದು ಹಾಸ್ಯಾಸ್ಪದವಲ್ಲವೆ ? ಈಗ ನಮಗೇನೋ ಅಲ್ಪಸ್ವಲ್ಪ ತಿಳುವಳಿಕೆ ಬಂದಿದೆ, ಬಾಲ್ಯದಿಂದಲೂ ಗಮನಿಸಿದರೂ ನಮ್ಮ ಹಿರಿಯರುಗಳಾರೂ ಪಂಚಪೀಠಗಳಲ್ಲಿ ಒಂದು ಪೀಠಕ್ಕೆ ನಾವು ಸಂಬಂಧ ಪಟ್ಟವರು ಎಂದು ಹೇಳುತ್ತಿದ್ದ ನೆನಪಿಲ್ಲ. ನಮ್ಮ ನೆನಪಿನಂಗಳದಲ್ಲಿ ಉಳಿದ ಒಂದು

ಹಿರಿಯ ಜೀವ ರುದ್ರಮ್ಮಜ್ಜಿ ಇದ್ದರು. ವಿದ್ಯೆ ಇರಲಿಲ್ಲ. ಹೇಳಿಕೊಟ್ಟರೆ ಕಷ್ಟಪಟ್ಟು "ಓನಮೋಶಿವಾಯೆ" ಎನ್ನುತ್ತಿದ್ದರು. ಆದರೆ ಕೂತಾಗ ನಿಂತಾಗ ಏಳುವಾಗ ಬೀಳು-ವಾಗ "ಬಸವಾ ಬಸವಾ" ಎನ್ನುತ್ತಿದ್ದರು. ನಾವು "ಅಜ್ಜಿ ನಿನಗೆ ಷಡಕ್ಷರ ಮಂತ್ರವೇ ಬರಲ್ಲ"ಎಂದು ತಮಾಷೆ ಮಾಡಿದರೆ "ನಂಗೆ ಬಸವ ಮಂತ್ರವೇ ಸಾಕು, ಅದೇ ಸರ್ವಸ್ವ" ಎಂದೆನ್ನುತ್ತಾ ನೆನಪಿನ ಸುರುಳಿ ಬಿಚ್ಚಿ "ಒಮ್ಮೆ ತುಂಬು ಗರ್ಭಿಣಿ ಇದ್ದಾಗ ಕೊಟ್ಟೂರು ಬಸವಣ್ಣನ ಜಾತ್ರೆಗೆ ಹೋಗಿದ್ದೆವು. ಬರುವಾಗ ಗಾಡಿ ಚಕ್ರ ಕಳಚಿತು. ಆಗ ನಾನು "ಬಸವಾ ಬಸವಾ ರಕ್ಷಿಸು" ಎಂದೆ ಯಾರೋ ಬಿದ್ದ ಚಕ್ರದ ಬದಲು ಹೆಗಲುಕೊಟ್ಟು ನಿಲ್ಲಿಸಿದಂತಾಯಿತು. ಮತ್ತೆ ಎಲ್ಲರೂ ಇಳಿದು ಸರಿಪಡಿಸಿದರು. ಆದಕ್ಕೆ ನಿಮ್ಮ ಅಪ್ಪನಿಗೆ ಬಸಪ್ಪ ಅಂತ ಹೆಸರಿಟ್ಟಿದ್ದು. ನಿಮಗೇನು ಗೊತ್ತು ಬಸವಣ್ಣನ ಮಹಿಮೆ. ನೀವೆಲ್ಲ ನಾಕು ಅಕ್ಷರ ಕಲಿತವರು "

ಆ ಮಾತುಗಳು ಬಾಲ್ಯದಲ್ಲಿ ಅಚ್ಚೊತ್ತಿದವು. ನಿಜ, ಬಸವಣ್ಣನ ಮಹಿಮೆ ಆ ವಿದ್ಯೆ ಬರದ ಅಜ್ಜಿಗೆ ಗೊತ್ತಿದಷ್ಟು ತಿಳಿಯಬೇಕಾದರೆ ನಾವು 1970 ರ ವರೆಗೆ ಕಾಯಬೇಕಾಯಿತು. [ಇನ್ನು ಕೆಲವರಿಗೆ ಬಸವಣ್ಣನವರು ನಮ್ಮ ಧರ್ಮದ ಆದ್ಯ, ಮಂತ್ರಪುರುಷ ಎಂಬುದು ಇನ್ನೂ ತಿಳಿದಿಲ್ಲ.] ಅಂದಾಗ ಈ ಪಂಚಪೀಠದವರು ಎಲ್ಲರ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಕೃತಕ ಸಂಬಂಧ ಕಲ್ಪಿಸಿದರೆ ಒಪ್ಪಿಕೊಳ್ಳುವವರಾರು ? ತಮಗೆ ತಾವೇ ಬೀಗಿಕೊಳ್ಳಬೇಕು ಅಷ್ಟೆ.

ಒಂದು ಸ್ವಾರಸ್ಯಕರ ಪ್ರಸಂಗ. ಒಂದು ದಿವಸ ಓರ್ವ ಪತಿ-ಪತ್ನಿಯರು ಬಂದರು. "ನಾವು ಪಂಚಮಸಾಲಿಯವರು; ಪಂಚಾಚಾರದವರು ಅಂತಾರಂತೆ. ನಮ್ಮ ಮಗಳಿಗೆ ವರ ನೋಡಿದ್ದೇವೆ. ಅವರು ಸಜ್ಜನ ಗಾಣಿಗರು. ಹುಡುಗ ವಿದ್ಯಾವಂತ ಉತ್ತಮ. ಕೊಡಬೇಕು ಅಂತೀವಿ. ಆದರೆ ಕೆಲವರು ಪಂಚಮಸಾಲೆಯವರು ಅಂತಾರೆ ನಾವು ಶ್ರೇಷ್ಟರು; ಅವರ ಕೂಡ ಬೀಗತನ ಮಾಡಬಾರದು, ಸಜ್ಜನರಾದ ಬೀಗರು ಅಂತಾರೆ. ನಿಮ್ಮ ಹುಡುಗೀನ ನಾವು ತಗೋಳಲ್ಲ. ಪಂಚಾಚಾರದವರು ಪಂಚಪೀಠದ ಅನುಯಾಯಿಗಳು. ನಾವು ಅವರನ್ನು ಮನ್ನಿಸೋದಿಲ್ಲ." ಈ ಎಲ್ಲ ಮಾತುಗಳನ್ನು ಕೇಳಿ ತಲೆಕೆಡುವುದೊಂದೇ ಬಾಕಿ. ಎಲ್ಲ ಅಂಥ ಅಸಂಬದ್ಧ ಮಾತುಗಳೆ. ಅಂಗದ ಮೇಲೆ ಲಿಂಗಧಾರಣೆ ಮಾಡಿಕೊಂಡವರೆಲ್ಲರೂ ಸಮಾನರು ಅಂದಾಗ ನಾವು ಶ್ರೇಷ್ಟ-ನೀವು ಶ್ರೇಷ್ಟ ಎನ್ನುವುದೇ ಅರ್ಥರಹಿತ. ಅದಕ್ಕಿಂತ ಹೆಚ್ಚು, ಪಂಚಾಚಾರದವರೆಲ್ಲ ಪಂಚಾಚಾರ್ಯವಾದಿಗಳು ಎಂಬುದಂತೂ ಪೂರ್ಣ ಅಸಂಬದ್ಧ, ಲಿಂಗಾಯತ ಸಮಾಜದಲ್ಲಿ ಸಂಖ್ಯೆ ಮತ್ತು ಆರ್ಥಿಕ ಸ್ಥಾನಮಾನದಲ್ಲಿ ಪಂಚಮಸಾಲೆಯವರು ಬಲಿಷ್ಠರಾಗಿರುವುದರಿಂದ ಪಂಚಪೀಠಾಧೀಶ್ವರರು ತಮಗೆ ಒಂದಾದರೂ

ನೆಲೆ ಕಾಲೂರಲು ಬೇಕಲ್ಲ ಎಂದು ಈ ಗಾಳಿಯನ್ನು ಹಾಯಬಿಟ್ಟಿದ್ದಾರೆ: ತತ್ತ್ವವಾದ ದಿಂದ, ಮಾನವೀಯ ಕಾರ್ಯಗಳಿಂದ ಜನರನ್ನು ಆಕರ್ಷಿಸಲಾರದ ಇವರಿಗೆ 'ಪಂಚಾಚಾರದವರು' ಎಂಬ ಪ್ರಾಸಬದ್ಧ ಪದ ಸಿಕ್ಕಿದ್ದೇ ಸಾಕಾಯಿತು: ಪಟ್ಟಾಗಿ ಹಿಡಿದರು. ಆದರೆ ಇವರಿಬ್ಬರ ಮಧ್ಯೆ ಯಾವ ಬಾದರಾಯಣ ಸಂಬಂಧವೂ ಇಲ್ಲ.

ಲಿಂಗಾಯತ ಸಮಾಜದಲ್ಲಿ ಸದಾಚಾರದವರು, ಶಿವಾಚಾರದವರು, ಗಣಾಚಾರದವರು, ಪಂಚಾಚಾರದವರು ಎಂಬ ಪದಗಳು ರೂಢಿಯಲ್ಲಿ ಬಂದಿವೆ. ಇವೆಲ್ಲ ತಾತ್ತ್ವಿಕ ಪದಗಳು. ಸದಾಚಾರದವರು ಎಂದರೆ ಕಾಯಕ ತತ್ತ್ವದಲ್ಲಿ ಹೆಚ್ಚು ಶ್ರದ್ಧೆಯಿಟ್ಟವರು, ಶಿವಾಚಾರದವರು ಎಂದರೆ ಸಮತಾವಾದದಲ್ಲಿ ನಂಬಿಕೆ ಇಟ್ಟವರು, ಗಣಾಚಾರದವರು ಎಂದರೆ ಸಮಾಜ–ಧರ್ಮಗಳ ಹಿತರಕ್ಷಣೆಗೆ ಹೋರಾಡುವವರು, ಪಂಚಾಚಾರದವರು ಎಂದರೆ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಎಂಬ ಐದು ಆಚಾರ ಅಳವಡಿಸಿಕೊಂಡವರು.

[ಈಗಿನ ಪಂಚಾಚಾರದ ಬಹುಪಾಲು ಜನರಲ್ಲಿ ಈ 5 ತತ್ತ್ವಗಳು ಕಾಣಬರವೆ ಎಲ್ಲರಿಗಿಂತಲೂ ಮುಂದಿವಂತರಾಗಿರುವುದು ಒಂದು ವಿಪರ್ಯಾಸ.] ಪಂಚಪೀಠಾಧೀಶರಲ್ಲಿ ಈ ಐದು ಆಚಾರಗಳಲ್ಲಿ ಒಂದೂ ಸಹಿತ ಆಚರಣೆಯಲ್ಲಿಲ್ಲ ಎಂಬುದು ಜಗಜ್ಜಾಹೀರಾಗಿದೆ.

ಲಿಂಗಾಚಾರ ಎಂದರೆ **ಏಕದೇವೋಪಾಸನೆ.** ಪಂ. ಪೀ ರಲ್ಲಿ ಏಕದೇವನಿಷ್ಠೆಯಿಲ್ಲ; ಅವರು ಬಹುದೇವತೋಪಾಸಕರು.

ಸದಾಚಾರ ಎಂದರೆ **ಕಾಯಕ-ದಾಸೋಹ.** ಈ ಎರಡೂ ತತ್ತ್ವಗಳು ಅವರಲ್ಲಿ ಎಂದೋ ಹೇಳ ಹೆಸರಿಲ್ಲದೆ ಪಲಾಯನಗೈದಿವೆ. ವಿರಕ್ತ ಮಠಾಧೀಶರು (ಮೊದಲನೆಯ ಆಚಾರದಲ್ಲಿ ಸೋತಿದ್ದರೂ) ಈ ತತ್ತ್ವದ ವಿಷಯದಲ್ಲಿ ತತ್ತ್ವದ ಪಾಲಕರಾಗಿ ಕೀರ್ತಿವಂತರಾಗಿದ್ದಾರೆ, ಸಮಾಜದ ಪಾಲಕರಾಗಿ ದುಡಿದಿದ್ದಾರೆ. ಪಂಚಪೀಠಾಧೀಶರಿಗೆ ಅಡ್ಡಪಲ್ಲಕ್ಕಿ ಹತ್ತುವುದೇ ಕಾಯಕ, ಸಮಾಜದಲ್ಲಿ ಗೊಂದಲ ಎಬ್ಬಿಸುವುದೇ ಮಹಾದಾಸೋಹ. ಬಿ. ಜೆ. ಪಿಯವರು ಹೇಗೆ ರಾಮಮಂದಿರ ನಿರ್ಮಾಣವಾಗಿಬಿಟ್ಟರೆ ದೊಡ್ಡಪುರುಷಾರ್ಥ ಸಾಧನೆಯಾಗಿ ಬಿಡುವುದು ಎಂಬ ಅಚಲ ವಿಶ್ವಾಸ ಹೊಂದಿರುವರೋ, ಹಾಗೆ ಇವರು ಅಡ್ಡಪಲ್ಲಕ್ಕಿಯ ಒಂದಂಶದ ಕಾರ್ಯಕ್ರಮದಿಂದಲೇ ಮಾನವ ಜನಾಂಗದ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ನಂಬಿದ್ದಾರೆ.

ಶಿವಾಚಾರ ಎಂದರೆ **ಸಮತಾವಾದ.** ಇದಕ್ಕೂ ಪಂ. ಪೀ.ರಿಗೂ ಎಣ್ಣೆ-ಸೀಗೆಕಾಯಿ ಸಂಬಂಧ. ಲಿಂಗಾಯತ ಸಮಾಜದಲ್ಲಿ 7 ಶತಮಾನಗಳ ಕಾಲ ಇರದಿದ್ದ ಲಿಂಗಿಬ್ರಾಹ್ಮಣ

ಲಿಂಗೀಕ್ಷತ್ರಿಯ, ಲಿಂಗೀವೈಶ್ಯ, ಲಿಂಗೀ ಶೂದ್ರರನ್ನು ಗುರುತಿಸಿದ ಮಹಾನುಭಾವರು. ಭಕ್ತ–ಮಹೇಶ್ವರ ಎಂಬ ಜಾತಿ ಆಧಾರಿತ ವರ್ಗಗಳನ್ನು ಸೃಷ್ಟಿಸಿದ ನವಬ್ರಹ್ಮರು.

ಗಣಾಚಾರ ಎಂದರೆ ಮೇಲೆ ಹೇಳಿದ ತತ್ತ್ವಗಳನ್ನು ನಿಷ್ಠೆಯಿಂದ ಅನುಷ್ಠಾನ ಮಾಡುವುದರೊಡನೆ ಅವುಗಳ ಪಾಲನೆ, ಪ್ರತಿಷ್ಠಾಪನೆಗಾಗಿ ಹೋರಾಡುವ ಛಲ. ಈ ತತ್ತ್ವಗಳನ್ನೇ ಪಾಲಿಸುವುದಿಲ್ಲ ಎಂದ ಬಳಿಕ ಅವುಗಳ ಅನುಷ್ಠಾನಕ್ಕೆ ಹೋರಾಡುವ ಮನೋಭಾವ ಇವರಲ್ಲಿ ಎಲ್ಲಿಂದ ಬರಬೇಕು ?

ಭೃತ್ಯಾಚಾರ ಎಂದರೆ ಸೇವಾಭಾವನೆ, ಸಮಷ್ಟಿಯು ಹಿರಿದು, ವ್ಯಕ್ತಿ ಕಿರಿಯ ಎಂದು ವ್ಯಕ್ತಿ ದಾಸೋಹಂ ಭಾವದಿಂದ ಸಮಷ್ಟಿಯ ಸೇವೆ ಮಾಡುವುದೇ ಭೃತ್ಯಾಚಾರ. ಅಡ್ಡಪಲಕ್ಕಿ ಹತ್ತಿ, ಆಡಂಬರದ ವೇಷ ತೊಟ್ಟು, ಬಂಗಾರ ವಜ್ರ ವೈಢೂರ್ಯಗಳನ್ನು ಧರಿಸಿ ಭೃತ್ಯಾಚಾರದ ಮಾತು ಆಡಿದರೆ ಅದು ನಗೆಪಾಟಲಾದೀತಾದ ಕಾರಣ, ಅವರಿಗೆ ಭೃತ್ಯಾಚಾರದ ಗೊಡವೆಯೇ ಬೇಡ.

ಹೀಗೆ ಪಂಚಆಚಾರಗಳ ಸೋಂಕು ಸಹ ಬಡಿಯದ ಪಂ. ಪೀ. ರು ಪಂಚಾಚಾರ ಜನಾಂಗದವರಿಗೆ ಹೇಗೆ ಗುರುವಾಗಬಲ್ಲರು ? ಅವರಿಗೆ ಇವರು ಹೇಗೆ ನಡೆದು ಕೊಳ್ಳಲು ಸಾಧ್ಯ ? ಆದ್ದರಿಂದ ಇಡೀ ಸಮಾಜವೇ ಅವರ 5 ಪೀಠಗಳ ಕೆಳಗೆ ಬರಬೇಕೆಂಬ ಹುಚ್ಚು ಆಸೆಯನ್ನು ಅವರು ಬಿಡುವುದೊಳ್ಳಿತು, ಮತ್ತು ಅಂಥ ಹೇಳಿಕೆಗಳನ್ನು ನೀಡುವುದನ್ನೂ ನಿಲ್ಲಿಸುವುದೊಳ್ಳಿತು.

"ಉತ್ತರಾರ್ಧ--ಎರಡನೇ ಹೇಳಿಕೆ"

ಒಬ್ಬ ಮತಿಭ್ರಾಂತ ವಿರಹಿ ಇರುತ್ತಾನೆ. ಅವನು ಕುರೂಪಿ, ಧನ ಹೀನ. ಒಬ್ಬ ಸುಂದರವಾದ ಶ್ರೀಮಂತರ ಮಗಳನ್ನು ಕಂಡು "ನಾನವಳನ್ನು ಪ್ರೇಮಿಸಿದ್ದೇನೆ, ಮದುವೆ ಮಾಡಿರಿ.ಅವಳು ನನ್ನನ್ನು ಪ್ರೇಮಿಸಿದ್ದಾಳೆ" ಎಂದು ಬಡಬಡಿಸುತ್ತ ಊರೆಲ್ಲ ತಿರುಗುತ್ತಾನೆ. ಹುಡುಗಿಯ ತಂದೆಗೆ ಆಶ್ಚರ್ಯವಾಗಿ ಮಗಳನ್ನು ಕೇಳಿದರೆ 'ಈತ ಯಾರೊ ನಾನೆಂದೂ ಕಾಣೆ.' ಎನ್ನುತ್ತಾಳೆ. ಅವಳನ್ನು ಮದುವೆಯಾದರೆ ತನ್ನ ದಾರಿದ್ರ್ಯ ಕಳೆದು ಸಿರಿವಂತನಾಗುತ್ತೇನೆ ಎಂಬ ದುರಾಲೋಚನೆ ಅವನದು. ಪಂ .ಪಿ. ರ ನಿರ್ಣಯ ಬಸವಣ್ಣ ಮತೋದ್ಧಾರಕ ಎಂಬುದು ಹೀಗೇ ಇದೆ. ಆಧುನಿಕ ಜಗತ್ತಿನ ವಿಚಾರಸರಣಿಗೆ ಅತ್ಯಂತ ಮೌಲಿಕ ಬಸವ ತತ್ತ್ವ. ವಚನ ಸಾಹಿತ್ಯ ಸಿರಿವಂತಿಕೆಯುಳ್ಳ ಬಸವಣ್ಣನವರನ್ನು, ತಮ್ಮ ಕಾಲ್ಪನಿಕ ಮತಸಿದ್ಧಾಂತದ ದಾರಿದ್ರ್ಯ ಕಳೆದುಕೊಳ್ಳಲು ಸೇರಿಸಿಕೊಳ್ಳುವ ಕೀಳು ಹಂಬಲ. ಬಸವಣ್ಣನವರನ್ನು ಕೇಳಿದರೆ (ಇನ್ನಿತರ ಸಮಕಾಲೀನ ಶರಣರನ್ನು ಕೇಳಿದರೆ) ಅವರು ಕೃತಯುಗದ ಪಂಚಾಚಾರ್ಯರನ್ನು ಪ್ರೇಮಿಸಿದ ದಾಖಲೆ ಇಲ್ಲ. ಮಾತ್ರವಲ್ಲ ಇವರ್ಯಾರೋ ನಮಗೆ ಗೊತ್ತೇಇಲ್ಲ ಎನ್ನುವರು.

ಆದ್ದರಿಂದ ಪ್ರಾಮಾಣಿಕರು, ಛಲವಂತರು, ಸ್ವಾಭಿಮಾನಿಗಳೂ ಇವರಾದರೆ ಗುರು ಬಸವಣ್ಣನವರನ್ನು ಸಂಪೂರ್ಣವಾಗಿ ಮರೆತು ತಮ್ಮ ತತ್ತ್ವ ಸಿದ್ಧಾಂತಗಳು (ಇವರು ಹೇಳಿಕೊಳ್ಳುವಂತೆ) ಸುಪ್ರಭೇದಾಗಮ, ಸ್ವಯಂಭುವಾಗಮ, ಸಿದ್ಧಾಂತ ಶಿಖಾಮಣಿ, ವೀರಶೈವ ಸದಾಚಾರ ಸಂಗ್ರಹ ಮುಂತಾದ ಗ್ರಂಥಗಳ ಬಲದಿಂದ ಪ್ರತಿಪಾದಿಸಿ ಕೊಳ್ಳಲಿ. ವಚನ ಸಾಹಿತ್ಯದ ಪರಾವಲಂಬನೆ ಬೇಡ. ಈ ಪಾರ್ಟನರ್‌ಷಿಪ್ ಬಿಸಿನೆಸ್- 'ಪಂಚಾಚಾರ್ಯರು ಮತಸ್ಥಾಪಕರು ಬಸವಣ್ಣನವರು ಮತೋದ್ಧಾರಕರು' ಎಂಬುದು ನಮಗೆ ಸುತಾರಾಂ ಬೇಕಾಗಿಲ್ಲ. ಪಂಚಾಚಾರ್ಯರು–ಆಗಮಗಳು ಇವುಗಳ ಮೇಲೆ ಪಂ. ಪೀ. ರು ತಮ್ಮ ಮತವನ್ನು ಪ್ರತಿಪಾದಿಸಲಿ. ಗುರುಬಸವಣ್ಣ-ವಚನ ಸಾಹಿತ್ಯದ ಮೇಲೆ ನಮ್ಮ ತತ್ತ್ವ-ಧರ್ಮ-ಸಿದ್ಧಾಂತಗಳನ್ನು ನಾವು ಮಂಡಿಸುತ್ತೇವೆ. ಈ ಸ್ಪಷ್ಟ ಗಡಿಯನ್ನು ಗುರುತಿಸಿಕೊಳ್ಳುವುದರಿಂದ ದಿನಪತ್ರಿಕೆಗಳ ಮೂಲಕ ನಿತ್ಯವೂ ಕಾದಾಡುವುದು ತಪ್ಪುತ್ತದೆ. ಜನರಿಗೂ ನೆಮ್ಮದಿಯಿಂದ ಧರ್ಮಮಾರ್ಗದಲ್ಲಿ ನಡೆಯುವುದು ಸಾಧ್ಯವಾಗುತ್ತದೆ.

ಇಂಥ ಸ್ಪಷ್ಟವಾದ ವಿಭಜನೆ ಅಥವಾ ಧ್ರುವೀಕರಣ ಎಂದಿಗಿಂತಲೂ ಇಂದು ಅಗತ್ಯ. ಏಕೆಂದರೆ ಪಂ. ಪೀ. ರನ್ನು ಆಧುನಿಕ ಜಗತ್ತಿಗೆ ಹೊಂದುವ ಪ್ರಗತಿಪರ ಚಿ ತನೆಗೆ ಬರುವಂತೆ ಮಾಡುವುದು ಅಸಾಧ್ಯ. ಯಾವ ಸಾಧನೆಯೂ ಇಲ್ಲದೆ ಜಾತಿ ಆ ರದ ಮೇಲೆ ಸಿಂಹಾಸನವನ್ನೇರಿ ಅನಾಯಾಸವಾಗಿ ಕಿರೀಟ, ಬಂಗಾರದ ಆಭರಣ ತೊಟ್ಟು, ಇನ್ನೊಬ್ಬರ ಹೆಗಲೇರಿ ಓಡಾಡುವ ಸೌಲಭ್ಯ ಸಿಕ್ಕಿರುವಾಗ ಅವರೇಕೆ ಬಿಟ್ಟುಕೊಡುವರು ? ಇವರೇನು ಸರಳವ್ರತ ಧರಿಸಿದ ಆದರ್ಶವಾದಿ ಶರಣರೆ ? ಅಥವಾ ಸಮಾಜ ಪರಿವರ್ತನೆ ತರಬೇಕೆಂಬ ಕಳಕಳಿಯುಳ್ಳ ಸುಧಾರಕರೆ ? ದಯೆ- ಾನವೀಯತೆಗಳ ಸಾಕಾರವಾದ ಪ್ರವಾದಿಗಳೇ ? ಏನೂ ಅಲ್ಲ. ಜಾತಿ ವ್ಯವಸ್ಥೆಯ ಪಾಲಕರು, ಅಸಮಾನತೆಯ ಪೋಷಕರು. ಅಂದಾಗ ಅವರಿಂದ ಪ್ರಗತಿಪರ ಚಿಂತನೆ ಬಯಸುವವನೇ ಕಡುಮೂರ್ಖ, ಕಾಗೆಯ ಕಂಠದಿಂದ ಕೋಗಿಲೆಯ ಸುಸ್ವರವನ್ನು ನಿರೀಕ್ಷಿಸುವ ಹೆಡ್ಡನಂತೆ.

ಇವರೇ ಹೇಳುವಂತೆ ಒಂದು ವೇಳೆ ಬಸವಣ್ಣನವರು ಮತೋದ್ಧಾರಕರಾದರೆ ಅವರು ಬೋಧಿಸಿದ ಸುಧಾರಣ ತತ್ತ್ವಗಳನ್ನು ಇವರು ಪಾಲಿಸಬೇಕಿತ್ತು. ಪುರಾತನ ಕಾಲದಲ್ಲಿ ಎತ್ತಿನಗಾಡಿ , ಕುದುರೆ ಸವಾರಿ ಮಾಡುತ್ತಿದ್ದ ವ್ಯಕ್ತಿ ಸುಧಾರಣಾತ್ಮಕವಾದ ಬಸ್, ಕಾರನ್ನು ಇಂದು ಇಷ್ಟಪಡುವಂತೆ ಇವರು ಬಸವ ತತ್ತ್ವ ಪಾಲಿಸಬೇಕಾಗಿತ್ತು. ಭಾರತ, ಗಣರಾಜ್ಯವಾಗುವ ಮೊದಲು ಇದಕ್ಕೆ ಸಂವಿಧಾನವಿರದೆ ಸಣ್ಣಪುಟ್ಟ ಸಂಸ್ಥಾನಿಕರು ಸಣ್ಣಪುಟ್ಟ ರಾಜ್ಯಗಳನ್ನು ಮಾಡಿಕೊಂಡು ಕಾದಾಡುತ್ತಿದ್ದರು. ಭಾರತ ಗಣರಾಜ್ಯವಾಯಿತು. ಒಂದು ಸಂವಿಧಾನ ರೂಪುಗೊಂಡಿತು. ಎಲ್ಲ ಸಂಸ್ಥಾನಿಕರೂ ಈ ಸಂವಿಧಾನವನ್ನು ಒಪ್ಪಿಕೊಂಡಿಲ್ಲವೆ ? ಹಾಗೆ ವಚನ ಸಾಹಿತ್ಯವು

ಪ್ರಗತಿಪರ ಧೋರಣೆಯ ಧಾರ್ಮಿಕ ಸಂವಿಧಾನವಾಗಿರುವಾಗ ಈ ಪಂ. ಪೀ. ರು ಬಸವಣ್ಣನವರು ಮತೋದ್ಧಾರಕ ಎಂದು ತಿಳಿದರೆ ಆಗ ವಚನ ಸಾಹಿತ್ಯ ಸಂವಿಧಾನ ಒಪ್ಪಿಕೊಂಡು ಅದರಂತೆ ನಡೆಯುವುದು ಸೂಕ್ತವೆನಿಸುವುದಲ್ಲವೆ ?

' ಇವರು ನಂಬಿಕೆಗೆ ಅರ್ಹರಲ್ಲ '

ಬಸವ ಭಕ್ತರಾದ ಗ್ರಾಮೀಣ ಜನರಲ್ಲಿ ಒಂದು ನಂಬಿಕೆಯ ಭಾವ ಹುಟ್ಟಿಸುವುದಕ್ಕಾಗಿ ಇವರು ಬಸವಣ್ಣನವರು ಮಹಾಶರಣರು, ನಮ್ಮ ಪರಮ ಭಕ್ತರು ಎಂದು ಹೇಳವುದುಂಟು. ಉಗ್ರದ್ವೇಷಿಗಳಾಗಿ ಒಂದು ಕಾಲದಲ್ಲಿ ಆನೆಯ ಕಾಲಿಗೆ ಬಸವಣ್ಣನವರ ಫೋಟೋ ಹಾಕಿ ತುಳಿಸಿದ ಐತಿಹಾಸಿಕ ದಾಖಲೆ ಇರುವಾಗ ಇಷ್ಟು ಹೃದಯಪರಿವರ್ತನೆ ಆಯಿತೇ ? ಎಂದು ಹರ್ಷಪಡಬೇಡಿರಿ. ಇದು ತೋರಿಕೆಯ ಪರಿವರ್ತನೆ. ವಚನ ಸಾಹಿತ್ಯದ ಒಂದು ಮಹಾನ್ ಪ್ರವಾಹ ಈಗ ಹರಿಯುತ್ತಿರುವುದರಿಂದ ಬಸವ ನಿಂದೆ ಮಾಡಲಾರದೆ ಈಗ ತಣ್ಣಗಿದ್ದಾರೆ. ಸೊಲ್ಲಾಪುರದಲ್ಲಿ ಕೆಲವು ಮನೆಗಳಲ್ಲಿದ್ದ ಬಸವಭಾವಚಿತ್ರ ತೆಗೆಸಿ ಗಣಪತಿಯ, ಪಂಚಾಚಾರ್ಯರ, ತಮ್ಮಗಳ ಚಿತ್ರಗಳನ್ನು ಹಾಕಿಸಿಕೊಂಡಿದ್ದಾರೆ. ಅಂದೊಮ್ಮೆ ಈ ಪಾಶುಪತ ಶೈವರು ಲಿಂಗವಂತ ಧರ್ಮದ ಪ್ರಭಾವ ಜೋರಾದಾಗ ಒಳಗೆ ಪ್ರವೇಶಿಸಿ ಇಲ್ಲಿ ತಾತ್ತ್ವಿಕ ವಿಕೃತಿ ಉಂಟು ಮಾಡಿದರು. ಶರೀರದಲ್ಲಿ ಜೈವಿಕ ರೋಗ ನಿರೋಧಕ ಸಾಮರ್ಥ್ಯವಿರುವಾಗ ರೋಗಾಣುಗಳು ಶರೀರದ ಮೇಲೆ ಪರಿಣಾಮ ಬೀರವು. ಆ ನಿರೋಧಕ ಶಕ್ತಿ ಕಡಿಮೆಯಾಗುತ್ತಲೇ ರೋಗವು ತಲೆ ಎತ್ತುವುದು . ಈಗಾದರೂ ಅಷ್ಟೇ ಗ್ರಾಮಾಂತರ ಪ್ರದೇಶಗಳಲ್ಲಿ, ವಚನ ಸಾಹಿತ್ಯದ ಅಧ್ಯಯನ ಇಲ್ಲದಲ್ಲಿ, ಹಣವನ್ನಷ್ಟೆಗಳಿಸಿ ವಿಚಾರ ಶಕ್ತಿ ರೂಢಿಸಿಕೊಳ್ಳದ ಮೂಢ ಶ್ರೀಮಂತರಲ್ಲಿ, ಜಾತೀಯತೆಯನ್ನು ಬಿತ್ತಿಬೆಳೆಯಬೇಕೆಂಬ ಕೆಲವು ಪುರೋಹಿತಶಾಹಿ ಜನರಲ್ಲಿ ಮಾತ್ರ ಇವರ ಬಗ್ಗೆ ಒಲವು ಕಂಡು ಬರುತ್ತದೆ. ಆದ್ದರಿಂದ ಪಂ. ಪೀ. ರು ಜನರ ವಿಚಾರದ ಓಘ ನೋಡಿಕೊಂಡು ಬಸವಣ್ಣನವರ ಹೆಸರನ್ನು ಬಳಸಿಕೊಳ್ಳುವವನರಾದ್ದರಿಂದ, ಇನ್ನು ಅವರು ಬಸವ ತತ್ತ್ವದ ಹಿತಚಿಂತಕರು ಎಂಬುದನ್ನು ಸ್ಪಷ್ಟವಾಗಿ ಮರೆಯುವುದು ಲೇಸು.

ಹಿಂದೊಂದು ಕಾಲದಲ್ಲಿ ಶುದ್ಧ ಶೈವರು, ಮಿಶ್ರ ಶೈವರು. ಅಶುದ್ಧ ಶೈವರು ಎಂಬ ವರ್ಗೀಕರಣವಿದ್ದಿತು. ಶುದ್ಧ ಶೈವರೆಂದರೆ ದೇವತಾ ಶಿವನಲ್ಲಿ ಅಖಂಡ ನಿಷ್ಠೆಯುಳ್ಳವರು. ಮಿಶ್ರ ಶೈವರೆಂದರೆ ಶಿವನೊಡನೆ ಶಿವನ ಪರಿವಾರವನ್ನು ಪೂಜಿಸುವ–ವರು. ಅಶುದ್ಧ ಶೈವರೆಂದರೆ ಶಿವ, ಶಿವಪರಿವಾರದ ಜೊತೆ ಉಳಿದೆಲ್ಲ ದೇವತೆಗಳನ್ನು ಪೂಜಿಸುವವರು.

ಈಗ ನಾವೂ 3 ವರ್ಗಗಳನ್ನು ಮಾಡಬಹುದು. ಶುದ್ಧ ಬಸವ ತತ್ತ್ವದವರು, ಮಿಶ್ರರು. ಅಶುದ್ಧ ಬಸವ ತತ್ತ್ವದವರು. ಈ ಸದ್ಯದಲ್ಲಿ ಪಂ. ಪೀ. ರು ಅಶುದ್ಧ ಬಸವ ತತ್ತ್ವದವರು. ವಚನ ಸಂವಿಧಾನಕ್ಕೆ ವಿರುದ್ಧವಾಗಿ ಅವರ ಆಚರಣೆಗಳಿವೆ. ಕೆಲವು ನಿಷ್ಠಾವಂತ ವಿರಕ್ತಮಠಗಳನ್ನು ಬಿಟ್ಟರೆ ಹೆಚ್ಚಿನ ವಿರಕ್ತರು ಮಿಶ್ರರು. ಅವರು ಯಾವುದೋ ಧರ್ಮ ಸಂಕಟಕ್ಕೆ ಸಿಕ್ಕಿ ಬಸವ ಸಂಪ್ರದಾಯಕರು ಎಂದು ಹೇಳಿದರೂ ಆಚರಣೆಯಲ್ಲಿ ಏಕ ನಿಷ್ಠೆಯಿಲ್ಲ: ಬಹುದೇವತೋಪಾಸನೆ, ಪಂಚಾಂಗ ಶ್ರವಣ, ಅಡ್ಡ–ಪಲ್ಲಕ್ಕಿ, ಜಾತೀಯತೆಯ ಗೊಂದಲದಲ್ಲಿ ಸಿಕ್ಕಿದ್ದಾರೆ. ಈಗ ಪಂ. ಪೀ. ರ ಸವಾಲಿಗೆ ಇವರು ಉತ್ತರ ಕೊಡಲೇ ಬೇಕಾದ ಒತ್ತಡ ಬರುತ್ತಿದೆ. ಜೋ ಕುಚ್ ಹೂವಾ ಅಚ್ಛಾ ಕೆ ಲಿಯೇ ಹುವಾ ಗುರು ಬಸವಣ್ಣನವರು ಧರ್ಮಗುರು–ವಚನ ಸಾಹಿತ್ಯವೇ ಧರ್ಮ ಸಂಹಿತೆ ಎಂದು ಘೋಷಿಸಿ ವಿರಕ್ತರು ಶುದ್ಧ ಬಸವ ತತ್ತ್ವದವರು ಆಗುವರೋ ಅಥವಾ ಅತ್ತಲೂ ಇಲ್ಲದೆ ಇತ್ತಲೂ ಇಲ್ಲದೆ ಮಿಶ್ರರಾಗಿ ಉಳಿಯುವರೋ, ಅಥವಾ ಪಂಚಾಚಾರ್ಯರ ಪಾಳೆಯ ಸೇರಿಕೊಂಡು ಅಶುದ್ಧ ಬಸವ ತತ್ತ್ವವಾದಿಗಳಾಗುವರೋ ! ನಿರ್ಣಯಿಸುವ ಕಾಲ ಒದಗಿ ಬಂದಿದೆ. ಅವರ ಪಾಳೆಯ ಸೇರಿದರೆ ಇವರು ಎರಡನೆ ದರ್ಜೆಯ ಸ್ವಾಮಿಗಳಾಗುವರು. ಗುರು ಬಸವಣ್ಣನವರನ್ನು ಭದ್ರವಾಗಿ– ಅಂದರೆ ತಾತ್ತ್ವಿಕವಾಗಿ, ವೈಚಾರಿಕವಾಗಿ ಹಿಡಿದರೆ ತಮ್ಮ ಕೀರ್ತಿಯನ್ನು ಇನ್ನಷ್ಟು ವರ್ಧಿಸಿಕೊಳ್ಳುವರು.

ಒಂದು ನಿರ್ಣಯಕ್ಕೆ ವಿರಕ್ತ ಮಠಾಧೀಶರು ಮತ್ತು ವಿಚಾರ ಶೀಲ ಸಮಾಜ ಬರುವಂತೆ ಪ್ರೇರಣೆ ನೀಡುತ್ತಿರುವ ಪಂಚಪೀಠಾಧೀಶರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆ.

—ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮಪೀಠ, ಕೂಡಲ ಸಂಗಮ

❋

ನೋಟದ ಭಕ್ತಿ ಬಸವನಿಂದಾಯಿತ್ತು
ಕೂಟದ ಜ್ಞಾನ ಬಸವನಿಂದಾಯಿತ್ತು ಕಾಣಾ.
ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ ಬಸವನಲ್ಲದೆ
ಮಹಾಜ್ಞಾನ ಮಹಾ ಪ್ರಕಾಶ ಬಸವಣ್ಣನ ಧರ್ಮವಯ್ಯಾ
ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯಾ — ೯೩೭

—ಸಿದ್ಧರಾಮೇಶ್ವರರು

ವೀರಶೈವ ಧರ್ಮ ಸ್ಥಾಪನೆ

[ಬೆಲ್ದಾಳ ಶರಣರು, ಪೂಜ್ಯಶ್ರೀ ಬಸವಲಿಂಗ ಪಟ್ಟದೇವರು ಇವರ ಪ್ರತಿಕ್ರಿಯೆಗೆ ಚಿದಾನಂದಮೂರ್ತಿಯವರ ಉತ್ತರ]

1. ಶ್ರದ್ಧಾವಂತರಾದವರು ವೀರಶೈವ ಮತಸ್ಥಾಪಕರು ಬಸವಣ್ಣನೇ ಸರಿ ಎಂದು ಪ್ರಬಲವಾಗಿ ನಂಬಿದ್ದರೆ ಅದನ್ನು ನಾನು ಪ್ರಶ್ನಿಸಲಿಕ್ಕೆ ಹೋಗುವದಿಲ್ಲ. ಏಕೆಂದರೆ ಅದು ನಂಬಿಕೆಯ ಅಥವಾ ಶ್ರದ್ಧೆಯ ಪ್ರಶ್ನೆ. ನಾನು ನನ್ನ ಲೇಖನದಲ್ಲಿ ಹೇಳಿರುವಂತೆ ಶ್ರದ್ಧೆಯು ಚರ್ಚೆಯ ವಿಷಯವಾಗುವುದಿಲ್ಲ. ಶ್ರದ್ಧೆಯ ಸತ್ಯವು ಒಂದು ಸ್ತರದ ಸತ್ಯ. ಅದೂ ಐತಿಹಾಸಿಕ ಸತ್ಯವೂ ಎಲ್ಲ ಕಾಲಕ್ಕೂ ಒಂದೇ ಆಗಿರಬೇಕಿಲ್ಲ.

2. ಐತಿಹಾಸಿಕ ಸತ್ಯವು ಅದನ್ನು ಪ್ರತಿಪಾದಿಸುವವನಿಗೆ ಹೇಗೋ ಹಾಗೆಯೇ ಉಳಿದವರಿಗೂ ಸತ್ಯವಾಗಿ ಕಾಣಬೇಕು. ಶ್ರದ್ಧೆಯ ಸತ್ಯವು ಅದನ್ನು ನಂಬಿದವರಿಗೆ ಹೇಗೋ ಉಳಿದವರಿಗೂ ಸತ್ಯವಾಗಿ ಕಾಣಬೇಕೆಂದೇನೂ ಇಲ್ಲ.

3. ಕೊಂಡಗುಳಿ ಕೇಶಿರಾಜನಲ್ಲಿ ವೀರಶೈವ, ಲಿಂಗಾಯತ ಮಾತುಗಳು ಬಂದರೂ, ಅವನು ಸ್ಥಾವರ ಲಿಂಗಾರಾಧಕನೆಂದೂ "ಶೈವ" ನೆಂದೂ ಅವನು ವೀರಶೈವನಲ್ಲವೆಂದೂ ವಾದಿಸುವುದರಲ್ಲಿ ನನಗೆ ಅರ್ಥ ಕಾಣಿಸುವುದಿಲ್ಲ. ದೇವಾಲಯದ ಶಿವಲಿಂಗದ ಆರಾಧಕರು ವೀರಶೈವರಲ್ಲವೆಂದಾದರೆ ಶ್ರೀ ವಿರೂಪಾಕ್ಷನ ಭಕ್ತರಾದ ಹರಿಹರ ರಾಘವಾಂಕರು ವೀರಶೈವರಾಗುವದಿಲ್ಲ. ತಮ್ಮ ಸಂಚಾರದ ಸಮಯದಲ್ಲಿ ಅನೇಕ ಶಿವಕ್ಷೇತ್ರಗಳನ್ನು ದರ್ಶಿಸಿದ ತೋಂಟದ ಸಿದ್ಧಲಿಂಗಯತಿಗಳು ವೀರಶೈವರೆನ್ನಿಸುವದಿಲ್ಲ. ಶ್ರೀಶೈಲದ ಚೆನ್ನಮಲ್ಲಿಕಾರ್ಜುನನ ಆರಾಧಕಿ ಮಹಾದೇವಿಯಕ್ಕನೂ ಅಷ್ಟೇ. ಈ ಕಾಲದ ಯಾವ ವೀರಶೈವರೂ ವೀರಶೈವರೆನ್ನಿಸುವದಿಲ್ಲ. ದೇವಾಲಯಗಳನ್ನು ದರ್ಶಿಸಿ ಶಿವನಿಂದ ಹೊನ್ನು ಪಡೆಯುತ್ತಿದ್ದ ನಂಬಿಯಣ್ಣನನ್ನು ಸ್ತೋತ್ರ ಮಾಡಿರುವ ಬಸವಣ್ಣನೇ ವೀರಶೈವನೆನ್ನಿಸುವದಿಲ್ಲ. ಮೈಮೇಲಿನ ಇಷ್ಟಲಿಂಗಕ್ಕೆ ಮಹತ್ವಕೊಡುವದಕ್ಕಾಗಿ ಅನೇಕ ಶರಣರು ದೇವಾಲಯ ಲಿಂಗ ಪೂಜೆಯನ್ನು ನಿರಾಕರಿಸಿದರು. ಹಾಗೆ ನೋಡಿದರೆ ಅನೇಕ ಶರಣರ ಅಂಕಿತಗಳಲ್ಲಿ ಇರುವದೆಲ್ಲ ದೇವಾಲಯ ಲಿಂಗಗಳ ಹೆಸರುಗಳೇ. ಕೊಂಡಗುಳಿ ಕೇಶಿರಾಜನ ಇಷ್ಟಲಿಂಗವು ನದಿಯಲ್ಲಿ ಮುಳುಗಿ ಹೋದ ಉಲ್ಲೇಖವನ್ನು ನೋಡಿದರೆ ಅವನು ಒಬ್ಬ ಅಚ್ಚ ವೀರಶೈವನೆಂಬುದು ಸಾಬೀತಾಗುತ್ತದೆ. ಅವನಲ್ಲಿ ವೀರಶೈವ ಧರ್ಮದ ಎಲ್ಲ ಪರಿಭಾಷೆಯೂ ಬರುತ್ತದೆ. ಶಿವದೇವಾಲಯಗಳಿಗೆ ಹೋಗಿ ಬಂದರೂ ಮೈಮೇಲೆ ಇಷ್ಟಲಿಂಗ ಧಾರಣೆಯನ್ನು ಮಾಡುವವರೆಲ್ಲ ವೀರಶೈವರು. ಇಷ್ಟಲಿಂಗಧಾರಣೆ ವೀರಶೈವ ಧರ್ಮದ ಮುಖ್ಯ ಲಕ್ಷಣ, ದೇವಾಲಯ ನಿರಾಕರಣೆ ಅಲ್ಲ.

4. ಬಸವಣ್ಣನ ಹಿರಿಯ ಸಮಕಾಲೀನನಾಗಿದ್ದ ಜೇಡರ ದಾಸಿಮಯ್ಯ. ದಾಸಿಮಯ್ಯನ ಹಿರಿಯ ಸಮಕಾಲೀನರಾಗಿದ್ದ ಡೋಹರ ಕಕ್ಕಯ್ಯ, ಚನ್ನಯ್ಯ ಮತ್ತು ಕೊಂಡಗುಳಿ ಕೇಶಿರಾಜ, ಬಸವಣ್ಣನು ಅತ್ಯಂತ ಗೌರವದಿಂದ ಕಂಡ ಅಲ್ಲಮಪ್ರಭು ಇವರೆಲ್ಲ ಬಸವಣ್ಣನಿಂದ "ಸ್ಥಾಪಿತ" ವಾದ ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದರು ಎಂದು ಕಲ್ಪಿಸಿಕೊಳ್ಳುವದು ಕಷ್ಟವಾಗುತ್ತದೆ.

5. ವೀರಶೈವ ಮತಸ್ಥಾಪಕರು ಯಾರು ಎಂಬುದು ಸದ್ಯಕ್ಕೆ ಅಜ್ಞಾತವಾಗಿಯೇ ಉಳಿಯುತ್ತದೆ. ಆ ಧರ್ಮದ ಚರಿತ್ರೆ ಸುಮಾರು ಕ್ರಿ. ಶ. 1100 ರಿಂದ ದೊರಕುತ್ತದೆ. ಅದರ ಚರಿತ್ರೆಯಲ್ಲಿ ನಡೆದ ಸಾಮಾಜಿಕ ಉತ್ಕ್ರಾಂತಿಗೆ ಬಸವಣ್ಣ ಮೂಲಪುರುಷ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಆ ಉತ್ಕ್ರಾಂತಿಯೇ ವೀರಶೈವ ಧರ್ಮಕ್ಕೆ ವಿಶ್ವಮಾನ್ಯತೆಯನ್ನು ತಂದುಕೊಟ್ಟಿರುವದು. ಯಾವುದೇ ಚರಿತ್ರೆಯನ್ನು ಲಭ್ಯ ಆಧಾರಗಳ ಕಾಲದಿಂದ ಆರಂಭಿಸುತ್ತೇವೆ. ಹಾಗೆ ವೀರಶೈವ ಧರ್ಮದ ಚರಿತ್ರೆಯ ಆರಂಭದ ಕಾಲ ಮಾತ್ರ ನಮಗೆ ಗೊತ್ತು. ಹಿಂದಿನ ಚರಿತ್ರೆ ಸದ್ಯಕ್ಕೆ ಅಜ್ಞಾತ.

6. ಹಿಂದಿನ ಕೃತಿಗಳಲ್ಲಿ ಅಲ್ಲಮ ತೋಂಟದ ಸಿದ್ಧಲಿಂಗ ಇವರೆಲ್ಲ ಶಿವನಿಂದ "ವೀರಶೈವಾಚಾರದ ಜೀರ್ಣೋದ್ಧಾರ"ಕ್ಕಾಗಿ ಆಜ್ಞಾಪಿತರಾಗಿ ಬಂದು ಲೋಕದಲ್ಲಿ ವೀರಶೈವಾಚಾರವನ್ನು ಪ್ರತಿಷ್ಠಾಪಿಸಿದರು ಎಂಬಂತಹ ಮಾತುಗಳು ಬರುತ್ತವೆ. ಬಸವಣ್ಣನ ವಿಷಯದಲ್ಲಿ ಅಂತಹ ಮಾತುಗಳು ಬಂದಲ್ಲಿ ಆ ಅರ್ಥದಲ್ಲೇ ತೆಗದುಕೊಳ್ಳಬೇಕು. 17-18ನೇ ಶತಮಾನದ ರುದ್ರಮುನಿ ಎಂಬ ಕೊಡಗಸೂರಿನ ಗುರುಗಳ ಬಗ್ಗೆಯೂ ಶ್ರೀ ವೀರಶೈವಾಚಾರ ಪ್ರತಿಷ್ಠಾಚಾರ್ಯ" ಎಂಬಂತಹ ಮಾತುಗಳು ಬರುತ್ತವೆ.

7. ಬುದ್ಧ, ಮುಹಮ್ಮದ್ ಪೈಗಂಬರರು ತಮ್ಮ ಧರ್ಮಗಳನ್ನೇ ಸ್ಥಾಪಿಸಿ ತಮ್ಮ ಶಿಷ್ಯರಿಗೆ ಬೋಧಿಸಿದಂತೆ ಬಸವಣ್ಣನವರು ಹೊಸದಾಗಿ ವೀರಶೈವ ಧರ್ಮ ಸ್ಥಾಪಿಸಿ ತಮ್ಮ "ಶಿಷ್ಯರಿಗೆ" ಬೋಧಿಸಿದ ವರ್ಣನೆ ಎಲ್ಲಿಯೂ ಬರುವದಿಲ್ಲ. ಮತಸ್ಥಾಪಕರು ಗುರುಗಳಾಗಿ ಉಳಿದವರೆಲ್ಲ ಅವರ ಶಿಷ್ಯರಾಗುತ್ತಾರೆ. ಬಸವಣ್ಣನವರ ವಿಷಯದಲ್ಲಿ ಹಾಗಾಗಿದೆಯೇ ? ಹಿಂದಿನ ಎಲ್ಲ ಕವಿಗಳು, ವಚನಕಾರರೂ

ಕಸ್ತ ಪ್ರತಿಕಾರರೆ ಕೊನೆಗೆ ಈಗಿನ ಶ್ರೀಸಾಮಾನ್ಯರು "ಶ್ರೀ ಗುರು ಬಸವ ಲಿಂಗ"ನನ್ನು ಸ್ಮರಿಸಿದರೆ ಅದಕ್ಕೆ ಕಾರಣ ಸಾಮಾಜಿಕವಾಗಿ ಬಸವಣ್ಣ ಮಾಡಿದ ಬ ದೊಡ್ಡ ಕಾರ್ಯ. ಅದನ್ನು ಕುಡವರು" ಕೇಳಿದವರು, ಅದನ್ನು ಶತಮಾನ ಗಳಿಂದ ಸಾಮೂಹಿಕ ಸ್ಮರಣೆಯಲ್ಲಿ ಉಳಿಸಿಕೊಂಡವರು ಎಲ್ಲರೂ ತನಗಿಂತ ಕಿರಿಯರಿಲ್ಲವೆಂದು ಹೇಳಿಕೊಂಡ ಬಸವನನ್ನು ಎಲ್ಲರಿಗಿಂತ ಹಿರಿಯನೆಂದು ಭಾವಿಸಿದರು. ಬಸವಣ್ಣ ವೀರಶೈವ ಧರ್ಮ ಸ್ಥಾಪನೆ ಮಾಡಿದ ಎಂದಲ್ಲ. ಇಷ್ಟು ಶ್ರೀ ಸಿದ್ಧರಾಮೇಶ್ವರ ಶರಣರ ಮತ್ತು ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರ ಪ್ರತಿಕ್ರಿಯೆಗಳಿಗೆ (ಉತ್ತರ ಕರ್ನಾಟಕ 5-6-92) ನನ್ನ ಸ್ಥೂಲ ಉತ್ತರ.

(ಉತ್ತರ ಕರ್ನಾಟಕ, 16-6-92, ಪುಟ-4)

—ಡಾ|| ಎಂ. ಚಿದಾನಂದಮೂರ್ತಿ

ಸಾಹಿತಿಗಳು ಮತ್ತು ಬೌದ್ಧಿಕ ಅಪ್ರಾಮಾಣಿಕತೆ.

[ಡಾ|| ಚಿದಾನಂದ ಮೂರ್ತಿಯವರ ಬರಹಕ್ಕೆ ಜಗದ್ಗುರು ಮಾತೆ ಮಹಾದೇವಿ ಅವರ ಪ್ರತಿಕ್ರಿಯೆ]

"ಉತ್ತರ ಕರ್ನಾಟಕ" ಪತ್ರಿಕೆಯ ದಿ. 16-6-1992 ರ ಸಂಚಿಕೆಯಲ್ಲಿ ಡಾ|| ಎಂ. ಚಿದಾನಂದ ಮೂರ್ತಿಯವರ ಒಂದು ಲೇಖನ ಪುಟ 4 ರಲ್ಲಿ ಪ್ರಕಟಗೊಂಡಿದೆ. ಲೇಖನ ವನ್ನು ಓದಿದ ಮೇಲೆ ಬಹುಪಾಲು ಸಾಹಿತಿಗಳಿಗೆ ಸಾಹಿತ್ಯದ ಕಾವ್ಯಾಂಶಗಳಲ್ಲಿ ಪಾಂಡಿತ್ಯ, ಮತ್ತು ಡಾ|| ಚಿದಾನಂದ ಮೂರ್ತಿಯವರಿಗೆ ಶಾಸನಗಳ ಅಧ್ಯಯನದಲ್ಲಿ ಪರಿಣತಿ ಇರಬಹುದೇ ವಿನಾ ಸೈದ್ಧಾಂತಿಕ ವಿಚಾರಗಳಲ್ಲಿ ಆಳವಾದ ಪಾಂಡಿತ್ಯವಿಲ್ಲ ಎಂದು ಹೇಳಲಿಕ್ಕೆ ಸಂಕೋಚಪಡಬೇಕಿಲ್ಲ. ಇನ್ನೂ ದಾರ್ಶನಿಕ ವಿಚಾರಗಳ ಬಗ್ಗೆ ಯಂತೂ ಅವರುಗಳನ್ನು ಕೇಳದಿರುವುದೇ ಲೇಸು.

ಆದರೆ, ಅವರ ಕಣ್ಣುಗಳಲ್ಲಿ ಎಂ. ಎ. ಕನ್ನಡ ಡಿಗ್ರಿ ಸರ್ಟಿಫಿಕೇಟ್ ಪಡೆಯದೆ ಇರುವವರು ಎಷ್ಟೇ ಪಾಂಡಿತ್ಯ ಹೊಂದಿದ್ದರೂ ಅವರುಗಳು ಕೇವಲ ಶ್ರದ್ಧಾವಂತರು, ಭಾವುಕರು ಮಾತ್ರ. ಇನ್ನೊಂದು ದೃಷ್ಟಿಯಿಂದ ಪರಿಶೀಲಿಸಿದಾಗ ತತ್ತ್ವಜ್ಞಾನದ ಅಧ್ಯಯನವನ್ನು ಮಾಡಿರದ ಕೇವಲ (ಕನ್ನಡ) ಭಾಷಾ ಪಂಡಿತರು ತತ್ತ್ವಜ್ಞಾನ ದರ್ಶನ ಶಾಸ್ತ್ರಗಳ ತಳಹದಿಯ ಮೇಲೆ ರೂಪುಗೊಂಡ ವಚನ ಶಾಸ್ತ್ರ. ಲಿಂಗಾಯತ ಧರ್ಮ ಗಳನ್ನು ಸರಿಯಾಗಿ ಅಧ್ಯಯನ ಮಾಡದೆ ಅಪಚಾರವನ್ನು ಮಾಡಿದ್ದಾರೆ ಎಂದೂ ಹೇಳ ಬಹುದು.

ತಾವು ಬಹಳ ದೊಡ್ಡ ಸಂಶೋಧಕರುಗಳು ಎಂಬ ಹಮ್ಮು ತುಂಬಿಕೊಂಡಿರುವ ಬಹುಪಾಲು ಭಾಷಾ ಪಂಡಿತರು ಇನ್ನಿತರರ ಸಾಹಿತ್ಯದ ಕಡೆಗೆ (ಅಂದರೆ ಕನ್ನಡ ಎಂ.ಎ. ಡಿಗ್ರಿ ಸರ್ಟಿಫಿಕೇಟ್ ಇಲ್ಲದ ವಿದ್ವಾಂಸರ ಬರಹದ ಕಡೆಗೆ) ಕಣ್ಣೆತ್ತಿಯೂ ನೋಡರು. ಟೂತ್‌ಪೇಸ್ಟಿನ ಟ್ಯೂಬಿನಂತೆ ತಮ್ಮ ವಿಚಾರಗಳನ್ನು ಒಳಗೆ ಸೇರಿಸಿಕೊಳ್ಳುವ ಬೌದ್ಧಿಕ ಪ್ರಾಮಾಣಿಕತೆ ಇರದು. ಬಹುಪಾಲು ಜನರದು ಏಕಮುಖ ವಾಹನ ಸಂಚಾರದಂತಹ ದೃಷ್ಟಿಕೋನ.

ಈ ಮಾತನ್ನು ಏಕೆ ಬರೆಯುತ್ತಿದ್ದೇನೆ ಎಂದರೆ ನನಗೆ ಇಸವಿ ನೆನಪಿಲ್ಲ; 1978 ರ ಸುಮಾರು ಇರಬೇಕು. ಬೆಂಗಳೂರಿನ ಬಸವ ಮಂಟಪದಲ್ಲಿ ಒಂದು ಸಭೆ ಸೇರಿತ್ತು.

ಅಂದು ಭಾಷಣ ಮಾಡುವಾಗ ಶ್ರೀಯು ‹ರು ಸ್ಥಾವರಲಿಂಗ-ಇಷ್ಟಲಿಂಗಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದಾಗ ತಕ್ಷಣವೇ ಸಭಿಕರಲ್ಲಿ ಒಬ್ಬರು ನಿಂತು "ಕೇವಲ ಗುಡಿಯಲ್ಲಿದ್ದ ಲಿಂಗವನ್ನೇ ಶರೀರದ ಮೇಲೆ ಕಟ್ಟುವುದೇ ಆಗಿದ್ದರೆ ಶರಣರು ಸ್ಥಾವರಲಿಂಗ ಪೂಜೆ ಯನ್ನು ಅಷ್ಟೇಕೆ ವಿರೋಧಿಸುತ್ತಿದ್ದರು ?" ಎಂದು ಕೇಳಿದರು. ಆಗ "ಶರಣರು ಸ್ಥಾವರ ವಿರೋಧಿಗಳಿರಲಿಲ್ಲ. ಅವರ ಎಲ್ಲ ಮುದ್ರಿಕೆಗಳೂ ಶೈವ ಪರವೆ" ಎಂದರು, ಚಿದಾನಂದ ಮೂರ್ತಿಯವರು. ಈ ಎರಡೂ ವಿಷಯ ಕುರಿತು ಸಮಾರೋಪ ಭಾಷಣ ದಲ್ಲಿ ನಾವು ವಿವರಿಸಿ ಹೇಳಿದೆವು. "ಚುಳುಕಾದ ಚೇತನ." ಪುಸ್ತಕ ಸ್ಥಾವರಲಿಂಗ-ಇಷ್ಟ ಲಿಂಗದ ಬಗೆಗೆ ವಿದ್ವತ್ಪೂರ್ಣ ವಿಶ್ಲೇಷಣೆ ಮಾಡಿದೆ.

ಇಷ್ಟು ದೀರ್ಘಾವಧಿಯ ಸಮಯದಲ್ಲಿಯೂ ಅವರು ಇನ್ನೂ ಈ ಎರಡು ವಿಷಯ ಗಳನ್ನಾದರೂ ತಿಳಿಯುವ ಪ್ರಯತ್ನ ಮಾಡಿರದ್ದು ಬಹಳ ಸೋಜಿಗವನ್ನುಂಟು ಮಾಡಿದೆ. ಅದೇ (ಅಪ) ಸ್ವರವನ್ನೇ ಪುನಃ ಪುನಃ ಹಾಡುತ್ತಿರುವುದು ಅವರದು ಮುಕ್ತಮನಸ್ಸಲ್ಲ ಎಂಬುದನ್ನು ಖಚಿತಪಡಿಸುತ್ತದೆ. ಅದೇ ವಿಚಾರವನ್ನೇ ಪುನಃ ಈ ಲೇಖನದಲ್ಲಿಯೂ ಪ್ರಸ್ತಾಪಿಸಿದ್ದಾರೆ.

ಗುರು ಬಸವಣ್ಣನವರು ಇಷ್ಟಲಿಂಗಾರಾಧನೆಯೇ ಜೀವಾಳವಾದ ಲಿಂಗಾಯತ ಧರ್ಮದ ಆದ್ಯರು, ಸ್ಥಾಪಕರು. ಆದಿ ಗುರುವಿನ ಹೆಸರು ಮಾತ್ರ ಮಂತ್ರವಾಗುವುದೇ ವಿನಾ ದೊಡ್ಡ ವ್ಯಕ್ತಿಗಳದಲ್ಲ. ಅಲ್ಲಮ ಪ್ರಭುದೇವರು ವ್ಯಕ್ತಿತ್ವ ದೃಷ್ಟಿಯಿಂದ ಕಡಿಮೆ ಯಿದ್ದರೆ ? ಶೈವ [ಮತ್ತು ವೈದಿಕ] ದಿಂದ ಬೇರ್ಪಡಿಸುವ ಸ್ಪಷ್ಟಗಡಿ ಇಷ್ಟಲಿಂಗ. ಇದನ್ನು ಕೊಟ್ಟವರು ಧರ್ಮಪಿತ ಬಸವಣ್ಣನವರು ಎಂಬುದನ್ನು ಹರಿಹರ ಮಹಾಕವಿ ಸೂಚ್ಯವಾಗಿ ಹೇಳಿದ್ದಾನೆ. "ತನ್ನ ಹೃತ್ಕಮಳದೊಳು ಬೆಳೆದ ಲಿಂಗಕ್ಕೆ ಕರಕಮಳಮ ನಾಂತು" ಎಂದು ಹೇಳಿ ಇಷ್ಟಲಿಂಗದ ಪರಿಕಲ್ಪನೆ ಬಸವಣ್ಣನವರ ನೂತನ ಆವಿಷ್ಕಾರ ಎಂದು ಸ್ಪಷ್ಟಪಡಿಸುತ್ತಾನೆ. ಬಸವಣ್ಣನವರಿಗೆ ವ್ಯಕ್ತಿ ಗುರುವಿಲ್ಲ; ಸಾಕ್ಷಾತ್ ಪರಮಾತ್ಮನಿಂದಲೇ ಅವರು ಅನುಗ್ರಹಿಸಲ್ಪಟ್ಟರು ಎಂಬುದನ್ನು ಸ್ಪಷ್ಟವಾಗಿ ಹರಿಹರ ಹೇಳುವನು.

ಅಲ್ಲಮ ಪ್ರಭುದೇವರು ಪೂರ್ವಾಚಾರ್ಯ, ಪ್ರಥಮಾಚಾರ್ಯ ಎಂದು ನೂರಾರು ವಚನಗಳಲ್ಲಿ ಹೇಳಿರುವರು. ಆದಿ ಗುರು ಬಸವಣ್ಣ, ಪ್ರಮಥ ನಾಯಕ ಎಂದು ಸಿದ್ಧ-ರಾಮೇಶ್ವರರು ಹೇಳುತ್ತಾರೆ.

ಇಷ್ಟಲಿಂಗದ ಆದಿ ಕುರಿತು ಪ್ರಭುದೇವರು ಹೇಳುವರು :

"ಇದು ಕೃತಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ
ಇದು ತ್ರೇತಾಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ

ಇದು ದ್ವಾಪರದಲ್ಲಿ ಮೂರ್ತಿಯಾದ ಕರಸ್ಥಲವಲ್ಲ
ಇದು ಕಲಿಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ............
ಸಂಗನ ಬಸವಣ್ಣನ ಕರಸ್ಥಲದೊಳಗೆ
ಗುಹೇಶ್ವರನೆಂಬ ಲಿಂಗವು ತೊಳಗಿ ಬೆಳಗುತ್ತಿದ್ದುದ ಕಂಡು
ನಮೋ ನಮೋ ಎನುತಿದ್ದೆನು.!"

—ಅಲ್ಲಮ ಪ್ರಭು 891

[ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯಾದ ಅಲ್ಲಮ ಪ್ರಭುದೇವರ ವಚನಗಳು ಗ್ರಂಥದಿಂದ ವಚನವನ್ನು ಆಯ್ದು ಕೊಡಲಾಗಿದೆ.]

ಈ ವಚನದಲ್ಲಿ ಅತ್ಯಂತ ಸ್ಪಷ್ಟ ನುಡಿಗಳಲ್ಲಿ ಪ್ರಭುದೇವರು ಹೇಳಿದ್ದಾರೆ, ಕೃತ, ತ್ರೇತಾ, ದ್ವಾಪರ, ಕಲಿ (ಅಂದರೆ ಬಸವ ಪೂರ್ವದ ಭಾಗ) ಯುಗಗಳಲ್ಲಿ ಮೂರ್ತಿ ಯಾದ ಕರಸ್ಥಲವಲ್ಲ; ಸಂಗನ ಬಸವಣ್ಣನಿಂದ ಆದುದು ಎಂದು.

ಶ್ರೀ ಸಿದ್ಧರಾಮೇಶ್ವರರು ಹೇಳುತ್ತಾರೆ.

❁ ನೋಟದ ಭಕ್ತಿ ಬಸವನಿಂದಾಯಿತ್ತು.
ಕೂಟದ ಜ್ಞಾನ ಬಸವನಿಂದಾಯಿತ್ತು.
ಎಲ್ಲಿಯ ಶಿವಜ್ಞಾನ ಎಲ್ಲಿಯ ಮಾಟಕೂಟ ಬಸವನಲ್ಲದೆ ?
ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯಾ
ಕಪಿಲ ಸಿದ್ಧ ಮಲ್ಲಿನಾಥಯ್ಯಾ (ಸಿ. ವ. 937)

❁ ಅಜನ ಕಲ್ಪಿತವಲ್ಲದ ಭಕ್ತಿ, ವಿಷ್ಣುವಿನ ಕಲ್ಪಿತವಲ್ಲದ ಭಕ್ತಿ
ರುದ್ರನ ಕಲ್ಪಿತವಲ್ಲದ ಭಕ್ತಿ ನಿನ್ನಾ ಕಲ್ಪಿತವಾಯಿತ್ತಯ್ಯಾ ಬಸವಾ
ನೋಟಕಾರರ ನೋಟಕ್ಕೆ ಸಿಕ್ಕಿದ ಭಕ್ತಿ
ಕೂಟಕ್ಕೆ ಕೂಟವಾಯಿತ್ತಯ್ಯಾ ಬಸವಾ
ಈ ಬೇಟದ ಭಕ್ತಿಯ: ನಿಮ್ಮಿಂದ ಕಂಡೆನಯ್ಯಾ
ಬಸವ ಗುರುವೆ, ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯಾ
[ಸಿ. ವ. 933]

ಶ್ರೀ ಅಲ್ಲಮಪ್ರಭು ದೇವರು ಮತ್ತು ಶ್ರೀ ಸಿದ್ಧರಾಮೇಶ್ವರರಂತಹವರ ಮಾತಿಗಿಂತ ಇನ್ನಾವ ಆಧಾರ ತರಬೇಕು ? ಬಹುಶಃ ಈ ಮಹಾನುಭಾವರ ಮಾತುಗಳು ಡಾ॥ ಚಿದಾನಂದ ಮೂರ್ತಿಯವರಂತಹವರಿಗೆ ಅಧಿಕೃತವಲ್ಲ. ಏಕೆಂದರೆ ಅವರು ಕೇವಲ

ಶ್ರದ್ಧಾವಂತರು ಮತ್ತು ಕನ್ನಡದಲ್ಲಿ ಎಂ. ಎ. ಆಗಲಿ, ಪಿ.ಹೆಚ್.ಡಿ. ಆಗಲಿ ಮಾಡದೆ ಇರುವ ಅವಿದ್ಯಾವಂತರೂ; ಸಂಶೋಧಕರಲ್ಲ ತಾನೆ ?

ಇಂದು ಪ್ರಕಟವಾಗಿರುವ ವಚನ ಸಾಹಿತ್ಯದ ರಾಶಿಯಲ್ಲೇ ಬಹುಪಾಲು ವಚನಗಳು ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮಸ್ಥಾಪಕರು, ಆದಿ ಗುರು ಎಂದು ಮುಕ್ತ ಕಂಠದಿಂದ ಹೊಗಳುತ್ತಿದ್ದರೂ ಅದನ್ನು ಕಡೆಗಣಿಸುವ ಇವರ ಧಾರ್ಷ್ಟ್ಯ ನೋಡಿದರೆ ಆಶ್ಚರ್ಯವೆನಿಸುತ್ತದೆ. ಲಿಂಗಾಯತ ಧರ್ಮದ ಜೀವಾಳವಾಗಿರುವ ಏಕದೇವೋಪಾಸನೆ (Consistent Monotheism) ಯನ್ನು ಎಷ್ಟೂ ಅರ್ಥ ಮಾಡಿಕೊಳ್ಳದ ಚಿದಾನಂದ ಮೂರ್ತಿಯವರು ಎಷ್ಟು ಹಗುರವಾಗಿ ಈ ಮಾತುಗಳನ್ನು ಬರೆದಿದ್ದಾರೆ ನೋಡಿ.

"ದೇವಾಲಯದ ಶಿವಲಿಂಗದ ಆರಾಧಕರು ವೀರಶೈವರಲ್ಲವೆಂದಾದರೆ ಶ್ರೀ ವಿರೂಪಾಕ್ಷನ ಭಕ್ತರಾದ ಹರಿಹರ ರಾಘವಾಂಕರು ವೀರಶೈವರಾಗುವುದಿಲ್ಲ. ತಮ್ಮ ಸಂಚಾರದ ಸಮಯದಲ್ಲಿ ಅನೇಕ ಶಿವಕ್ಷೇತ್ರಗಳನ್ನು ದರ್ಶಿಸಿದ ತೋಂಟದ ಸಿದ್ಧಲಿಂಗಯತಿಗಳು ವೀರಶೈವರೆನ್ನಿಸುವುದಿಲ್ಲ. ಶ್ರೀಶೈಲದ ಚನ್ನಮಲ್ಲಿಕಾರ್ಜುನನ ಆರಾಧಕಿ ಮಹಾದೇವಿಯಕ್ಕನೂ ಅಷ್ಟೆ" [ಪ್ಯಾರಾಗ್ರಾಫ್ 3]

"ಹಾಗೆ ನೋಡಿದರೆ ಅನೇಕ ಶರಣರ ಅಂಕಿತಗಳಲ್ಲಿ ಇರುವದೆಲ್ಲ ದೇವಾಲಯ ಲಿಂಗಗಳ ಹೆಸರುಗಳೇ."

"ಶಿವ ದೇವಾಲಯಗಳಿಗೆ ಹೋಗಿ ಬಂದರೂ ಮೈಮೇಲೆ ಇಷ್ಟಲಿಂಗಧಾರಣೆಯನ್ನು ಮಾಡುವವರೆಲ್ಲ ವೀರಶೈವರು. ಇಷ್ಟಲಿಂಗಧಾರಣೆ ವೀರಶೈವ ಧರ್ಮದ ಮುಖ್ಯ ಲಕ್ಷಣ, ದೇವಾಲಯ ನಿರಾಕರಣೆ ಅಲ್ಲ." ಗುರು ಬಸವಣ್ಣನವರು ಸ್ಥಾಪಿಸಿದ್ದು, ಅವರ ಸಮಕಾಲೀನರಿಂದ ಹಿಡಿದು ಸಿದ್ಧಲಿಂಗಯತಿಗಳು, ಅಥಣಿ ಶಿವಯೋಗಿಗಳವರೆಗೆ ಇವರೆಲ್ಲ ಆಚರಿಸಿದ್ದು ಲಿಂಗಾಯತ ಧರ್ಮ, ಇದು ಲಿಂಗಪತಿಯನ್ನು ಕುರಿತು ಶರಣ ಸತಿಯ ಏಕನಿಷ್ಠೆಯ ಅವ್ಯಭಿಚಾರಿಣಿ ಭಕ್ತಿಯನ್ನು ಒತ್ತಿ ಒತ್ತಿ ಹೇಳುತ್ತದೆ.

ಹರಿಹರ ಮಹಾಕವಿ ಶೈವಕವಿಯೇ ವಿನಾ ಲಿಂಗಾಯತ ಧರ್ಮದ ಅನುಯಾಯಿಯಾಗಲಿಲ್ಲ. ಅವನಲ್ಲಿ ಮೊದಲಿನಿಂದಲೂ ಬೆಳೆದಿದ್ದ ಸ್ಥಾವರ ಮೋಹ ಬಹುಶಃ ಲಿಂಗವಂತನಾಗಲು ಅಡ್ಡಿಯನ್ನು ಉಂಟು ಮಾಡಿರಬಹುದು. ಲಿಂ|| ಶ್ರೀ ದೇವೀರಪ್ಪನವರು ಈ ಬಗ್ಗೆ ಬಹಳ ಚೆನ್ನಾಗಿ ಬರೆದಿದ್ದಾರೆ. ಬಸವಣ್ಣನವರ ಅದ್ಭುತ ವ್ಯಕ್ತಿತ್ವ ಹರಿಹರನ ಮನಸ್ಸನ್ನು ಸೆಳೆದಿದ್ದರೂ, ತನ್ನ ಶೈವ ಭಕ್ತಿಯನ್ನು ತೊರೆಯಲಾರದ ದೌರ್ಬಲ್ಯದಿಂದಲೇ ಆತ ಲಿಂಗವಂತ ಧರ್ಮವನ್ನು ಸ್ವೀಕರಿಸಲಿಲ್ಲ. ಅದೇ ಹೊಯ್ದಾಟದಲ್ಲಿಯೇ ಆತ ತೀರಿಕೊಂಡ ಎಂದು ಶ್ರೀಯುತರು ಬರೆದಿದ್ದಾರೆ.

ಬಹುಶಃ ವಚನ ಸಾಹಿತ್ಯವನ್ನು ಓದುತ್ತಿರುವ ಸಾಮಾನ್ಯರಿಗೂ ತಿಳಿದಿದೆ ಅಕ್ಕಮಹಾದೇವಿ ಆರಾಧಿಸಿದ್ದು, ಶ್ರೀಶೈಲದ ಚನ್ನಮಲ್ಲಿಕಾರ್ಜುನನನ್ನಲ್ಲ; ಆಕೆ ಆರಾಧಿಸಿದ್ದು, ನಿರಾಕಾರ-ನಿರ್ಗುಣನಾದ ದೇವನನ್ನು

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ ಅವ್ವಾ !
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆ ಎಲೆ ಅವ್ವಾ !
ನೀನು ಕೇಳಾ ತಾಯಿ ! ಭವವಿಲ್ಲದ ಭಯವಿಲ್ಲದ
ನಿರ್ಭಯ ಚೆಲುವಂಗೊಲಿದೆ ನಾನು
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ."

ಅಕ್ಕಮಹಾದೇವಿಯ ಕೈಯಲ್ಲಿ ಪೂಜೆಗೊಂಡುದು ನಾಲ್ಕುಗೋಡೆಗಳಲ್ಲಿ ಸೀಮಿತವಾದ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವಲ್ಲ.

"ಅಯ್ಯಾ ! ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ
ಅಯ್ಯಾ ! ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ
ಅಯ್ಯಾ ! ಬ್ರಹ್ಮಾಂಡವಿತ್ತತ್ತ ಮಣಿ ಮುಕುಟವತ್ತತ್ತ
ಚನ್ನಮಲ್ಲಿಕಾರ್ಜುನಯ್ಯಾ,
ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೆ."

ವಿಶ್ವವ್ಯಾಪಿಯೂ, ವಿಶ್ವಾತ್ಮನೂ ಆದ ಕರ್ತನ ಚುಳುಕಾದ ರೂಪ ಇಷ್ಟಲಿಂಗ,

ಹಾಲು ಹಿಡಿದು ಬೆಣ್ಣೆಯ ನರಸಲುಂಟೆ ?
ಲಿಂಗವ ಹಿಡಿದು ಪುಣ್ಯ ತೀರ್ಥಕ್ಕೆ ಹೋಗಲುಂಟೆ ?
ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಂಗಳು
ಎಲ್ಲ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯ
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದು ಮಾಡಿ,
ತೀರ್ಥಲಿಂಗವ ಹಿರಿದು ಮಾಡಿ ಹೋದಾತಂಗೆ
ಅಘೋರ ನರಕ ತಪ್ಪದು ಕಾಣಾ, ಚನ್ನಮಲ್ಲಿಕಾರ್ಜುನ
(ಮ.ಅ.ವ, 157)

ಅಕ್ಕಮಹಾದೇವಿ ಶ್ರೀಶೈಲ ಲಿಂಗದ ಆರಾಧಕಳಾಗಿದ್ದರೆ ಈ ರೀತಿ ಹಳಿಯುತ್ತಲಿದ್ದಳೆ?

ಅನುಭವ ಮಂಟಪದಿಂದ ಮುಂದೆ ಆಕೆ ಕದಳಿ ಬನಕ್ಕೆ ಹೋದದು ಶ್ರೀಶೈಲದ ಗುಡಿಯೊಳಗಣ ಲಿಂಗವನ್ನು ಅರಸಿಕೊಂಡು ಅಲ್ಲ. ತನ್ನ ಅಂತಿಮ ದಿನಗಳನ್ನು ಪ್ರಶಾಂತವಾದ ನಿಸರ್ಗದ ಒಡಲಲ್ಲಿ ಕಳೆಯಬೇಕೆಂದು ಆಗ ಅದು ಯೋಗಿಗಳ, ಸಾಧಕರ

ಬೀಡಾಗಿದ್ದಿತು. ಪ್ರಭುದೇವರು ಸ್ಥಳ ನಿರ್ದೇಶನವನ್ನು ಹೀಗೆ ಮಾಡುತ್ತಾರೆ:

ನೀನಾನೆಂಬುಭಯ ಸಂಗವಳಿದು ತಾನು ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯ ಮೆಟ್ಟಿನೋಡಲು
ಬಟ್ಟ ಬಯಲು ಕಾಣಬಹುದು ನೋಡಾ
ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ
ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ
ನಡೆಯಲ್ಲಿಗೆ ತಾಯೀ ಗುಹೇಶ್ವರ ಲಿಂಗದಲ್ಲಿ
ಪರಮ ಪದವಿ ನಿನಗೆ ಸ್ವಯವಹುದು ನೋಡಾ

ಅ. ಪ್ರ. ವ ೧೧೯೬

ಅಲ್ಲಮ ಪ್ರಭುಗಳು ಶ್ರೀಶೈಲದ ದೇವಾಲಯದ ಸ್ಥಳ ನಿರ್ದೇಶನ ಮಾಡದೆ, ಕದಳಿಯ ಭೌಗೋಲಿಕ ಸೂಚನೆ ನೀಡುತ್ತಾರೆ. ಜೊತೆಗೆ ದ್ವಂದ್ವಾರ್ಥದಲ್ಲಿ ಅಂತ ರಂಗದ ಕದಳಿಯಾದ ಸಹಸ್ರಾರ, ಅದರೊಳಗಣ ಜ್ಯೋತಿರ್ಲಿಂಗದ ಮಹತ್ವ ತಿಳಿಸುತ್ತಾರೆ.

ಶ್ರೀ ಸಿದ್ಧಲಿಂಗೇಶ್ವರರು ಸಾಕಷ್ಟು ಸಂಚಾರ ಮಾಡಿದ್ದಾರೆ. ಆಗ ಶೈವಕ್ಷೇತ್ರ ಗಳನ್ನೂ ಸಂದರ್ಶಿಸಿರಬಹುದು. ಸಂದರ್ಶಿಸುವುದು ಕುತೂಹಲಕ್ಕಾಗಿ, ಕೆಲವೊಮ್ಮೆ ಐತಿಹಾಸಿಕ ಹಿನ್ನೆಲೆಯನ್ನು ಅರಿಯುವುದಕ್ಕಾಗಿ ಇರಬಹುದು. ರೋಗಿಗಳಿದ್ದಲ್ಲಿ ವೈದ್ಯರು ಚಿಕಿತ್ಸೆ ಕೊಡಲು ಧಾವಿಸುವಂತೆ ದಯಾನಂದ ಸರಸ್ವತಿಗಳಂಥವರು ಮೂಢ ಭಕ್ತರು ಸೇರಿದಲ್ಲಿ ಭೋಧೆ ಮಾಡಲು ಹೋಗುತ್ತಾರೆ. ಶ್ರೀ ಸಿದ್ಧಲಿಂಗೇಶ್ವರರು ಬರೆದ ವಚನಗಳಲ್ಲಿ ಏಕದೇವೋಪಾಸನೆ ಸಾಕಷ್ಟು ತೀಕ್ಷ್ಣವಾಗಿದೆ ಎಂಬುದರ ಹಿನ್ನೆಲೆ ಯಲ್ಲಿ ಅವರ ಆಚರಣೆಯನ್ನು ನಿರ್ಧರಿಸಬೇಕು.

ಯಾರು ಯಾವ ರೀತಿ ಧರ್ಮ ಮಂದಿರಗಳನ್ನು ಕಾಯ್ದುಕೊಳ್ಳುವರು, ಅವರ ಸಂಸ್ಕೃತಿ ಹೇಗಿದೆ ಎಂದು ತಿಳಿದುಕೊಳ್ಳಲು ನಾವು ಮುಸ್ಲೀಯರ ದರ್ಗಾಗಳನ್ನು, ಜಯಪುರದ ಗೋವಿಂದ ನಾರಾಯಣ ದೇವಾಲಯವನ್ನು ನೋಡಲು ಹೋಗುತ್ತೇವೆ ಎಂದ ಮಾತ್ರಕ್ಕೆ ಅದರ ಅನುಯಾಯಿಗಳಾಗಿ ಎಂದು ಅರ್ಥಮಾಡಬಾರದು.

ಶರಣರ ಮುದ್ರಿಕೆಗಳು

ಸಾಮಾನ್ಯವಾಗಿ ಶರಣರ ಮುದ್ರಿಕೆಗಳು ಶಿವ ಸಂಸ್ಕೃತಿ ಪ್ರಧಾನವಾಗಿವೆ. ಕೆಲವರವು ಶರಣರ ಹೆಸರು ಹೊತ್ತಿವೆ; ಮತ್ತೆ ಕೆಲವು ತಮ್ಮ ಹೆಸರನ್ನು ಹೊಂದಿರುತ್ತವೆ.

ಸಾಮಾನ್ಯವಾಗಿ ಎಲ್ಲರೂ ಬಾಲ ದಲ್ಲಿ ತಮ್ಮ ಗ್ರಾಮದ ಪ್ರಮುಖ ಅಧಿದೈವ, ತಮ್ಮ ಸನಿಹದ ಬೃಹತ್ ಕ್ಷೇತ್ರದೈವ ಮುಂತಾದುವುಗಳ ಭಾಕ್ತಿಕ ಪ್ರಭಾವಕ್ಕೆ ಒಳಗಾಗಿರು ವುದು ಸಹಜ : ಅದರಂತೆ ಬಸವಣ್ಣನವರೂ, ಅವರ ಬದುಕಿನ ಒಂದು ಮಹತ್ವದ ಘಟ್ಟದಲ್ಲಿ ಅವರು ಬಹುದೇವತೋಪಾಸನೆಯಿಂದ ಏಕದೇವೋಪಾಸನೆಗೆ ಬದಲಾವಣೆ ಹೊಂದಿದರು. ಅಲ್ಲಿಯವರೆಗೂ ನಾಲ್ಕು ಗೋಡೆಗಳ ಮಧ್ಯದಲ್ಲಿ ಸಂಗಮೇಶ್ವರನನ್ನು ಆರಾಧಿಸಿದವರು, ಅಲ್ಲಿಂದ ಮುಂದೆ ವಿಶ್ವವನ್ನು ತುಂಬಿಕೊಂಡಿರುವ ಕರ್ತನನ್ನು ಆರಾಧಿಸತೊಡಗಿದರು. ಇದನ್ನು ಅವರ ವಚನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಬಸವ ಧರ್ಮಕ್ಕೆ ಮಾರುಹೋಗುವ ಮೊದಲು ಲಿಂಗ ಪ್ರತಿಷ್ಠಾಪನೆಯಲ್ಲಿ, ಪೂಜೆ ಯಲ್ಲಿ ಆಸಕ್ತರಾದ ಸಿದ್ಧರಾಮೇಶ್ವರರೇ ಇಷ್ಟಲಿಂಗ ಧಾರಣೆಯ ನಂತರ ಸ್ಥಾವರಾರ್ಚನೆ ತೊರೆಯಲ್ಲಿಲ್ಲವೆ ? ವಚನಗಳಲ್ಲಿ ಮುದ್ರಿಕೆಗಳು ಮಾನಸಾಂತರ [Conversion] ಕ್ಕೆ ಮೊದಲು ಶಿವನನ್ನು ಸಂಕೇತಿಸಿದರೆ, ಮಾನಸಾಂತರ–ದೀಕ್ಷಾನಂತರ ಜಗತ್ಕರ್ತನನ್ನು ಬಿಂಬಿಸುತ್ತವೆ. ಈ ಎರಡು ಘಟ್ಟಗಳನ್ನು ಶರಣರ ವಚನಗಳಲ್ಲಿ ಸ್ಪಷ್ಟವಾಗಿ ಗುರುತಿಸ ಬಹುದು. ಆದ್ದರಿಂದ ವಚನ ಮುದ್ರಿಕೆಗಳು ಒಂದು ರೀತಿಯಿಂದ ಅವರು ಹುಟ್ಟಿ, ಬೆಳೆದು, ಆಡಿ ಬಂದ ಸ್ಥಾನಗಳ ಅಧಿದೈವಗಳ ಹೆಸರು ಹೊತ್ತಿದ್ದರೂ ಈ ಸೀಮಿತತೆ ದಾಟಿ ಜಗತ್‌ಕರ್ತನನ್ನು ಪ್ರತಿನಿಧಿಸುತ್ತವೆ.

"ಶಿವದೇವಾಲಯಗಳಿಗೆ ಹೋಗಿ ಬಂದರೂ ಮೈಮೇಲೆ ಇಷ್ಟಲಿಂಗ ಧಾರಣೆಯನ್ನು ಮಾಡುವವರೆಲ್ಲ ವೀರಶೈವರು. ಇಷ್ಟಲಿಂಗಧಾರಣೆ ವೀರಶೈವ ಧರ್ಮದ ಮುಖ್ಯ ಲಕ್ಷಣ, ದೇವಾಲಯ ನಿರಾಕರಣೆ ಅಲ್ಲ." ಇದು ಶ್ರೀ ಚಿದಾನಂದ ಮೂರ್ತಿಯವರ ಅಭಿಪ್ರಾಯ. ಇದು ಹೇಗಿದೆ ಎಂದರೆ "ಒಬ್ಬ ವ್ಯಕ್ತಿ ಸರ್ಕಾರಿ ಅಧಿಕಾರಿಯಾಗಿರ ಬೇಕಾದರೆ ದಿನ ನಿತ್ಯ ಕಛೇರಿಗೆ ಹೋಗಿ ಹಾಜರಿ ಹಾಕುವುದು ಮುಖ್ಯ ಲಕ್ಷಣ. ಅವನು ಕೆಲಸಮಾಡಬೇಕೆಂದೇನೂ ಇಲ್ಲ ; ಮತ್ತು ಲಂಚತಿನ್ನಬಾರದೆಂದೇನಿಲ್ಲ ಲಂಚ ತಿಂದೂ, ಕೆಲಸ ಮಾಡದೆಯೂ, ಹಾಜರಿ ಹಾಕಿ ಸರ್ಕಾರಿ ಉದ್ಯೋಗಿಯಾಗಿರಬಹುದು.

ನಿಜ, ಹಾಜರಿ ಹಾಕಿದ ಮಾತ್ರಕ್ಕೆ ಯಾಂತ್ರಿಕವಾಗಿ ಒಂದು ಕೆಲಸ ಮಾಡಿದಂತಾ ಯಿತು. ಆದರೆ ಸರ್ಕಾರಿ ಉದ್ಯೋಗಿಯಾಗಿ ಅವನು ತನಗೆ ವಿಧಿಸಿದ ಕರ್ತವ್ಯ ಮಾಡಬೇಕಲ್ಲವೆ ? ತತ್ತ್ವ ತಿಳಿಯದು ಲಿಂಗವಂತರ ಏನೆಲ್ಲ ಮಾಡುತ್ತಾರೆ ಅಂದ ಮಾತ್ರಕ್ಕೆ ಆ ಧರ್ಮವು ಆ ಆಚರಣೆಗೆ ಅವಕಾಶ ಕೊಟ್ಟಿದೆ ಎಂದರ್ಥವಲ್ಲ. ಧರ್ಮದ ಮರ್ಮವು ತಿಳಿದು ಬರುವುದು ಅದರ ನಿಜವಾದ ಅನುಯಾಯಿಗಳ ಆಚರಣೆ ಯಿಂದ, 'ಜನಗಣತಿ' ಅನುಯಾಯಿಗಳಿಂದಲಲ್ಲ: ಒಬ್ಬ ಗಂಡನುಳ್ಳವಳು ಅನೈತಿಕ

ವ್ಯವಹಾರಗಳನ್ನು ಮಾಡುತ್ತಾಳೆ ಎಂಬುದರ ಮೇಲೆ ಅದು ಗರತಿಯ ಲಕ್ಷಣ ಎಂದು ನಿರ್ಧರಿಸಬಾರದು. ನಿಜವಾದ ಗರತಿಯ ಆಚರಣೆಯಿಂದ ಗರತಿಯ ಲಕ್ಷಣ ನಿರ್ಧರಿಸಿ, ಗಂಡನಿದ್ದೂ ಅನೈತಿಕವಾಗಿ ನಡೆಯುವವಳಿಗೆ ತಿಳಿ ಹೇಳಬೇಕು.

ಜಗತ್ಕರ್ತನಾದ ಪರಮಾತ್ಮನನ್ನು ಇಷ್ಟಲಿಂಗರೂಪದಲ್ಲಿ ಅಂಗಕ್ಕೆ ಸಂಬಂಧಿಸಿ ಗುರುವು ಗಣಸಾಕ್ಷಿಯಾಗಿ ದೀಕ್ಷೆ ಎಂಬ ವಿವಾಹ ಮಾಡಿದಾಗ ಆ ಭಕ್ತ ನಿಜ ಭಕ್ತನಾಗಿದ್ದರೆ ಅವನ ಅಂತರಾತ್ಮ ಸಹಜವಾಗಿ ಅನ್ಯ ದೈವಂಗಳ ಆರಾಧನೆಗೆ ಎಳಸದು. ಧರ್ಮ ವರಿಯದ ಒಬ್ಬ ಅನುಯಾಯಿಯನ್ನು ಅಳತೆಗೋಲಾಗಿಟ್ಟುಕೊಂಡು ಎಷ್ಟು ಸುಲಭವಾಗಿ ಚಿದಾನಂದ ಮೂರ್ತಿಯವರು ಲಿಂಗಧಾರಣೆ ಇದ್ದರಾಯಿತು; ದೇವಾಲಯಗಳಿಗೆ ಹೋಗಿ ಬಂದರೂ ತಪ್ಪಿಲ್ಲ ಎನ್ನುವರಲ್ಲ, ಎಂಥಾ ಸೋಜಿಗದ ಮಾತಿದು !

ಹಾಗಾದರೆ ಕೆಳಗಿನ ಈ ಶರಣರ ಮಾತುಗಳ ಅರ್ಥವೇನು ?

1. ಅಂಗದ ಮೇಲೆ ಲಿಂಗವಿದ್ದು ಸ್ಥಾವರಲಿಂಗಕ್ಕೆ ಶರಣೆನ್ನಲಾಗದು, ಅನ್ಯಲಿಂಗವ ಮುಟ್ಟಿ ದರ್ಶನ ಮಾಡುವ ಕುನ್ನಿಗಳ ನೇನೆಂಬೆನಯ್ಯಾ ?

--ಚನ್ನಬಸವಣ್ಣ. 239

2. ಹಾಲು ಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ ?

–ಮ. ವ. 157

ಇಂಥ ಉಲ್ಲೇಖಗಳನ್ನು ಬೇಕಾದಷ್ಟು ಕೊಡಬಹುದು : ಈ ಲೇಖನದ ದೃಷ್ಟಿಯಿಂದ ಇಷ್ಟು ಸಾಕು.

ಶ್ರೀ ಚಿದಾನಂದ ಮೂರ್ತಿಯವರ ಒಂದೊಂದು ಮಾತೂ ಚಿಕಿತ್ಸಕ ವಿಶ್ಲೇಷಣೆಗೆ ವಿಶ್ಲೇಷಣೆಗೆ ಆಹಾರವನ್ನೊದಗಿಸುತ್ತವೆ. ಕಡೆಯ ಪ್ಯಾರಾಗ್ರಾಫ್‌ದಲ್ಲಿ ಬರುವ ಒಂದು ವಿಚಾರ ಮಾತ್ರ ಪ್ರಸ್ತಾಪಿಸಿ, ಸಂದೇಹಕ್ಕೆ ಉತ್ತರಿಸುವೆ,

"ಬುದ್ಧ, ಮಹಮ್ಮದ್ ಪೈಗಂಬರರು ತಮ್ಮ ಧರ್ಮಗಳನ್ನೇ ಸ್ಥಾಪಿಸಿ ತಮ್ಮ ಶಿಷ್ಯರಿಗೆ ಬೋಧಿಸಿದಂತೆ ಬಸವಣ್ಣನವರು ಹೊಸದಾಗಿ ವೀರಶೈವ ಧರ್ಮ ಸ್ಥಾಪಿಸಿ ತಮ್ಮ "ಶಿಷ್ಯರಿಗೆ" ಬೋಧಿಸಿದ ವರ್ಣನೆ ಎಲ್ಲಿಯೂ ಬರುವುದಿಲ್ಲ. ಮತ ಸ್ಥಾಪಕರು ಗುರುಗಳಾಗಿ ಉಳಿದವರೆಲ್ಲ ಅವರ ಶಿಷ್ಯರಾಗುತ್ತಾರೆ. ಬಸವಣ್ಣನವರ ವಿಷಯದಲ್ಲಿ ಹಾಗಾಗಿದೆಯೇ ? " ಚಿದಾನಂದ ಮೂರ್ತಿಯವರ ಅಳವನ್ನು ಇದೊಂದು ಹೇಳಿಕೆಯಿಂದಲೇ ಅಳೆದುಬಿಡಬಹುದು. "ಬಸವಣ್ಣ ಗುರು ನಾನವರ ಶಿಷ್ಯ" ಎಂಬ ಮಾತನ್ನು ಹಲವಾರು ಶರಣರು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

ಚನ್ನಬಸವಣ್ಣ ಅವರಿಂದ ನೇರ ಅನುಗ್ರಹ ಪಡೆದ ವ್ಯಕ್ತಿ. ನೂರಾರು ವಚನಗಳಲ್ಲಿ ಗುರು–ಶಿಷ್ಯ ಸಂಬಂಧವನ್ನು ವರ್ಣಿಸಿದ್ದಾನೆ. ಪ್ರಭುದೇವರು ಹೇಳುತ್ತಾರೆ :

1. ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೂ ಗುರು

2. "ನೀನು ಮಾಡಲು ಆನಾದೆನಲ್ಲದೆ ಎನಗೆ ಬೇರೆ ಸ್ವತಂತ್ರ ಉಂಟೆ ?
3. "ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ
4. ನಿನಗೆ ನೀನೇ ಕರ್ತನು ಬಸವಾ
ಎನಗೆ ನೀನೇ ಕರ್ತನು ಬಸವಾ —ಸಿದ್ಧರಾಮೇಶ್ವರ
5. ಕಷ್ಟಕುಲದಲ್ಲಿ ಹುಟ್ಟಿದ ಸೂತಕವ ಕಳೆದು
ಮುಟ್ಟಿ ಪಾವನವ ಮಾಡಿದನಯ್ಯಾ ಬಸವಣ್ಣನು —ಡೋಹರ ಕಕ್ಕಯ್ಯ

(ಈ ಬಗ್ಗೆ ನೂರಾರು ವಚನಗಳನ್ನು ನೋಡುವುದಾದರೆ ನಾನು ಸಂಪಾದಿಸಿರುವ "ನುಡಿ ನೈವೇದ್ಯ" ಲಿಂ॥ ಹ. ದೇ. ಚಂದನಗೌಡರು ಪ್ರಕಟಿಸಿರುವ "ಶರಣರು ಕಂಡ ಬಸವಣ್ಣ" ಪುಸ್ತಕಗಳನ್ನು ದಯವಿಟ್ಟು ಓದಲಿ.)

ಸಮಕಾಲೀನ ಶರಣರು ಗುರುಸ್ಥಾನದಲ್ಲಿಟ್ಟು ಬಸವಣ್ಣನವರನ್ನು ಗೌರವಿಸಿದರಷ್ಟೇ ಅಲ್ಲ, ಅವರ ಜೀವಿತ ಕಾಲದಲ್ಲೇ ಅವರ ಹೆಸರು ಮಂತ್ರವಾಯಿತು. ಆದರೆ ಧರ್ಮ ಪಿತರ ವೈಶಿಷ್ಟ್ಯವೆಂದರೆ ತಾವು ಗುರುವೆಂದು ಬೀಗಿ ಇತರರನ್ನು ಶಿಷ್ಯರೆಂದು ಭಾವಿಸದೆ ಎಲ್ಲ ಶರಣರಿಗೂ ಗಣನೀಯ ಸ್ಥಾನವನ್ನು ಕೊಟ್ಟಿದ್ದು. ಅದು ಉಳಿದ ಪ್ರವಾದಿಗಳಲ್ಲಿ ಕಾಣಬರದ, ಬಸವಣ್ಣನವರಲ್ಲಿ ಕಾಣುವ ವೈಶಿಷ್ಟ್ಯ. ಇದು ಅವರ ಪ್ಲಸ್ (+) ಪಾಯಿಂಟ್ ಎಂದು ಭಾವಿಸಬೇಕೇ ವಿನಾ ಚಿದಾನಂದ ಮೂರ್ತಿಯವರಂತೆ ಮೈನಸ್ (–) ಪಾಯಿಂಟ್ ಎಂದು ಅಲ್ಲ.

"ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು; ಆದಿ ಗುರು" ಎಂಬುದನ್ನು "ಉತ್ತಂಗಿ ಚನ್ನಪ್ಪನವರು ಅರ್ಥಮಾಡಿಕೊಂಡಷ್ಟೂ ನಮ್ಮ ಸಾಹಿತಿಗಳು ಮಾಡಿಕೊಳ್ಳುತ್ತಿಲ್ಲ. ಅವರುಗಳಿಗೆ ಇದ್ದ ತಾತ್ತ್ವಿಕ ಮತ್ತು ತೌಲನಿಕ ಅಧ್ಯಯನದ ತರಬೇತಿ ಭಾಷಾ ಪಂಡಿತರಿಗೆ ಇರದಿರುವುದು ಒಂದು ಕಾರಣವಾದರೆ, ಅಂತರಂಗದ ಮೂಲೆಯಲ್ಲಿ ಗುರು ಬಸವಣ್ಣನವರಿಗೆ ಗುರುಸ್ಥಾನವನ್ನು ಕೊಡಬಾರದೆಂಬ ಅಸಹನೆ ಇನ್ನೊಂದು ಕಾರಣ. ನಮ್ಮ ದೇಶದಲ್ಲಿ ಬರವಣಿಗೆಯು ಜಾತಿ, ಒಳಪಂಗಡ, ತಾನು ಆಶ್ರಯಿಸಿದ ಮಠ, ಆಶ್ರಯದಾತರಾದ ಸ್ವಾಮಿಗಳು ಇವೆಲ್ಲವುಗಳಿಂದ ನಿರ್ಬಂಧಿತವಾಗಿರುತ್ತದೆ. Blood is thicker than water ಎನ್ನುವ ಮಾತು ಇಲ್ಲಿ ಅದು ಪರಮ ಸತ್ಯ. ಹಿಂದೊಮ್ಮೆ ಪ್ರಾಮಾಣಿಕವಾಗಿ ಅಧ್ಯಯನ ಮಾಡುತ್ತಿದ್ದ, ಬರೆಯುತ್ತಿದ್ದ, ಸಾಹಿತಿಗಳಲ್ಲೇ ಇದನ್ನು ಗುರುತಿಸಿ ನಾವು ದಂಗಾಗಿದ್ದೇವೆ. ಅವರು ಸಾಹಿತ್ಯ-ಇತಿಹಾಸಗಳನ್ನು ವಿಕೃತಗೊಳಿಸುವುದನ್ನು ಕಂಡು ಬೆರಗಾಗಿದ್ದೇವೆ. ಆದ್ದರಿಂದ ಡಾ॥ ಚಿದಾನಂದ ಮೂರ್ತಿಯವರು ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮದ ತತ್ತ್ವಗಳನ್ನು ವಿಕೃತಗೊಳಿಸುವ ಬದಲು ತಾವು ತಿಳಿದ ವೀರಶೈವದ ಬಗ್ಗೆ ವಚನ ಶಾಸ್ತ್ರದ ಆಧಾರ

(79 ನೇ ಪುಟಕ್ಕೆ ಮುಂದುವರಿದಿದೆ)

ಇದೇ ಲೇಖನದಲ್ಲಿ ತಿದ್ದುಪಡಿ : ಪುಟ 33, 3 ನೇ ಪ್ಯಾರಾಗ್ರಾಫದಲ್ಲಿ ಈಗಿರುವುದು, "ಟೂತ್ ಪೇಸ್ಟ್ ಟ್ಯೂಬಿನಂತೆ ತಮ್ಮ ವಿಚಾರಗಳನ್ನು ಒಳಗೆ ಸೇರಿಸಿಕೊಳ್ಳುವ"–ತಪ್ಪು. ಇರಬೇಕಾದುದು, "ಟೂತ್‌ಪೇಸ್ಟ್ ಟ್ಯೂಬಿನಂತೆ ತಮ್ಮ ವಿಚಾರಗಳನ್ನು ಹೊರಹಾಕುತ್ತಿರುತ್ತಾರೆಯೇ ವಿನಾ ಅವರಲ್ಲಿ ಇನ್ನಿತರರ ವಿಚಾರಗಳನ್ನು"–ಸರಿ.

“ಬೆಳ್ಳಿತ್ತಿನ ಮರೆಯಲ್ಲಿದ್ದು ಹುಲ್ಲೆಗಂಬ ಬಿಟ್ಟ ವೀರಶೈವ ಮಹಾಧಿವೇಶನ”

ಭಾಗ – 2

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

(ಮಾರ್ಚ್ - ಏಪ್ರಿಲ್ 1992 ರ ಕಲ್ಯಾಣ ಕಿರಣದ 53 ನೇ ಪುಟದಿಂದ ಮುಂದುವರಿದ ಭಾಗ)

ತಾತ್ತ್ವಿಕ ನಿಖರತೆ, ಸೈದ್ಧಾಂತಿಕ ಸ್ಪಷ್ಟತೆ ಧರ್ಮ–ಸಮಾಜಗಳ ಸುಸ್ಥಿತಿಗೆ ಬಹಳ ಅತ್ಯಗತ್ಯ. ಒಬ್ಬ ಧರ್ಮ ಸ್ಥಾಪಕನನ್ನು ಒಪ್ಪಿಕೊಂಡ ಧರ್ಮಗಳು ಎಷ್ಟು ಸುಸ್ಥಿತಿಯಲ್ಲಿವೆ; ಎಂತಹ ಸಂಘಟನಾ ಸಾಮರ್ಥ್ಯ ಹೊಂದಿವೆ ಎನ್ನುವುದು ಅಧ್ಯಯನಾರ್ಹ. ಆದ್ದರಿಂದ ಇಂದು ವಿಚಾರಶೀಲರಾದವರು ಪಂಚಾಚಾರ್ಯರು ಮತ ಸ್ಥಾಪಕರು ಎನ್ನುವ ಸನಾತನವಾದಿಗಳಿಂದ; ಪಂಚಾಚಾರ್ಯರೂ ಅಲ್ಲ, ಬಸವಣ್ಣನವರೂ ಅಲ್ಲ ಎನ್ನುವ ಗೊಂದಲಮಯ ವಿದ್ವಾಂಸರಿಂದ ಗಲಿಬಿಲಿಗೊಳ್ಳದೆ ಖಚಿತವಾದ ನಿಲುವನ್ನು ತಳೆಯಬೇಕು. ಕೇವಲ ಭಾವುಕ ನಂಬಿಕೆಯ ಮೇಲೇನೂ ನಿಲ್ಲಬೇಕಾಗಿಲ್ಲ, ವಚನ ಸಾಹಿತ್ಯ ಒದಗಿಸುವ ಖಚಿತ ಆಧಾರಗಳ ಮೇಲೆಯೇ ದೃಢವಾಗಿ ನಿಂತು ಬಸವ ಧರ್ಮವನ್ನು ಸರಿಯಾಗಿ ಪ್ರತಿಪಾದಿಸಬೇಕು. ಯಾರನ್ನೋ ಒಲಿಸಲು, ಓಲೈಸಲು ಪ್ರಖರವಾದ ಬಸವ ತತ್ತ್ವವನ್ನು ವಿಕೃತಗೊಳಿಸಿ ಅಥವಾ ಮುಚ್ಚಿಟ್ಟು ಮಾತನಾಡಬಾರದು.

ಮಹಾಸಭಾಧ್ಯಕ್ಷರ ಭಾಷಣ

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನ ವಹಿಸಿಕೊಂಡ ಶ್ರೀ ಶರಣ ಬಸಪ್ಪ ಅಪ್ಪಾ ಅವರು 42 ಪುಟಗಳ ಸುದೀರ್ಘ ಭಾಷಣವನ್ನು ಮುದ್ರಿಸಿ ಹಂಚಿದ್ದಾರೆ. ಅಂಥ ಒಂದು ದೊಡ್ಡ ಸ್ಥಾನವನ್ನು ಅಲಂಕರಿಸಿದ ಶ್ರೀಯುತರ ವಿಚಾರಧಾರೆ ನೋಡಿದರೆ ಎಷ್ಟು ಅಪಕ್ವ ಮತ್ತು ಅಸ್ಪಷ್ಟ ಎಂಬುದು ಸಾಬೀತಾಗದೆ ಇರದು. ಪೂರ್ಣ ಭಾಷಣದ ವಿವರ ಮುದ್ರಿಸಲು ವಿಪರೀತ ದೀರ್ಘವಾಗುವುದರಿಂದ, ಆಯ್ದ ವಾಕ್ಯಗಳನ್ನು ಉಲ್ಲೇಖಿಸಿ ವಿಮರ್ಶಿಸುತ್ತಿದ್ದೇನೆ. ಪುಟ 2 ರಲ್ಲಿ ಅರವತ್ತುಮೂರು ಪುರಾತನರಿಂದ ಹಿಡಿದು ಪರಂಪರೆಯ ಉಲ್ಲೇಖ ಮಾಡಿ ಹೀಗೆ ಬರೆಯುತ್ತಾರೆ:

“ಅರವತ್ತುಮೂರು ಮಂದಿ ಪುರಾತನರು, ರೇಣುಕಾದಿ ಪಂಚಾಚಾರ್ಯರು, ಬಸವಾದಿ ಪ್ರಮಥರು, ಮುಂದೆ ಬಂದ ನೂರೊಂದು ವಿರಕ್ತರು, ತೋಂಟದ ಸಿದ್ಧಲಿಂಗರು, ನಿಜಗುಣ ಶಿವಯೋಗಿ, ಸರ್ವಜ್ಞ, ಷಣ್ಮುಖ ಶಿವಯೋಗಿ, ಶರಣ ಬಸವೇಶ್ವರಾದಿ ಮುಂತಾದ ಅನಂತ ಶರಣರು, ಕವಿಗಳು, ಮಹಾಪುರುಷರು ಭಕ್ತಿ ದಾಸೋಹದ ಗಂಗೆಯಲ್ಲಿ ಮಿಂದು ಪಾವನರಾಗಿರುವರು.”

ಇವರ ದೃಷ್ಟಿಯಲ್ಲಿ ಬಸವಣ್ಣನವರು **ಹತ್ತರೊಳಗೆ ಹನ್ನೊಂದು.** ಮತ್ತು ಮೂಲಭೂತ ನಂಬಿಕೆ-ಆಚರಣೆಗಳಲ್ಲಿ ಸಂಪೂರ್ಣ ವ್ಯತ್ಯಾಸವಿರುವ **ಅರವತ್ತು-**

ಮೂರು ಪುರಾತನರನ್ನು ಶರಣ ಪರಂಪರೆ ಯಲ್ಲಿ ಸೇರಿಸಿರುವುದು ಇವರಿಗೆ ಸ್ವ-ಧರ್ಮದ ಬಗ್ಗೆ ಎಷ್ಟು ತಿಳುವಳಿಕೆ ಇದೆ ಎಂಬುದನ್ನು ಖಚಿತಪಡಿಸುತ್ತದೆ. ಮಗನನ್ನೇ ಕಡಿದಿಟ್ಟು ಜೋಗಿಗೆ ಮಾಂಸಾಹಾರ ಉಣಲಿಟ್ಟ ಸಿರಿಯಾಳ; ತನ್ನ ಹೆಂಡತಿಯನ್ನೇ ಅಲೆಮಾರಿ ಸನ್ಯಾಸಿಗೆ ಶಿವನೆಂದು ಬಗೆದು, ಕೊಟ್ಟ ಸಿಂಧುಬಲ್ಲಾಳ, ತನ್ನ ಪ್ರೇಮ ವ್ಯವಹಾರಕ್ಕೆ ಶಿವನನ್ನು ಕುಂಟಣಿಯಾಗಿ ಮಾಡಿಕೊಂಡ ಸೌಂದರ ನಂಬಿ, ಇವರದೆಲ್ಲ ಅತಿರೇಕದ ಭಕ್ತಿ ಎಂದು ಬಸವಾದಿ ಪ್ರಮಥರು ಟೀಕಿಸಿದ್ದಾರೆ.

ಬಾಲ್ಯಾವಸ್ಥೆಯಲ್ಲಿ, ಸ್ವತಂತ್ರ ಚಿಂತನೆ ಮೊಳೆಯುವ ಮುನ್ನ ಪುರಾತನರನ್ನು ಕೊಂಡಾಡಿದ್ದರೂ ಬಸವಾದಿ ಪ್ರಮಥರು ನಂತರ ತೀಕ್ಷ್ಣವಾಗಿ ಟೀಕಿಸಿದ್ದಾರೆ; “ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ” ಎಂದು. ಪರಂಪರೆಯ ಹಿರಿಯರು ಎಂದು ಯಾರನ್ನೇ ಒಪ್ಪಿಕೊಂಡ ಮೇಲೆ ಅವರು ಅನುಕರಣೀಯರಿರಬೇಕು ಮತ್ತು ಅವರ ಆದರ್ಶ ಅನುಕರಣೀಯವಾಗಿರಬೇಕು. ಹಾಗಾದರೆ ಸಿರಿಯಾಳ, ಸಿಂಧುಬಲ್ಲಾಳ, ನಂಬಿ ಮುಂತಾದವರ ಭಕ್ತಿ ಲಿಂಗವಂತರಿಗೆ (ಮತ್ತು ಯಾರಿಗೇ ಆಗಲಿ) ಯೋಗ್ಯವೆ ? ಕ್ರೈಸ್ತರಿಗೆ ಹಳೆ ಒಡಂಬಡಿಕೆ, ಅದರಲ್ಲಿಯ ಮೋಸೆಸ್ ಮುಂತಾದವರು ಬರುವಂತೆ, ಲಿಂಗವಂತರಿಗೆ ಶಿವಾಗಮಗಳು ಮತ್ತು ಶೈವ ಪುರಾತನರು. ಕ್ರೈಸ್ತರಿಗೆ ಹಳೆ ಒಡಂಬಡಿಕೆ (Old Testament) ಹೇಗೆ ಮಾನ್ಯವಲ್ಲವೋ ಹಾಗೆ ಶರಣರಿಗೆ ಶಿವಾಗಮಗಳು ಮತ್ತು 63 ಪುರಾತನರ ವಿಚಾರ ಮಾನ್ಯವಾಗಿಲ್ಲ. ನಮ್ಮೆಲ್ಲರನ್ನು, ಜಗತ್ತನ್ನು ಸೃಷ್ಟಿ ಮಾಡಿದ ದೇವರ ಸ್ವರೂಪ, ಏಕದೇವೋಪಾಸನೆಯ ಮಹತ್ವ ತಿಳಿದವರಿಗೆ ಮಾತ್ರ ಬಸವಾದಿ ಪ್ರಮಥರ ತತ್ತ್ವದ ಆಳ ವಿಸ್ತಾರಗಳು ತಿಳಿದಾವೇ ವಿನಾ ಅನ್ಯರಿಗಲ್ಲ.

ಧರ್ಮಸ್ಥಾಪಕನ ವಿಚಾರ

ಜಗತ್ತಿನಲ್ಲಿ ಎರಡು ಪ್ರಕಾರದ ಧರ್ಮಗಳಿರುವುದಾಗಿ ಮಹಾಸಭಾಧ್ಯಕ್ಷರು ಪ್ರಸ್ತಾಪಿಸಿ ಅವು ನೈಸರ್ಗಿಕ ಧರ್ಮ ಮತ್ತು ವ್ಯಕ್ತಿಸ್ಥಾಪಿತ ಧರ್ಮಗಳು ಎಂದು ಹೇಳಿ ವೀರಶೈವ ಧರ್ಮವು ನೈಸರ್ಗಿಕ ಧರ್ಮ ಎಂದು ಹೇಳಿದ್ದಾರೆ. “ಇಂಥ ಪರಂಪರೆಯನ್ನೇ ಶೈವ–ವೀರಶೈವ ಧರ್ಮಗಳು ಹೊಂದಿವೆ. ಶೈವ ಧರ್ಮದ ಮೂಲಸ್ಥಾಪಕನಾರೆಂಬುದು ತಿಳಿದಿಲ್ಲ; ಅದರಂತೆ ವೀರಶೈವ ಧರ್ಮದ ಸ್ಥಾಪಕನಾರೆಂದು ತಿಳಿಯುವುದಿಲ್ಲ” (ಪುಟ 4-5) ಎನ್ನುತ್ತಾರೆ.

ಶ್ರೀ ಶರಣ ಬಸಪಪ್ಪ ಅಪ್ಪಾ ಅವರು ತತ್ತ್ವಜ್ಞಾನ ಓದಿದವರೆಂದು ಯಾರಿಂದಲೋ ಕೇಳಿದ್ದೆ. ಆದರೆ ಈ ಪುಟಗಳನ್ನು ಓದಿದರೆ ಖಂಡಿತ ಸಂದೇಹ ಬರುವುದು. ನೈಸರ್ಗಿಕ ಧರ್ಮ ಮಾನವ ಸಮಾಜದ ಬೆಳವಣಿಗೆಯಲ್ಲಿ ಬರುವ ಅತ್ಯಂತ ಕೆಳ ಶ್ರೇಣಿಯ ಕಲ್ಪನೆ. ಆದಿ ಮಾನವನ ಕಾಲದಲ್ಲಿ ಅದೇ ಆಗ ಮಂಗಪ್ರಜ್ಞೆಯಿಂದ ಮಾನವನ ಸ್ಥಿತಿಯನ್ನು

ಪಟ್ಟಿ, ಗುಂಪುಗಳಲ್ಲಿ ಮನುಷ್ಯ ಜೀವಿಸುತ್ತಿದ್ದ. ವಂಶ, ಕುಲ, ಜನಾಂಗ ಇವುಗಳ ಮೇಲೆ ಆ ಬುಡಕಟ್ಟುಗಳು [Tribes] ನಿರ್ಧಾರವಾಗುತ್ತಿದ್ದವು. ತಮ್ಮ ಬುಡಕಟ್ಟುಗಳ ಜನರನ್ನು ಗುರುತಿಸಿಕೊಳ್ಳುವುದಕ್ಕೆ, ಅಪಾಯದಲ್ಲಿ ರಕ್ಷಿಸಲಿಕ್ಕೆ ತಮ್ಮವೇ ಆದ ಕೆಲವು ಕುರುಹುಗಳನ್ನು ಹೊಂದಿರುತ್ತಿದ್ದರು. ಇವಕ್ಕೆ ಟೋಟೆಮ್ ಎಂದು ಕರೆಯಲಾಗಿದೆ. ಒಂದು ಬುಡಕಟ್ಟಿಗೆ ಹಾವು ಟೋಟೆಮ್ – ಬಣಲಾಂಛನವಾದರೆ ಮತ್ತೊಬ್ಬರಿಗೆ ಒನಕೆ ಬಣಲಾಂಛನ ಆಗಿರಬಹುದಿತ್ತು. ಗಿಡ, ಮರ, ಹಸು, ನಾಯಿ, ಎಕ್ಕೆಗಿಡ ಹೀಗೆ ಯಾವುವಾದರೂ ಬಣಲಾಂಛನವಾಗಿರುತ್ತಿದ್ದವು. ಮಾನವನ ಬೌದ್ಧಿಕ ಬೆಳವಣಿಗೆಯಾಗುತ್ತ ಬಂದಾಗ ಸುಧಾರಿಸಿದ ಧರ್ಮದ ಕಲ್ಪನೆ ಬಂದಿತು. ರಾಷ್ಟ್ರ ಧರ್ಮ, ವಿಶ್ವಧರ್ಮಗಳ ಕಲ್ಪನೆ ಬಂದಿತು. ವೇದಗಳಲ್ಲಿ ಆರಂಭದ ದಿನಗಳಲ್ಲಿ ಬರೆದ ಋಕ್ಕುಗಳನ್ನು ನೋಡಿದಾಗ ಹೇಗೆ ವಿವಿಧ ಜನರು ವಿವಿಧ ರೀತಿಯಲ್ಲಿ ಬರೆದರೆಂಬುದು ಕಾಣುತ್ತದೆ. ನೈಸರ್ಗಿಕ ಧರ್ಮವೆಂದರೆ ಜಲಾನಯನ ಪ್ರದೇಶದಲ್ಲಿ ಮಳೆ ಬಿದ್ದು, ಹರಿದು, ಬರುವಾಗ ಸಾಕಷ್ಟು ಕೊಳೆಯನ್ನು ಹೊತ್ತು ತರುವಂತೆ.ಅಲ್ಲಿ Consistency ಸುಸಂಬದ್ಧತೆ ಬಹಳ ಕಡಿಮೆ. ಒಂದು ಕಡೆ ನಿರ್ಗುಣ ಬ್ರಹ್ಮನ ವರ್ಣನೆ ಇದ್ದರೆ ಇನ್ನೊಂದು ಕಡೆ ಉಷಸ್, ಮರುತ್ ಮುಂತಾದ ದೇವತೆಗಳ ವರ್ಣನೆ ಇರುವುದು. ನೈಸರ್ಗಿಕವಾಗಿ ಹರಿದ ನೀರಿಗೆ ಹೇಗೆ ಶುದ್ಧೀಕರಣ ಅಗತ್ಯವೋ ಹಾಗೆ ನೈಸರ್ಗಿಕ ಧರ್ಮಕ್ಕೂ ಶುದ್ಧೀಕರಣ ಅಗತ್ಯವಾಗುತ್ತದೆ. ಹೀಗೆ ಐತಿಹಾಸಿಕ ಅಗತ್ಯವಾಗಿ ವಿಶ್ವಧರ್ಮಗಳು ಪ್ರತಿಭಾವಂತನಾದ ಒಬ್ಬ ವ್ಯಕ್ತಿಯಿಂದ ಜನಿಸಿ, ನೈಸರ್ಗಿಕ ಧರ್ಮಗಳ ಲೋಪವನ್ನು ತೊಡೆದು ಹಾಕುತ್ತವೆ. ಯಹೂದಿ ಧರ್ಮ ನೈಸರ್ಗಿಕ ಧರ್ಮವಾದರೆ ಅದನ್ನು ಸುಧಾರಿಸಲು, ಅಥವಾ ಪ್ರತಿಭಟಿಸಲು ಹುಟ್ಟಿದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳೇ ಸುಧಾರಣಾ ಧರ್ಮಗಳು,ಅವೇ ವಿಶ್ವಧರ್ಮಗಳು. ಇದೇ ರೀತಿ ಭಾರತದಲ್ಲಿಯೂ ವೈದಿಕ ಧರ್ಮದ ಸುಧಾರಣೆಗಾಗಿ ಅಥವಾ ಪ್ರತಿಭಟನೆಗಾಗಿ ವೈದಿಕ ಧರ್ಮದ ಲೋಪ ತೊಡೆಯಲು ಹುಟ್ಟಿದವು, 4 ಅವರ್ಣೀಯ ಧರ್ಮಗಳು. ಅವೇ ಬೌದ್ಧ, ಜೈನ, ಲಿಂಗಾಯತ ಮತ್ತು ಸಿಖ್ ಧರ್ಮಗಳು. ಇವು ಸುಧಾರಣಾ ಧರ್ಮಗಳು ಮತ್ತು ವಿಶ್ವಧರ್ಮದ ಲಕ್ಷಣಗಳುಳ್ಳವು.

ಹೀಗೆ ಹುಟ್ಟುವ ಧರ್ಮಗಳು ನೈಸರ್ಗಿಕ ಧರ್ಮಗಳ ಆಚರಣೆಗಳನ್ನು ತೊಡೆದು ಹಾಕುತ್ತವೆ. ಆದಿವಾಸಿ ಬುಡಕಟ್ಟುಗಳವರು ಮನಸ್ಸಿಗೆ ಬಂದಂತೆ ಏನನ್ನೋ ಆಚರಿಸುತ್ತಿರುತ್ತಾರೆ. ಇಂಥವನ್ನೂ ತೊಡೆದು ಒಂದು ಸುಧಾರಿಸಿದ, ನಾಗರಿಕತೆಯಿಂದ ಕೂಡಿದ ಆಚರಣೆಗಳನ್ನು ವಿಶ್ವಧರ್ಮಗಳು ಪ್ರತಿಪಾದಿಸುತ್ತವೆ.

ವಚನ ಸಾಹಿತ್ಯದಲ್ಲಿ ಬೇಕಾದಷ್ಟು ಉದಾಹರಣೆ ಬರುತ್ತವೆ. ಕ್ಷುದ್ರ ದೈವಂಗಳು ವಿವಿಧ ಬುಡಕಟ್ಟುಗಳ ಬಣಲಾಂಛನವಾಗಿರುತ್ತವೆ. ಮಡಕೆ ದೈವ, ಮೊರ ದೈವ,

ಬೀದಿಯ ಕಲ್ಲು ದೈವ, ಗಿಣ್ಣಲು ದೈವ, ಒನಕೆ ದೈವ, ಒರಳು ದೈವ, ಮಜ್ಜಿಗೆ ಕಡೆಯುವ ಕಂಭ ದೈವ, ಮಾರಬೀರಗಾವಿಲ, ಅಂತರ-ಬೆಂತರ ಇವೆಲ್ಲ ಆದಿವಾಸಿ ಬುಡಕಟ್ಟಿನ ಬಣಲಾಂಛನಗಳು. ಇದರಲ್ಲೇ ಕಾಲಕಳೆಯುವ ಮೂಢರನ್ನು ಕಂಡು ಮರುಕಗೊಂಡು ಗುರು ಬಸವಣ್ಣನವರಂಥ ಪ್ರವಾದಿಗಳು ಒಬ್ಬ ಕರ್ತನ ಕಲ್ಪನೆ ಕೊಟ್ಟು ಅವನ್ನು ಬಿಡಿಸಿದರು. [ಆದರೆ ಕರ್ನಾಟಕದ ವಿಶೇಷ ಮುಖ್ಯಮಂತ್ರಿ ಶ್ರೀ ಬಂಗಾರಪ್ಪನವರು ಜನರನ್ನು ವೈಚಾರಿಕತೆಗೆ ಒಯ್ಯುವ ಬದಲು ಚೀಪ್ ಪಾಪ್ಯುಲಾರಿಟಿಗಾಗಿ 'ಆರಾಧನಾ' ಅಡಿಯಲ್ಲಿ ಎಲ್ಲ ಕ್ಷುದ್ರ ದೈವಂಗಳ ಉಪಾಸನೆಗೆ ಇಂಬುಕೊಟ್ಟು ಮೂಢನಂಬಿಕೆಯನ್ನು ಅಭಿವೃದ್ಧಿ ಪಡಿಸುತ್ತಿರುವರು. ಹೀಗೆ ಮಾಡದೆ, ಗಾಂಧೀ ಭವನ ಎಂದು ಕಟ್ಟಿಸಿ. ಪ್ರಾರ್ಥನೆ ಮಾಡಿಸಲು ಅನುಕೂಲ ಮಾಡಬಹುದು. ಸಮುದಾಯ ಭವನ ಕಟ್ಟಿಸಿ. ವೈಚಾರಿಕ ಚಿಂತನೆಗೆ ಅನುವು ಮಾಡಿಕೊಡಬಹುದಿತ್ತು. ಜನರು ಮೂಢರಿದ್ದಷ್ಟೂ ಅವರು ಗ್ಯಾರಂಟಿ ವೋಟ್ ಬ್ಯಾಂಕ್ ಎಂಬುದನ್ನು ಇಂದಿನ ರಾಜಕಾರಣಿಗಳು ಚೆನ್ನಾಗಿ ಮನನ ಮಾಡಿಕೊಂಡಿದ್ದಾರೆ.]

ಹೀಗೆ ನೈಸರ್ಗಿಕ ಧರ್ಮವು ಮನುಷ್ಯ ಜೀವನದ ಆರಂಭದ ದಿನಗಳಲ್ಲಿ ಉಂಟಾದ ಪ್ರಕ್ರಿಯೆ ಎಂಬ ಅರಿವಿಲ್ಲದೆ ಶ್ರೀ ಶರಣಬಸಪ್ಪ ಅಪ್ಪಾ ಅವರು ನಮ್ಮದನ್ನೂ ನೈಸರ್ಗಿಕ ಧರ್ಮವನ್ನಾಗಿ ಮಾಡಿದ್ದಾರೆ. "ನಿಸರ್ಗ ಸಹಜವಾಗಿ ಹುಟ್ಟಿದ ಧರ್ಮಗಳು ಮಾನವನ ಉಗಮದೊಂದಿಗೇ ಜನ್ಮಿಸಿ ಬಂದಿರುವವೆಂದು ಹೇಳಬಹುದು. ಮಾನವನು ಪಂಚೇಂದ್ರಿಯಗಳ ಮುಖಾಂತರ ದೊರಕುವ ಆನಂದದ ಜೊತೆಗೆ ಅತೀಂದ್ರಿಯವಾದ ಪರಮಾನಂದವನ್ನು ಪಡೆಯಲು ಬಯಸಿದನು." ಪುಟ 4

ಧರ್ಮವು ಮಾನವನ ಉಗಮದೊಂದಿಗೆ ಬಂದೇ ಇಲ್ಲ. ಮನುಷ್ಯ ಬಹಳಷ್ಟು ಕಾಲ ಅನಾಗರಿಕನಾಗಿ ಉಣಲು ಬರದೆ, ಉಡಲು ಬರದೆ ಕಾಡು ಪ್ರಾಣಿಗಳಂತೆ ಬದುಕಿದ. ನಂತರ ಬೆಂಕಿಯ ಉಪಯೋಗ, ಆಮೇಲೆ ಕೃಷಿಕಾಯಕ, ಹೀಗೆ ಹಂತಹಂತವಾಗಿ ಸುಧಾರಿಸಿದ. ಮನುಷ್ಯ ಹುಟ್ಟಿದ ಎಷ್ಟೋ ಕಾಲದ ಮೇಲೆ ಬಣಧರ್ಮ (Tribal religion) ಬುಡಕಟ್ಟುಗಳಲ್ಲಿ ರೂಪುಗೊಂಡಿತು. ನಿಸರ್ಗಪೂಜೆ (Animism) ದೇವತಾಪೂಜೆ (Spiritism) ದಾಟಿ ದೇವಪೂಜೆಯ (Spiritualism) ಕಲ್ಪನೆ ಮೂಡಿತು ಅಂದಾಗ ಮಹಾಸಭಾಧ್ಯಕ್ಷರು ಒಂದು ಸುಸಂಸ್ಕೃತ, ಪ್ರಗತಿಪರ, ವೈಚಾರಿಕ, ಏಕದೇವೋಪಾಸಕ, ವಿಶ್ವಧರ್ಮವನ್ನು–ಇದನ್ನು ಕೊಟ್ಟ ಕೀರ್ತಿಗೆ ಧರ್ಮಪಿತ ಬಸವಣ್ಣನವರು ಭಾಜನರಾಗುವರಲ್ಲಾ ಎಂಬ ಹೊಟ್ಟೆಉರಿಯಿಂದ, ಶಿಲಾಯುಗದ ಮಾನವ ಆಚರಿಸುತ್ತಿದ್ದ ಬಣಧರ್ಮವನ್ನು ಹೋಲುವ ನೈಸರ್ಗಿಕ ಧರ್ಮಕ್ಕೆ ನಮ್ಮದನ್ನು ಇಳಿಸುತ್ತಿದ್ದಾರಲ್ಲಾ ! ಇವರ ಪಾಂಡಿತ್ಯಕ್ಕಾಗಿ ನಗಬೇಕೋ

ಅಥವಾ ಇಂಥಾ ವಿದ್ವಾಂಸರನ್ನು ಮಹಾಸಭಾಧ್ಯಕ್ಷರನ್ನಾಗಿ ಪಡೆದುದಕ್ಕೆ ಅಳಬೇಕೋ.
ಸಮಸ್ತ ವೀರಶೈವರು (?) ಚಿಂತಿಸಬೇಕು.

"ನೈಸರ್ಗಿಕವಾಗಿ ಹುಟ್ಟಿದ ಧರ್ಮ ವ್ಯಕ್ತಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿವೆ.
ಧರ್ಮಗಳು ಆ ಕಾಲೀನ ಪರಿಸರಕ್ಕೆ ಹೊಂದುವಂತೆ ಅತ್ಯುತ್ತಮ ಮೌಲ್ಯಗಳನ್ನು ಅಳ
ವಡಿಸಿಕೊಂಡು, ಅಪಮೌಲ್ಯಗಳನ್ನು ತಳ್ಳಿಬಿಡುವ ಸ್ವಾತಂತ್ರ್ಯವನ್ನು ಪಡೆದು-
ಕೊಂಡಿವೆ." (ಪುಟ 4–5)

ಯಾವುದನ್ನೇ ವ್ಯಾಖ್ಯಾನಿಸುವಾಗ ಒಂದು ಮಾದರಿಯನ್ನು ಮನಸ್ಸಲ್ಲಿ ಇಟ್ಟುಕೊಂಡು
ಹೇಳಬೇಕು. ಬರೀ ಗಾಳಿಮಾತುಗಳನ್ನಾಡಿ ರಂಜನೀಯವಾದ ಪದಗಳನ್ನು ಬಳಸಿದರೆ
ಪ್ರಯೋಜನವಿಲ್ಲ. ಯಹೂದಿ ಧರ್ಮ ನೈಸರ್ಗಿಕ ಧರ್ಮ, ವರ್ಣಾಶ್ರಮಧರ್ಮ ನೈಸ
ರ್ಗಿಕ ಧರ್ಮ. (ಅದಕ್ಕೇ ಅವರು ಯಾವ ಪುರುಷನಿಂದಲೂ ಈ ಧರ್ಮ ಹುಟ್ಟದೆ
ದೇವರಿಂದ ಹುಟ್ಟಿತು ಎಂದು ಕೈಕೊಡವಿಕೊಳ್ಳುವುದು.) ಇವು ಎಷ್ಟು rigid
ಆಗಿ, ಎಂದೂ ಬದಲಾವಣೆಗೊಳ್ಳದೆ ಇವೆ. ಜನರು ನೈಸರ್ಗಿಕ ಧರ್ಮಗಳು ವಿಧಿಸುವ
ಕಟ್ಟುಪಾಡಿನಿಂದ ವಿಲಿವಿಲಿ ಒದ್ದಾಡಿದರೂ ಅವು ಸ್ವಲ್ಪವೂ ಬದಲಾವಣೆಗೊಳ್ಳವು
ಮತ್ತು ಅಪಮೌಲ್ಯವಾದ ಆಚರಣೆಗಳನ್ನು ಒತ್ತಾಯದಿಂದಲಾದರೂ ಜನರ ಮೇಲೆ
ಹೇರುವವು ಎಂಬುದನ್ನು ಇಡೀ ಜಗತ್ತೇ ಬಲ್ಲದು. ಯಹೂದಿ ಧರ್ಮದಲ್ಲಿದ್ದ ಅಪ
ಮೌಲ್ಯಗಳನ್ನು ತಳ್ಳಿ, ಹೊಸ ದೃಷ್ಟಿಕೋನ ಕೊಡಲು ಹೊರಟ ಏಸುವನ್ನು ಶಿಲುಬೆ
ಗೇರಿಸಿದ್ದು ನೈಸರ್ಗಿಕ ಧರ್ಮಾನುಯಾಯಿಗಳಾದ ಯಹೂದ್ಯರು. ಏಕದೇವೋಪಾಸನೆ
ಬೋಧಿಸಿದ ಮೊಹಮ್ಮದರನ್ನು ಮಕ್ಕಾ ಬಿಟ್ಟು ಓಡಿಸಿದವರು ಕುರೇಶಿ ಬುಡಕಟ್ಟಿನ
ನಿಸರ್ಗಧರ್ಮಾ (tribal religion) ನುಯಾಯಿಗಳು. ಬಿಗಿಯಾದ ಜಾತಿಪದ್ಧತಿ
ಯನ್ನು ಸಡಲಿಸಿ ಅಖಂಡ ಜಾತ್ಯತೀತ ಶರಣ ಸಮಾಜವನ್ನು ರಚಿಸಹೊರಟ ಧರ್ಮ
ಪಿತ ಬಸವಣ್ಣ ಮತ್ತು ಅವರ ಸಮಕಾಲೀನರನ್ನು ಗಡಿಪಾರು ಮಾಡಿದ ಕೊಂಡಿ
ಮಂಚಣ್ಣ, ಮಾಧವರಾಯ ಮುಂತಾದವರು ನಿಸರ್ಗಧರ್ಮಾನುಯಾಯಿಗಳು. ಅದು
ಎಂದೂ ಆತ್ಮವಿಮರ್ಶೆ ಮಾಡಿಕೊಳ್ಳದು, ಸುಧಾರಣೆ ಬಯಸದು. ಅಂದಾಗ ನಮ್ಮ
ಧರ್ಮ ನೈಸರ್ಗಿಕ ಧರ್ಮವಾಗಲು ಸಾಧ್ಯವೇ ಇಲ್ಲ.

"ಇಂಥ ಪರಂಪರೆಯನ್ನೇ ಶೈವ-ವೀರಶೈವ ಧರ್ಮಗಳು ಹೊಂದಿವೆ." ಎನ್ನು
ತ್ತಾರೆ ಮಹಾಸಭಾಧ್ಯಕ್ಷರು. ಮುಂದುವರಿದು ಹೇಳುತ್ತಾರೆ. "ಶೈವ ಧರ್ಮದ ಮೂಲ
ಸ್ಥಾಪಕನಾರೆಂಬುದು ತಿಳಿದಿಲ್ಲ, ಅದರಂತೆ ವೀರಶೈವ ಧರ್ಮದ ಸ್ಥಾಪಕನಾರೆಂಬುದು
ತಿಳಿಯುವುದಿಲ್ಲ. ಶೈವ-ವೀರಶೈವ ಧರ್ಮ ಸಂಸ್ಕೃತಿಗಳು ಬಹುಪ್ರಾಚೀನ ಮತ್ತು
ಒಂದೇ ಮೂಲದಿಂದ ಹುಟ್ಟಿದ ಧರ್ಮಗಳಾಗಿವೆ.", ಪುಟ. 5.

ಈ ಲೇಖನದ ಒಂದೊಂದು ವಾಕ್ಯವನ್ನೂ ವಿಮರ್ಶಿಸುವಷ್ಟು ತಾತ್ವಿಕ
ದೋಷಗಳಿವೆ. ಆದರೂ ಕೆಲವು ಮಾತುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ.

ಶೈವದ ಸ್ಥಾಪಕನಾರೆಂದು ತಿಳಿದಿಲ್ಲ ಎಂದು ಹೇಳುತ್ತಾರೆ. ಏಕೆ ತಿಳಿಯದು ? ಉಮಾ
ವಲ್ಲಭ, ಕೈಲಾಸಾಧಿಪತಿ, ಯೋಗಿರಾಜ, ಜಟಾಧಾರಿ, ಸರ್ಪಧರ ಶಿವನೇ ಶೈವದ
ಸ್ಥಾಪಕ. ಅವನು ಯೋಗಮುದ್ರೆಯಲ್ಲಿ ಕುಳಿತ ಭಂಗಿಯೇ ಸ್ಥಾವರಲಿಂಗದ ಆಕಾರ.
ಶಿವಾಗಮಗಳನ್ನು ಬೋಧೆಮಾಡಿದ ವ್ಯಕ್ತಿಯೇ ಆ ಶಿವನು. ಶೈವವು ಒಂದು ಪ್ರತ್ಯೇಕ
ಧರ್ಮ. ಸ್ಥಾವರಲಿಂಗೋಪಾಸನೆಯೇ ಅದರ ಜೀವಾಳ.

ಶೈವದಲ್ಲಿ ಸಪ್ತಶಾಖೆಗಳಾದವು. ಮೊದಲು ಕೇವಲ ಶೈವ ಧರ್ಮವಿತ್ತು. ನಂತರ
ಆರ್ಯರ ಆಗಮನವಾದಾಗ, ಆರ್ಯರು ವರ್ಣಾಶ್ರಮ ಪದ್ಧತಿಯನ್ನು ಮೂಲದ್ರಾ
ವಿಡರ ಮೇಲೆ ಹೇರಹೊರಟಾಗ ಸಂಘರ್ಷವಾಗಿ ಸಪ್ತಶೈವಗಳಾದವು. ಸಪ್ತಶೈವಗಳೆ
ಗೆಲ್ಲ ಶಿವನೇ ಆರಾಧ್ಯ ದೈವ. ವೀರಶೈವ ಈ ಸಪ್ತಶೈವಗಳಲ್ಲಿ ಒಂದು. ಹೇಗೆ
ವೈಷ್ಣವ, ಶ್ರೀ ವೈಷ್ಣವ ಮುಂತಾದವು ವೈಷ್ಣವ ವಾಹಿನಿಯಲ್ಲಿ ಒಂದೊಂದು ಪಂಥಗ
ಳೋ ಹಾಗೆ ವೀರಶೈವ ಶೈವದ ಒಂದು ಶಾಖೆ. ಉಳಿದ ಶೈವಗಳಿಗಿಂತ ಅವರು ಉಗ್ರ
ಶಿವಭಕ್ತರು. ಈ ವೀರಶೈವವು ಪ್ರಾಚೀನವಿದ್ದರೂ ಇದು ಶೈವದ ಒಂದು ಶಾಖೆ;
ಸ್ವತಂತ್ರ ಅಸ್ತಿತ್ವ ಉಳ್ಳುದಲ್ಲ, ಶಿವಾಗಮಾಧಾರಿತ. ಇಷ್ಟಾದರೂ ಪಂಚಾಚಾರ್ಯ
ರಿಗೂ ಇದರ ಸ್ಥಾಪನೆಗೂ ಸಂಬಂಧವಿಲ್ಲ. ಏಕೆಂದರೆ ರೇಣುಕಾದಿ ಆಚಾರ್ಯರ ಕಲ್ಪನೆ
ಕೇವಲ ಕಲ್ಪನೆ *(Fiction)* ಮತ್ತು ಇದೇ ಶತಮಾನದಲ್ಲಿ ರೂಪುಗೊಂಡದ್ದು.

ನಾವಿಂದು ಇಷ್ಟಲಿಂಗವೆಂಬ ವಿಶ್ವದಾಕಾರದಲ್ಲಿರುವ ಲಾಂಛನ ಧರಿಸುವವರು ಲಿಂಗಾ
ಯತರು. ಈ ಧರ್ಮ ಲಿಂಗಾಯತ ಧರ್ಮ. ಇದು ವೀರಶೈವ ಧರ್ಮವಲ್ಲ. ನಾವು
ವೀರಶೈವರು ಅಲ್ಲ. ನಾವು ಶಿವಪೂಜಕರಲ್ಲ. ದೇವಪೂಜಕರು, ವೀರಶೈವರು ಏಕ
ಶಿವೋಪಾಸಕರು, ನಾವು ಏಕದೇವೋಪಾಸಕರು. ಅರೆಬರೆ ಅಧ್ಯಯನ ಮಾಡುವ
ವಿದ್ವಾಂಸರು, ಮತ್ತು ಅಧ್ಯಯನದ ಕಡೆ ಆಸಕ್ತಿಯನ್ನೇ ಹೊಂದಿರದ ಧಾರ್ಮಿಕ
ಜನರಿಂದ ಗೊಂದಲ ಹೀಗೆಯೇ ಸಾಗುತ್ತದೆ.

"ನೈಸರ್ಗಿಕ ಧರ್ಮಗಳು ಸ್ವಾತಂತ್ರ್ಯವನ್ನು ನೀಡುತ್ತವೆ." ಎಂದಿದ್ದಾರೆ ಮಹಾ–
ಸಭಾಧ್ಯಕ್ಷರು. ನೈಸರ್ಗಿಕ ಧರ್ಮಗಳು ನೀಡುವ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥದಲ್ಲಿ
ಸ್ವಾತಂತ್ರ್ಯ ಎನ್ನಲು ಬರದು. ಏಕೆಂದರೆ, ಅವು ಸಮಗ್ರ ಸಮಾಜದ ಮಾನವ ಕುಲ–
ಕೋಟಿಯ ಚಿಂತನೆ ಮಾಡುವುದಿಲ್ಲ. ಮಾನವನು ಮೂಢಾವಸ್ಥೆಯಲ್ಲಿದ್ದಾಗ ಮಾಡು
ತ್ತಿದ್ದ ಕ್ಷುದ್ರ ದೈವಂಗಳ ಪೂಜೆ, ಮಾರಿ ಮಸಣಿಗೆ ಬಲಿಕೊಡುವುದು, ದೇವದಾಸಿ,
ಬೆತ್ತಲೆ ಸೇವೆ ಮುಂತಾದ ಆಚರಣೆ ಬುಡಕಟ್ಟುಗಳ ಪಳೆಯುಳಿಕೆಗಳಾಗಿ ಬಂದಿರುತ್ತವೆ.
ಸುಸಂಸ್ಕೃತ ಧರ್ಮಗಳ ಅನುಯಾಯಿಗಳಾಗಿ ಪೂಜೆ–ಧ್ಯಾನ–ಯೋಗ ಅಭ್ಯಾಸ
ಮಾಡುವವರು ಆ ಮೂಢ ಜನರನ್ನು ಕಂಡು ಮರುಕದಿಂದ ತಿಳಿಹೇಳಿ, "ಹೀಗೆ ನಿನ್ನ

ಮುಗ್ಧ ಮಗಳನ್ನು ಬಲಿಕೊಡಬೇಡ ತಮ್ಮಾ, ದೇವದಾಸಿ ಮಾಡಬೇಡ, ನೋಡು, ಅಪಮಾನುಷವಾಗಿ ಹೀಗೆ ಕುರಿ, ಕೋಣ ಕಡಿದರೆ ಪಾಪ ಬರುವುದು," ಎಂದು ಹಿತೋ-ಪದೇಶ ಮಾಡುವುದು ಸೂಕ್ತವೇ ವಿನಾ, "ಧಾರ್ಮಿಕ ಸ್ವಾತಂತ್ರ್ಯ ಅವನಿಗೂ ಇದೆ. ಕಡಿಯಲಿ ಬಿಡು; ಮಗಳನ್ನು ಯಲ್ಲಮ್ಮನಿಗೆ ದೇವದಾಸಿಯಾಗಿ ಬಿಡಲಿ...." ಎನ್ನುವುದು ಭಯಂಕರ ವಂಚನೆಯ ಮಾತು.

ಭಗವದ್ಗೀತೆಯಲ್ಲಿ "ಎಷ್ಟೇ ಕೆಳಮಟ್ಟದ ಆರಾಧನೆ ಮಾಡಿದರೂ ಆ ಭಕ್ತಿಯಿಂದ ನಿರ್ಗುಣ ಭಕ್ತಿಯವರೆಗಿನ ಎಲ್ಲವೂ ದೇವರನ್ನೇ ತಲ್ಪುತ್ತದೆ" ಎಂಬ ಉಕ್ತಿ ಉದಾತ್ತ ತತ್ತ್ವದಂತೆ ತೋರಿಕೆಗೆ ಅನ್ನಿಸಿದರೂ ಇದು ಬಹು ಆತ್ಮವಂಚನೆಯ ಮಾತು. ಅಜ್ಞಾನ-ಮೂಢನಂಬಿಕೆಯಲ್ಲಿ ಬಳಲುವ ಕ್ಯಾತ, ದುಗ್ಗ, ಕಾಳೇಗೌಡ ಮುಂತಾದವರು ಅದೇ ಕೆಸರಿನಲ್ಲಿ ಒದ್ದಾಡಲಿ ಎನ್ನುವ ಧೋರಣೆ. ಇದನ್ನು ಉದಾರವಾದ ಎನ್ನಲಾಗದು. ಅಂಥ ಆಚರಣೆಗಳನ್ನು ಟೀಕಿಸಿ, ಸುಧಾರಣೆ ತರಬೇಕೆನ್ನುವ *Missionary Religions* – ಎಲ್ಲರನ್ನೂ ಸ್ವಾಗತಿಸುವ ಧರ್ಮಗಳು, ಶ್ರೇಷ್ಠವಾದುವು. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಕೆಲವು ಆದಿವಾಸಿ ಗುಂಪುಗಳಿವೆಯಂತೆ. ಅದರಲ್ಲಿ ಜಾರವಾ ಎಂಬ ಬುಡಕಟ್ಟು ಇದೆ. ಅವರಿಗೆ ಇನ್ನೂ ಬೆಂಕಿಯ ಉಪಯೋಗ, ಬಟ್ಟೆಯ ಉಪಯೋಗ ತಿಳಿದಿಲ್ಲವಂತೆ. ಅವರನ್ನು ಸುಧಾರಿಸಬೇಕೆಂದು ಏನೇ ಸೌಲಭ್ಯ ಕೊಡ ಹೋದರೂ ಸಂಶಯಪಟ್ಟು ನಿರಾಕರಿಸಿ, ನಾಗರಿಕ ಮನುಷ್ಯರನ್ನೇ ಶತ್ರುಗಳಂತೆ ನೋಡಿ ಆ ಜನ ಈಗ 200 ಸಂಖ್ಯೆಗೆ ಇಳಿದಿದ್ದಾರಂತೆ. ಇನ್ನೊಂದು ಬುಡಕಟ್ಟಿನವರು 50 ಜನರಿದ್ದಾರಂತೆ. ಅವರು ತಮ್ಮ ಮೂಢನಂಬಿಕೆಯನ್ನೇ ಸ್ವಾತಂತ್ರ್ಯ ಎಂದುಕೊಳ್ಳುತ್ತಾರೆ. ಗಂಡನ ಜೊತೆಗೆ ಹೆಂಡತಿಯನ್ನು ಸುಡುವ ಪ್ರಸಂಗ ಇನ್ನೂ ನಡೆಯುತ್ತಿವೆ. ಉದಾ : ರೂಪಾ ಕನ್ವರಳದು. ಅವಳನ್ನು ಸುಟ್ಟವರಿಗೆ, ಸುಡುವುದನ್ನು ತಡೆಯುವಿಕೆ ಸ್ವಾತಂತ್ರ್ಯ ಹರಣ, ಕುಲಾಚಾರದ ಹಕ್ಕಿನ ಅಪಹರಣ. ಪ್ರಗತಿಪರ ಧರ್ಮಗಳು ಮಾನವೀಯತೆ, ಲೋಕ ಕಲ್ಯಾಣದ ದೃಷ್ಟಿಯಿಂದ ಚಿಂತನೆ ಮಾಡುತ್ತವೇ ವಿನಾ ಕುಲಾಚಾರ – ಸಂಪ್ರದಾಯಗಳನ್ನು ಗಟ್ಟಿಗೊಳಿಸಲು ಅಲ್ಲ. ಆದ್ದರಿಂದ ನೈಸ-ರ್ಗಿಕ ಧರ್ಮಗಳು ಜನರನ್ನು ಅವರ ಪಾಡಿಗೆ ಬಿಟ್ಟುಬಿಡುವುದು ಸ್ವಾತಂತ್ರ್ಯವಲ್ಲ, ಬೇಜವಾಬ್ದಾರಿತನ. ಶ್ರೀ ಶರಣಬಸವಪ್ಪಾ ಅವರು ವಿಶ್ವಧರ್ಮಗಳ ಘನತೆಯನ್ನು ಲೋಪ ಎಂದು ತದ್ವಿರುದ್ಧವಾಗಿ ತಿಳಿದಿರುವುದನ್ನು ನೋಡಿದರೆ, ಇವರ ಅಧ್ಯಯನ, ಚಿಂತನೆ ಎಷ್ಟು ತೋರಿಕೆ *(Superficial)* ಯದು, ಆಳವಿಲ್ಲದ್ದು ಎನ್ನಿಸದೆ ಇರದು. ಅವರ ಆಣಿಮುತ್ತುಗಳನ್ನು ನೋಡಿರಿ.

"ಬೌದ್ಧ ಧರ್ಮದಲ್ಲಿ ಬುದ್ಧನಿಗಿಂತ ಶ್ರೇಷ್ಠರಾದವರು ಹುಟ್ಟಿ ಬಂದರೂ ಬೌದ್ಧರು ಬುದ್ಧನನ್ನು ಬಿಟ್ಟು ಬೇರೆಯವರನ್ನು ಶ್ರೇಷ್ಠರೆಂದು ಭಾವಿಸುವುದೇ ಇಲ್ಲ. ಕ್ರೈಸ್ತ

ಧರ್ಮದಲ್ಲಿ ಕ್ರೈಸ್ತ*ನಿಗಿಂತಲೂ ದೊಡ್ಡವರಾದ ದೇವರ ಮಕ್ಕಳು ಹುಟ್ಟಿದರೂ ಕ್ರೈಸ್ತರು ಅವರನ್ನು ದೇವರ ಮಕ್ಕಳು ಎಂದು ನಂಬುವುದಿಲ್ಲ. ಮುಹಮ್ಮದೀಯರೂ ಸಹ ಮುಹಮ್ಮದ ಪೈಗಂಬರನಿಗಿಂತಲೂ ಮಿಗಿಲಾದ ಪ್ರವಾದಿಗಳು ಹುಟ್ಟಿ-ದರೂ ಗುರುತಿಸುವದಿಲ್ಲ. ಈ ಎಲ್ಲ ಧರ್ಮೀಯರಿಗೆ ಅವರವರ ಧರ್ಮ ಸ್ಥಾಪಕರೇ ಅಧಿಕೃತ ಪ್ರಮಾಣವಾಗುತ್ತಾರೆ." (ಪುಟ-5)

ಇದು ನಿಜಕ್ಕೂ ಶ್ರೇಷ್ಠವಾದ ನಂಬಿಕೆ. ಹೇಗೆ ನೋಡೋಣ.

1. ನಿಜವಾದ ಪ್ರವಾದಿಗಳು; ಅಸಾಮಾನ್ಯ ನಿಲುವು ಉಳ್ಳವರು ಸಹಸ್ರ ಸಹಸ್ರ ವರ್ಷಗಳಿಗೊಮ್ಮೊಮ್ಮೆ ಹುಟ್ಟುತ್ತಾರೆ. ಅವರು ದೇವರ ಸುಂದರ ಕೊಡುಗೆಗಳು. ಅಂಥವರು ಪಾರ್ಥೇನಿಯಮ್ ಕಸದಂತೆ ಎಲ್ಲಾ ಕಡೆ ಸಿಗರು.
2. ಒಂದು ಧರ್ಮದಲ್ಲಿ ಹುಟ್ಟಿದವರು, ಆ ಧರ್ಮದ ಪಿತನ ಕೊಡುಗೆಯಾದ ಧರ್ಮದ ಅನುಯಾಯಿಗಳಾಗಿ, ಕೃತಜ್ಞರಾಗಿರುವರೇ ವಿನಾ 'ಸೂಳೆಗೆ ಹುಟ್ಟಿದ ಕೂಸಿನಂತೆ ಯಾರನ್ನಾದರೂ ಅಪ್ಪಾ ಎಂದು ಬೆನ್ನುಹತ್ತುವುದಿಲ್ಲ,' ಅದು ಅವರ ನಿಷ್ಠೆ! ತಮ್ಮ ಧರ್ಮಪಿತನನ್ನು ಅಖಂಡ ನಿಷ್ಠೆಯಿಂದ ಗೌರವಿಸುವರು. ಕಂಡಕಂಡ ಹಾದಿಗೆ ಹರಿದಾಡಿ, ತತ್ತ್ವಭ್ರಷ್ಟರಾಗಿರುವ ವೀರಶೈವರು ಆ ಧರ್ಮಗುರು ನಿಷ್ಠೆಯನ್ನಿಂದು ಕಲಿಯಬೇಕಾಗಿದೆ.

ರಫೀಕ್ ಝಕೇರಿಯ ಎಂಬ ದೊಡ್ಡ ಭಾರತೀಯ ವಿದ್ವಾಂಸರು. "ಇಸ್ಲಾಂ" ಎಂಬ ಗ್ರಂಥವನ್ನು ಬರೆದಿದ್ದಾರೆ. ಅವರು ಹೇಳುತ್ತಾರೆ, "ಮುಸ್ಲೀಮರು ಅಲ್ಲಾಹನನ್ನು ದೂಷಿಸಿದರೂ ಸಹಿಸಿಕೊಳ್ಳುತ್ತಾರೆ. ಆದರೆ ಪ್ರವಾದಿ ಮೊಹಮ್ಮದರನ್ನು ದೂಷಿಸಿದರೆ ಧರ್ಮಯುದ್ಧಕ್ಕೆ, ಪ್ರಾಣಾರ್ಪಣೆಗೂ ಸಿದ್ಧರಾಗುತ್ತಾರೆ." ಈ ಮಾತು ನನಗೆ ನಿಜಕ್ಕೂ ಹಿಡಿಸಿದೆ, ಮನುಷ್ಯನಿಗೆ ನಿಯತ್ತು ಇರಬೇಕು. ರಾಜಕೀಯದಲ್ಲಿ ನೋಡಿರಿ ಯಾವ ನಿಯತ್ತು ಇಲ್ಲದ ಜನರು ದೇಶವನ್ನು ನರಕವನ್ನಾಗಿ ಮಾಡಿರುವುದು ಸ್ಪಷ್ಟವಾಗುತ್ತದೆ. ಈ ರಾಜಕೀಯ ಜನರಿಗೆ ಗಾಂಧೀಜಿಯಲ್ಲಿ, ಅವರ ಮೌಲ್ಯಗಳಲ್ಲಿ ನಿಷ್ಠೆ-ನಂಬಿಕೆ ಇದ್ದಿದ್ದರೆ ಈ ಮಟ್ಟಕ್ಕೆ ದೇಶವನ್ನು ಇಳಿಸುತ್ತಿದ್ದರೆ ?

ಇನ್ನೊಂದು ಉದಾಹರಣೆ ಕೊಡುತ್ತೇನೆ. ಸೈನಿಕರು ಯುದ್ಧಭೂಮಿಯಲ್ಲಿರುತ್ತಾರೆ. ಪಡೆಯ ಮುಖ್ಯಸ್ಥ ಕೊಟ್ಟ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸುತ್ತಾರೆ. ಈ ಆಜ್ಞೆ ಏಕೆ ಕೊಟ್ಟ ಎಂದು ಅವರು ಆಗ ತರ್ಕಮಾಡಲು ಹೋಗರು. ಆ ನಿಷ್ಠೆಯಿಂದ ಜಯ ಲಭಿಸುತ್ತದೆ. ಎಲ್ಲ ಲೆಫ್ಟಿನೆಂಟರೂ ಒಂದೊಂದು ಆಜ್ಞೆ ನೀಡಿದರೆ,

---

* ದೋಷವನ್ನು ಗಮನಿಸಿರಿ. ಏಸುಕ್ರಿಸ್ತ, ಅವನ ಮತಾನುಯಾಯಿಗಳು ಕ್ರೈಸ್ತರು. (ಏಸು) ಕ್ರೈಸ್ತ ಎಂಬ ಪ್ರಯೋಗ ತಪ್ಪು. ಬೇಕಾದರೆ ಏಸುವೇ ಮೊದಲ ಕ್ರೈಸ್ತ ಎನ್ನಬಹುದು.

ಹೋರಾಟ ಸಾಧ್ಯವೆ ? ಜನತಾದಳ–ಒಬ್ಬ ಉತ್ತಮ ನೇತಾರ ವ್ಹಿ. ಪಿ. ಸಿಂಗರನ್ನು ನಾಯಕರನ್ನಾಗಿ ಪಡೆಯಿತು. ಆಗ ಏನೋ ಒಂದು ಆಶಾಕಿರಣ ಎಲ್ಲೆಡೆ ಉದಿಸಿತು. ಬಹಳ ಜನ ಲೀಡರ್ಸ್ ಸ್ವಾರ್ಥದಿಂದ ಪ್ರೇರಿತರಾಗಿ ಸ್ವಪ್ರತಿಷ್ಠೆಯಿಂದ ವರ್ತಿಸಿ, ಆ ಪಕ್ಷದ ಭವಿಷ್ಯವನ್ನೇ ಹಾಳುಮಾಡಿದರು, ಮಾತ್ರವಲ್ಲ ಕ್ಷಣಕಾಲ ವಿಚಾರಶೀಲರ ಹೃದಯದಲ್ಲಿ - ಶ್ರೀ ವ್ಹಿ. ಪಿ. ಸಿಂಗ್ ಏನಾದರೂ ಬದಲಾವಣೆ ತರಬಹುದು ಎಂದು ಉದಿಸಿದ್ದ ಬದಲಾವಣೆಯ ಆಸೆಯನ್ನು ಬತ್ತಿಸಿ ಬಿಟ್ಟಿತು. ಕಾಂಗ್ರೆಸ್ಸು–ಭ್ರಷ್ಟಾಚಾರದ ಭಾಂಡಾರ ಎಂದು ಆರೋಪ ಹೊಂದಿದ್ದರೂ, ನಾಯಕ ನಿಷ್ಠೆಯಿಂದ ಹೇಗಾದರೂ ಗದ್ದುಗೆಗೆ ಬರುತ್ತದೆ. ಜನತೆಗೆ ಬೇಡವಾಗಿದ್ದರೂ ಶಾಶ್ವತವಾಗಿ ಆಳುತ್ತಿದೆ. ಭಿನ್ನಾಭಿಪ್ರಾಯ ಬಂದಾಗ ಪ್ರಧಾನಿಗೆ ಒಪ್ಪಿಸಿ ವಿಧೇಯ ವಿದ್ಯಾರ್ಥಿಗಳಂತೆ ನಿಲ್ಲುತ್ತಾರೆ, ಕಾಯುತ್ತಾರೆ. ಜನತಾದಳದಲ್ಲಿ ಎಲ್ಲರೂ ನಾಯಕರಂತೆ ವರ್ತಿಸಿ ವಿನಾಶ ತಂದುಕೊಂಡದ್ದು ಕಟುಸತ್ಯ.

ಇದೇ ರೀತಿ ಧರ್ಮದಲ್ಲಿಯೂ ಏಕಗುರು ನಿಷ್ಠೆ ಧರ್ಮವು ಶಿಥಿಲಗೊಳ್ಳದಂತೆ, ವಿಕೃತಗೊಳ್ಳದಂತೆ ತಡೆಯುತ್ತದೆ.

ಏಕ ಗುರು ನಿಷ್ಠೆಯಿಲ್ಲದ ಸಮಾಜದಲ್ಲಿ ಮಹಾತ್ಮರ, ಸಿದ್ಧಪುರುಷರ ಸಂಖ್ಯೆ ಬಹಳ. ಏಕೆಂದರೆ, ಈ ದೇಶದಲ್ಲಿ ಉಪಾಸ್ಯವಸ್ತುವಾಗುವುದು ಬಹಳ ಸುಲಭ, ಮೊದಲು ಹಣ, ನಂತರ ಅಂತಸ್ತು. ಹಣ ಸಂಗ್ರಹವಾದವನು ಲೌಕಿಕನಾದರೆ ಸಮಾಜದಲ್ಲಿ ಗಣ್ಯ, ಧಾರ್ಮಿಕನಾದರೆ ಪೂಜ್ಯ. ಮುಂದಿನ ಹೆಜ್ಜೆಯೆಂದರೆ ರೊಕ್ಕ ಕೊಟ್ಟು ಗದ್ದುಗೆಗಳ–ಕರ್ತೃಗಳ ಬಗ್ಗೆ, ತಮ್ಮ ಬಗ್ಗೆ ಪುರಾಣ ಬರೆಸಿಕೊಳ್ಳಬಹುದು. ಹಣ ಕೊಟ್ಟರೆ ಪುರಾಣ ಬರೆ ುವ ವರಕವಿಗಳೂ ನಮ್ಮಲ್ಲಿ ಬಹಳ. ಇದ್ದಾಗ ಅಪ್ರಸಿದ್ಧ ಮತ್ತು ಕುಪ್ರಸಿದ್ಧರಾಗಿದ್ದವರೂ ಸತ್ತ ನಂತರ ಪುರಾಣಗಳ ನಾಯಕರಾಗಿ, ಪವಾಡ ಪುರುಷರಾಗಿ ಬಿಡುತ್ತಾರೆ. ಇದರಿಂದಾಗಿ ಹಿಂದೂಗಳಲ್ಲಿ ಒಟ್ಟಾರೆ ನೋಡಿದರೆ ಅಧ್ಯಾತ್ಮಿಕ ಜೀವಿಗಳು ಒಂದು ಉದಾತ್ತ ಉದ್ದೇಶಕ್ಕಾಗಿ ಕೀರ್ತಿಯನ್ನು ಬದಿಗಿಟ್ಟು ಸಮರ್ಪಣ ಮನೋಭಾವದಿಂದ ದುಡಿಯುವುದು ಬಿಟ್ಟು, ಪ್ರತಿಯೊಬ್ಬರೂ ಚಿಕ್ಕದಾದರೂ ಒಂದು ಮಠ ಕಟ್ಟಿ ತಮ್ಮ ಗದ್ದುಗೆಯನ್ನು ಕೊಡುಗೆಯಾಗಿ ಕೊಟ್ಟು ಹೋಗಲು ಯತ್ನಿಸುತ್ತಾರೆ. ಕ್ರೈಸ್ತರಲ್ಲಿ ಎಷ್ಟೇ ಪ್ರತಿಭಾವಂತ ವಿದ್ವಾಂಸರು ಆಗಿ ಹೋದರೂ ಚರ್ಚ್ ಎನ್ನುವ ಸಂಸ್ಥೆ ಬಿಟ್ಟು ಪಾದ್ರಿಗಳು ಸ್ವತಂತ್ರ ಚರ್ಚ ಕಟ್ಟರು. ಅವರು ತಮ್ಮ ಧರ್ಮ–ಸಂಸ್ಥೆ (ಚರ್ಚ್) ಯ ಪೋಷಕ ಶಕ್ತಿಯಾಗುತ್ತಾರೆ. ಇಲ್ಲಿ ಹಾಗಲ್ಲ, ದೊಡ್ಡವರು, ಸಣ್ಣವರು ಎನ್ನದೆ ಸ್ವತಂತ್ರರಾಗಲು ಬಯಸಿ, ಧರ್ಮದ ಶಕ್ತಿಯನ್ನು ಕುಂದಿಸುತ್ತಾರೆ. ಹೀಗಾಗಿ ಜನ ಸಾಮಾನ್ಯರು ದಾರಿತೋಚದೆ ದಿಙ್ಮೂಢರಾಗುತ್ತಾರೆ.

ಒಬ್ಬ ಸಾಧು ಸ್ನಾನವಿಲ್ಲ, ಶುಚಿತ್ವವಿಲ್ಲ, ಅತ್ಯಂತ ಕೊಳಕಾಗಿ ಇದ್ದು ಗಾಂಜಾ ಸೇವನೆ ಮಾಡುತ್ತಾನೆಂದುಕೊಳ್ಳಿ. ಅವನು ತೂರಾಡುತ್ತಲಿದ್ದರೆ, ಅವನ ಸುತ್ತಲೂ ಇದ್ದು ಸಂಪಾದನೆ ಮಾಡಿಕೊಳ್ಳುವವರು. ಆತ ಸಮಾಧಿ ಸ್ಥಿತಿಯಲ್ಲಿದ್ದಾನೆ, ತೂರ್ಯಾತೀತ ಸ್ಥಿತಿಯಲ್ಲಿದ್ದಾನೆ ಎಂದು ವೈಭವೀಕರಿಸುತ್ತಾರೆ. ಅಂಥ ಕೆಲವರ ದರ್ಶನಕ್ಕೆ ಹೋಗುವಾಗ ಸೆರೆಯ ಬಾಟಲಿ ಹಿಡಿದು ಹೋಗುವುದೇ ಅಲ್ಲದೆ, ರಾಜಕಾರಣಿಗಳು, ಶ್ರೀಮಂತರು ಕ್ಯೂ ನಿಂತಿರುತ್ತಾರೆ. ಯಾರಾದರೂ ವಿಚಾರವಾದಿ ಇವರೆಂಥಾ ಮಹಾತ್ಮರು ಎಂದು ಕೇಳಿದರೆ, 'ಏ ತಲೆಹರಟೆ ಮಾಡಬೇಡ. ಅವರು ಮಹಾಸಿದ್ಧಿ ಪುರುಷರು. ಶಾಪ ಕೊಟ್ಟುಬಿಡುತ್ತಾರೆ. ಅವರದು ಪ್ರಸಾದವಾಣಿ....'ಎಂದೆಲ್ಲ ಬೈದು ಬಿಡುತ್ತಾರೆ. ಇಂಥ ಒಬ್ಬ ಸಿದ್ಧಿಪುರುಷ ಕುಡಿದ ಅಮಲಿನಲ್ಲಿ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರನಿಗೆ ಇನ್ನೊಂದು ಮದುವೆಯಾಗು ಎಂದು ಹೇಳಿ, ಆತ ಆಗಿ, ಕಡೆಗೆ ಕೆಲಸ ಕಳೆದುಕೊಂಡ. 20 ನೆಯ ಶತಮಾನದಲ್ಲೂ ಹಿಂದುಗಳ ಮೂರ್ಖತೆ ಎಷ್ಟಿದೆ ಎಂದರೆ ಒಬ್ಬ ತಾನು ಸಿದ್ಧಪುರುಷ ಎಂದು ಬಾಯಲ್ಲಿ ತಾಂಬೂಲ ಹಾಕಿಕೊಂಡು ಪಿಚಕ್ಕನೆ ಉಗುಳಿದಾಗ, ಅದನ್ನು ಬೊಗಸೆಯಲ್ಲಿ ಹಾಕಿಸಿಕೊಳ್ಳುವ ಮೂರ್ಖರು; ಆತನಿಗೆ,ಆತನ ಹೆಂಡತಿಗೆ ರೇಷಿಮೆಯ ಪೀತಾಂಬರ ಉಡಿಸುವ ಅವಿವೇಕಿಗಳೂ ಇದ್ದಾರೆ. ಜ್ಞಾನಿ ಎಷ್ಟು ಸರಳ ಜೀವಿಯಾಗಿರುವನು; ಬಹಿರಂಗಿಕ, ದೈಹಿಕ ಶುಚಿತ್ವವನ್ನು ಕಾಯ್ದುಕೊಳ್ಳುವನು ಎಂಬಷ್ಟು ವಿಚಾರಶಕ್ತಿ ಜನರಿಗಿಲ್ಲ. ಇಂಥ ಅವಿವೇಕತನವನ್ನು, ವ್ಯಕ್ತಿಪೂಜೆಯನ್ನು ಕ್ರೈಸ್ತರಲ್ಲಿ, ಮುಸ್ಲೀಮರಲ್ಲಿ, ಸಿಖ್‌ರಲ್ಲಿ ಕಾಣುವುದಿಲ್ಲ. ಕಾರಣವೆಂದರೆ ಅವರು ಏಕ ದೇವ, ಏಕ ಗುರು, ಏಕ ಗ್ರಂಥದಲ್ಲಿ ಶ್ರದ್ಧೆಯಿಟ್ಟಿರುವುದು. ಬಹುಶಃ ಏಕ ಗುರುನಿಷ್ಠೆ ಬೆಳೆಸಿದರೆ ಈ ಅವಿವೇಕತನದ ಸ್ವೇಚ್ಛೆಗೆ ಕಡಿವಾಣ ಬಿದ್ದು ಸ್ವಾತಂತ್ರ್ಯ ಹರಣವಾಗಬಹುದು ಎಂಬ ಭಯವೂ ಕೆಲವರಿಗೆ ಇರುವುದು. ಏಕಗುರು ನಿಷ್ಠೆ ಇರುವ ಸಮಾಜಗಳು ಅಚ್ಚುಕಟ್ಟುತನ, ಶಿಸ್ತು, ಸಂಘಟನೆಯಿಂದ ಕೂಡಿರುವುದನ್ನು ಕಾಣಬಹುದು.

ಧರ್ಮಗ್ರಂಥ ವಿಚಾರ

ಮಹಾಸಭಾಧ್ಯಕ್ಷರು ಹೇಳುತ್ತಾರೆ, "ವೀರಶೈವ ಧರ್ಮಕ್ಕೊಂದು ಧರ್ಮಗ್ರಂಥ ಬೇಕೆಂದು ಹೇಳುತ್ತಿರುವುದು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಲಿದೆ. ನಮಗೆ ತಿಳಿದ ಈ ಸಣ್ಣ ವಿಷಯ ಪಂಚಾಚಾರ್ಯರಿಗಾಗಲಿ, ಬಸವಾದಿ ಪ್ರಮಥರಿಗಾಗಲಿ ಅಥವಾ ಇನ್ನಿತರ ಮಹಾಪುರುಷರಿಗೆ ಏಕೆ ಹೊಳೆಯಲಿಲ್ಲವೊ ?" (ಪುಟ 2) "ವೀರಶೈವ ಧರ್ಮಕ್ಕೆ 'ಮಹಾ ಜೀವನವೇ ಪ್ರಮಾಣ" ವೈದಿಕರಿಗೆ ವೇದಗಳು, ಮುಸ್ಲಿಮರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್ ಪ್ರಮಾಣ ಗ್ರಂಥವಾಗಿರುವಂತೆ, ಲಿಂಗವಂತರಿಗೂ ಒಂದು ಪ್ರಮಾಣ ಗ್ರಂಥ ಬೇಕೆಂದು ಹೇಳುತ್ತಿರುವುದು ಪರಕೀಯರ ಅಂಧಾನುಕರಣೆಯಲ್ಲದೆ ಮತ್ತೇನೂ ಅಲ್ಲ." (ಪುಟ-7)

1. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ವಚನಗಳಲ್ಲಿ ಒಂದು ಧರ್ಮ ಗ್ರಂಥದ ಸುಳಿವು ಕಾಣಬರುತ್ತದೆ. ಅವರು ಎಷ್ಟೋ ವಿಚಾರಗಳನ್ನು ಆಗಲೇ ಸೂತ್ರ

ರೂಪಕ್ಕೆ ತರಲು (*Codify*) ಪ್ರಯತ್ನ ಪಟ್ಟಿದ್ದಾರೆ. ಬಹುಶಃ ವರ್ಣಾಂತರ ವಿವಾಹವಾಗದೆ, ಕಲ್ಯಾಣ ಕ್ರಾಂತಿಯಾಗದೆ ಹೋಗಿದ್ದರೆ, ಇನ್ನಷ್ಟು ಘಟನಾವಳಿ ರೂಪಿಸಲು ಬಸವಾದಿ ಪ್ರಮಥರಿಗೆ ಸಮಯ ಸಿಕ್ಕಿದ್ದರೆ, ಅವರು ಧರ್ಮಗ್ರಂಥವನ್ನು ಕೊಟ್ಟೇ ಹೋಗುತ್ತಿದ್ದರು.

2. ಜಗತ್ತಿನ ಎಲ್ಲ ಧರ್ಮಗಳ ಇತಿಹಾಸ ನೋಡಿರಿ. ಎಲ್ಲ ಧರ್ಮ ಗ್ರಂಥಗಳು ಆಯಾ ಪ್ರವಾದಿಗಳ ಕಾಲಕ್ಕೆ ಆಗಿಯೇ ಇಲ್ಲ. ಧರ್ಮ ಸಂಸ್ಥಾಪಕರು ತಮ್ಮ ಅನುಭವ ವಾಣಿಯನ್ನು ಕೊಡುತ್ತಾ ಹೋಗುತ್ತಾರೆ. ಅವರ ಬೋಧೆ ಕೇಳಿದ, ಧರ್ಮ ಸ್ವೀಕಾರ ಮಾಡಿದ ಅನುಯಾಯಿಗಳ ತಂಡ ಬೆಳೆಯುತ್ತದೆ. ಹೀಗೆ ಬೆಳೆದ ಅನುಯಾಯಿಗಳಿಗೆ ಮಾರ್ಗದರ್ಶನ ಮಾಡುವ ಒಂದು ಗ್ರಂಥ ಅಗತ್ಯವಾಗುತ್ತದೆ. ಆಗ ವಿದ್ವಾಂಸರು, ದಾರ್ಶನಿಕರು ಗ್ರಂಥವನ್ನು ಕ್ರೋಢೀಕರಿಸುತ್ತಾರೆ. ಬೈಬಲ್, ಕುರಾನ್, ತ್ರಿಪೀಟಕ, ಗ್ರಂಥ ಸಾಹೇಬ ಈ ಎಲ್ಲವೂ ಸ್ಥಾಪಕರ ಕಾಲದಲ್ಲಿ ಆಗದೆ ನಂತರವೇ ಆಗಿರುವುವು ಎಂಬುದು ಗಮನಾರ್ಹ.

“ಮಗುವಿಗೆ ಪಠ್ಯಪುಸ್ತಕ ಬೇಡ; ಒಂದು ಪಠ್ಯಪುಸ್ತಕ ಇಟ್ಟರೆ ಅದರ ಜ್ಞಾನ ಸೀಮಿತವಾಗುತ್ತದೆ. ಜ್ಞಾನ ಸಮುದ್ರ ವಿಶಾಲವಾಗಿದೆ. ಎಲ್ಲ ಓದಿ ತಿಳಿಯಲಿ” ಎಂದು ಹೇಳುವುದು ಅಸಂಬದ್ಧ ಮಾತು ಹೇಗೋ, ಹಾಗೆ ಧರ್ಮಗ್ರಂಥ ಬೇಡವೆನ್ನುವುದು. ಮಗು ಪಠ್ಯಪುಸ್ತಕ ಓದಿ ನಂತರ ಸಾವಿರ ಗ್ರಂಥ ಓದಲಿ. ಆದರೆ ಖಚಿತವಾಗಿ ಏ ನ್ನು ಓದಬೇಕು ಎಂಬುದೇ ತಿಳಿಯದೆ ಇದ್ದರೆ ಅದು ಓದುವುದು ಹೇಗೆ ? ಮತ್ತು ಏನನ್ನು ?

“ವೀರಶೈವ ಧರ್ಮಕ್ಕೆ ಮಹಾಜೀವನವೇ ಪ್ರಮಾಣ”– ಇದು ಮಹಾಸಭಾಧ್ಯಕ್ಷರ ಮಹಾಸಂದೇಶ. ಯಾರ ಮಹಾಜೀವನ ? ಅನುಯಾಯಿ ಯಾರ ಜೀವನವನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು ? ಅದನ್ನು ಕಲಿಸಲೆಂದೇ ಧರ್ಮಗ್ರಂಥಗಳು ರಚನೆಯಾಗಿರುವುದು. ಏಸುವಿನ ಜೀವನವನ್ನು ಬೈಬಲ್, ಮೊಹಮ್ಮದರ ಜೀವನವನ್ನು ಕುರಾನ್ ತಿಳಿಸುತ್ತವೆ.

ಒಬ್ಬ, ಸಮಾಜದಲ್ಲಿ ಗಣ್ಯವ್ಯಕ್ತಿ, ಸಿರಿವಂತ ಇದ್ದಾನೆ ಎಂದುಕೊಳ್ಳುವಾ. ಆತ ಕಾರಿನಲ್ಲಿ ಟಿ. ವಿ, ಮನೆಯ ರೂಂಗಳಲ್ಲಿ ಟಿ. ವಿ. ಮಾತ್ರವೇಕೆ ಸ್ನಾನಗೃಹ, ಶೌಚಾಲಯಗಳಲ್ಲಿ ಟಿ. ವಿ. ಇಟ್ಟುಕೊಂಡಿರುತ್ತಾನೆ ಎಂದುಕೊಳ್ಳಿ. ಇದು ಆ ಸಮಾಜದ ಅನುಯಾಯಿಗೆ ಆದರ್ಶ ಪ್ರಮಾಣವೊ ? ಮತ್ತೊಬ್ಬ ಘನವ್ಯಕ್ತಿ ಇರುತ್ತಾನೆ. ಆತ ಯಾರಿಗೇ ಭೇಟಿಕೊಡಬೇಕಾದರೆ ನಾಲ್ಕುಗಂಟೆ ಕಾಯಿಸುತ್ತಾನೆ; ಜನ ಸಾಮಾನ್ಯರಿಗೆ ದರ್ಶನವೂ ಸಿಗದು, ಅವರನ್ನು ಕಂಡರೆ ತಿರಸ್ಕಾರದ ವರ್ತನೆ ಮಾಡುವನು ಎಂದುಕೊಳ್ಳೋಣ– ಇಂಥಾ ಮಹಾಜೀವನ ಪ್ರಮಾಣವೊ?

ಮಹಾಪುರುಷರ ಬದುಕಿನಲ್ಲಿ ನಾವು ಕಲಿಯಬೇಕಾದ ನಡೆನುಡಿ ವಿಶಿಷ್ಟ ಪ್ರಸಂಗಗಳಲ್ಲಿ ವರ್ತಿಸಬೇಕಾದ ರೀತಿ, ತೋರಬೇಕಾದ ಪ್ರತಿಕ್ರಿಯೆ ಇವೆಲ್ಲ ಅನುಕರಣೀಯವಾಗಿರುತ್ತವೆ. ಬೈಬಲ್, ಕುರಾನ್‌ಗಳಲ್ಲಿ ಅಂಥ ಮಾದರಿಗಳನ್ನು ಚಿತ್ರಿಸಲಾಗಿರುತ್ತದೆ. ಅದನ್ನು ಅವರ ಅನುಯಾಯಿಗಳು ಪಾಲಿಸಲು ಯತ್ನಿಸಬಹುದು. ರಸ್ತೆಭೂಪಟಗಳಿರುತ್ತವೆ. ನಾವೊಮ್ಮೆ ಕಾರಿನಲ್ಲಿ ಜಯಪುರಕ್ಕೆ ಹೋಗಿದ್ದಾಗ ಆ ಮ್ಯಾಪ್ ಇಟ್ಟುಕೊಂಡದ್ದರಿಂದ ಎಲ್ಲಿಯೂ ದಾರಿ ತಪ್ಪಲಿಲ್ಲ: ಇಂಗ್ಲೆಂಡಿಗೆ ಹೋದಾಗ ಬೇರೆ ಬೇರೆ ಸಂಘಸಂಸ್ಥೆಗಳವರು ಆಮಂತ್ರಿಸುತ್ತಿದ್ದರು. ಅವರು ವಾಹನ ತರುತ್ತೇವೆ ಎಂದರೂ ನಾನು ಬೇಡ ಎನ್ನುತ್ತಿದ್ದೆ. ಏಕೆಂದರೆ ಭೂಗತ ರೇಲ್ವೆ ಅಲ್ಲಿ ಬಹಳ ಚೆನ್ನಾಗಿರುವುದು. ಅಲ್ಲಿಯ ಜನಜೀವನ, ಸ್ವಭಾವ, ವಾಹನಗಳಲ್ಲಿ ಹೋಗುವಾಗ ಜನರ ರೀತಿನೀತಿ ಇವೆಲ್ಲ ಅರಿಯಲು ನನಗೆ ಕುತೂಹಲ ಇದ್ದಿತು. ಕಾರಿನಲ್ಲಿಯೇ ಆತಿಥೇಯರ ಜೊತೆಗೆ ಹೋದರೆ ಅಲ್ಲಿಯ ಸಮುದಾಯ ಜೀವನ ಅರ್ಥವಾಗದು ಎಂದು ಹೀಗೆ ಮಾಡುತ್ತಿದ್ದೆ. ಸನಾತನ ಧರ್ಮ ಮಿರ್ಷ ಎಂಬುವ ಒಂದು ಹಿಂದೂ ಸಂಸ್ಥೆಯವರು ಒಮ್ಮೆ ಹೀಗೆ ಕರೆದಿದ್ದರು. ನಾನೆಲ್ಲ ಬರುತ್ತೇನೆ ಎಂದರೆ ಅವರಿಗೆ ಆಶ್ಚರ್ಯ. ಎಲ್ಲಿಯಾದರೂ ತಪ್ಪಿಸಿಕೊಂಡರೆ ? ಎಂದು ಕಳವಳ. ಸರಿ, ನಿಗದಿತ ಸಮಯಕ್ಕೆ ನಾನು ತಪ್ಪದೆ ಹೋದಾಗ ಸ್ವಾಗತಿಸಲು ನಿಂತವರಿಗೆ ಆಶ್ಚರ್ಯ. ಹೇಗೆ ಇಷ್ಟು ಸುಲಭವಾಗಿ ಬಂದಿರಿ ಎಂದರು. ಆಗ ನಾನು “ಲಂಡನ್‌ಸ್ಟ್ರೀಟ್ ಫೈಂಡರ್.” ತೋರಿಸಿದೆ. ಇಡೀ ಲಂಡನ್ ನಗರದ ಪ್ರತಿಯೊಂದು ಬೀದಿಯ ಚಿತ್ರಗಳಿರುವ ಒಂದು ಪುಸ್ತಕವಿದ್ದಿತು. ಅದಿದ್ದರೆ ಆಯಾ ಬಿಲ್ಡಿಂಗ್ ಬಾಗಿಲಿಗೇ ನಾವು ಹೋಗಬಹುದು. ಆ ಸಂಸ್ಥೆಯ ಅಧ್ಯಕ್ಷರು ಹೇಳಿದರು, “ನಾನು ಇಲ್ಲಿಗೆ ಕೆಲಸಕ್ಕೆಂದು ಬಂದು 15 ವರ್ಷಗಳಾದವು. ಇವತ್ತಿಗೂ ಬೇರೆಯವರ ನೆರವಿಲ್ಲದೆ ನಾನು ಓಡಾಡುವುದಿಲ್ಲ. ಮತ್ತು ಇಂಥ ಮ್ಯಾಪ್ ಇರುವುದೇ ಗೊತ್ತಿರಲಿಲ್ಲ.” ಹಾಗೆ ಯಾವ ಸಮಾಜಗಳಿಗೆ ಧರ್ಮಗ್ರಂಥಗಳಿವೆಯೋ ಅವು ಭೂಪಟಗಳಂತೆ ದಾರಿ ತೋರುತ್ತಿವೆ. ಆದಕ್ಕಾಗಿ ಅವರು ಸರಿಯಾದ ಶಿಸ್ತಿನ ಹಾದಿಯಲ್ಲಿ ಹೋಗುತ್ತಿರುವರು.

ಶ್ರೀ ಶರಣಬಸಪ್ಪ ಅಪ್ಪಾ ಅವರ ಅಭಿಪ್ರಾಯದಂತೆ, ಯಾರ ಯಾರದ್ದನ್ನೋ ಮಹಾಜೀವನ ಎಂದುಕೊಂಡುಬಿಟ್ಟರೆ, ಅದನ್ನು ಪ್ರಮಾಣ ಎಂದುಕೊಂಡ ಅನುಯಾಯಿ ಬುದ್ಧಿಗೇಡಿಯಾಗದಿರನು.

“ಲಿಂಗವಂತರಿಗೂ ಒಂದು ಪ್ರಮಾಣ ಗ್ರಂಥಬೇಕೆಂದು ಹೇಳುವುದು ಪರಕೀಯರ ಅಂಧಾನುಕರಣೆಯಲ್ಲದೆ ಮತ್ತೇನೂ ಅಲ್ಲ. ” ಎಂದಿದ್ದಾರೆ. ಇಂದು ಲಿಂಗವಂತರು ತಮ್ಮ ಸಂಸ್ಕೃತಿ ಉಳಿಸಿಕೊಂಡಿರುವರೆ ? ಮಹಿಳೆಯರು ಕೂದಲುಗಳನ್ನು ಕತ್ತರಿಸಿಕೊಂಡು ಸಭೆ ಸಮಾರಂಭಗಳಲ್ಲಿ ಕೂದಲನ್ನು ಹಾರಿಸುತ್ತ ಓಡಾಡುವ ಬಗ್ಗೆ, ತೋಳಿಲ್ಲದ

ರವಿಕೆಗಳನ್ನು ತೊಟ್ಟು ಬೆನ್ನನ್ನು ಪ್ರದರ್ಶಿಸುವುದು, ಧಾರ್ಮಿಕ ಮಹಾಧಿವೇಶನಗಳಲ್ಲಿ ಕನ್ನಡ ಸಂಸ್ಕೃತಿಯ ವೇಷಧರಿಸದೆ ಪುರುಷರು ಅಪ್ಪಟ ಆಂಗ್ಲರಂತೆ ಸೂಟು ಬೂಟು ಹಾಕುವುದು, ಇನ್ನು ಆಹಾರವಿಹಾರಗಳಂತೂ ಭಯಂಕರವೆನಿಸುವಂತೆ ಕುಸಿಯುತ್ತ, ಇಂಥ ಎಲ್ಲ ವಿಷಯಗಳಲ್ಲಿ ಪರಧರ್ಮೀಯರನ್ನು ಅಂಧಾನುಕರಣೆ ಮಾಡಬಹುದಾದರೆ, ಒಳ್ಳೆಯ ವಿಷಯದಲ್ಲಿ ಏಕೆ ಮಾಡಬಾರದು ? ತಾತ್ತ್ವಿಕ-ಆಚರಣಾತ್ಮಕ ಏಕರೂಪತೆ, ಸಮುದಾಯಜೀವನ, ಬಡವ-ಬಲ್ಲಿದ ಭೇದವಿಲ್ಲದೆ ತಮ್ಮ ಧರ್ಮಮಂದಿರಗಳಲ್ಲಿ ಸಮಾವೇಶವಾಗುವುದು, ಅಚ್ಚುಕಟ್ಟಾಗಿ ಧರ್ಮಾಚರಣೆ ಮಾಡುವುದು, ಕ್ರೈಸ್ತ, ಮುಸ್ಲೀಮ್, ಸಿಖ್ ಸಮಾಜಗಳಲ್ಲಿ ಎಷ್ಟು ಚೆನ್ನಾಗಿರುವುದು. ಈ ಬಗೆಯ ಅಚ್ಚುಕಟ್ಟುತನಕ್ಕೆ ಏನು ಕಾರಣ ? ಏಕ ಗುರುನಿಷ್ಠೆ–ಏಕ ಗ್ರಂಥ ನಿಷ್ಠೆ–ಏಕ ದೇವನಿಷ್ಠೆ. ಅಂಥ ಒಳ್ಳೆಯ ಅಂಶಗಳನ್ನು ಗ್ರಹಿಸಿ (ಅನುಕರಿಸಿ) ಒಂದು ಆದರ್ಶ ಸಮಾಜವನ್ನು ಕಟ್ಟಿದರೆ ತಪ್ಪೇನು?

"ಆದರೆ ಗ್ರಂಥ ಪ್ರಾಮಾಣ್ಯ ನಂಬಿದ ಜನಕ್ಕೆ ಈ ಬೆಳವಣಿಗೆಯ ಸ್ವಾತಂತ್ರ್ಯವೇ ಇಲ್ಲ. ಅವರು ಧರ್ಮ ಗ್ರಂಥಗಳನ್ನು ಪ್ರಾಮಾಣ್ಯವೆಂದು ನಂಬಿದ ಪ್ರಮಾದಕ್ಕಾಗಿ, ಒಳ್ಳೆಯ ಮೌಲ್ಯಗಳೊಂದಿಗೆ ಅಲ್ಲಿರುವ ಕೆಲವು ಅಪಮೌಲ್ಯಗೊಂಡ ತತ್ತ್ವಗಳೂ ಸಹ ಮೌಲ್ಯಗಳೆಂದೇ ಆಚರಿಸಬೇಕಾಗುತ್ತದೆ" [ಪುಟ–7]

ಪ್ರತಿಯೊಂದು ವಿಚಾರ–ಆಚರಣೆಗೂ ತನ್ನದೇ ಆದ ಒಳ್ಳೆಯ–ಕೆಟ್ಟ ಪರಿಣಾಮಗಳಿರುತ್ತವೆ. ಯಾವುದೂ ಪರಿಪೂರ್ಣ ಎನ್ನಲು ಆಗದು. ಆದ್ದರಿಂದ ಒಂದು ತತ್ತ್ವ, ಅಥವಾ ಧಾರ್ಮಿಕ ಕಟ್ಟುಪಾಡು ಮಾಡಬಹುದಾದ ಮತ್ತು ಮಾಡಿರುವ ಒಳ್ಳೆಯ ಪರಿಣಾಮ ಅಥವಾ ಕೆಟ್ಟ ಪರಿಣಾಮಗಳನ್ನು ಅಧ್ಯಯನ ಮಾಡಿ, ನಿರ್ಧರಿಸಬೇಕು.

ಅಲೋಪತಿ ಔಷಧಿಗಳಲ್ಲಿ ಪಾರ್ಶ್ವ ಪರಿಣಾಮ *(Side Effect)* ಜಾಸ್ತಿ. ಯಾವ ಔಷಧಿ ಕಮ್ಮಿ ಪಾರ್ಶ್ವ ಪರಿಣಾಮ ಮಾಡುವುದೋ ಅದನ್ನು ವೈದ್ಯರು ಆ ರೋಗಿಯ ದೇಹ ಸ್ವಭಾವ ತಿಳಿದು, ಆಯ್ಕೆ ಮಾಡಿಕೊಡುವರು. ಹಾಗೆ, ಧರ್ಮ ಗ್ರಂಥ ಹೊಂದಿರುವ ಸಮಾಜವು ಸುವ್ಯವಸ್ಥಿತವಾಗಿದೆಯೊ? ಹೊಂದದೆ ಇರುವುದೋ? ಎಂಬುದನ್ನು ನೋಡಿದರೆ ಅವರೇ ಹೆಚ್ಚು ಸಂಘಟನೆ, ಪ್ರಗತಿ ಸಾಧಿಸಿರುವುದು. ಅವರಲ್ಲಿರುವ ಲೋಪವನ್ನು ತೆಗೆದುಹಾಕಿ ನಾವು ಒಂದು ಹೆಜ್ಜೆ ಮುಂದೆ ಹೋಗಬಹುದು. ಹೇಗೆಂದರೆ ಬದಲಾವಣೆಯಾಗುವ ಮೌಲ್ಯ – ಪರಿಸರಗಳಿಗೆ ತಕ್ಕಂತೆ ಧರ್ಮದ ಮೂಲಭೂತ ನಂಬಿಕೆಗಳನ್ನು ವಿಕೃತಗೊಳಿಸದೆ, ಕೆಲವು ತಿದ್ದುಪಡಿ ಸೂಚಿಸಿ, ತಂದು, ಜನರಿಗೆ ಕೆಲವೊಮ್ಮೆ ಧರ್ಮವು ಹೊರೆಯಾಗದಂತೆ ನೋಡಿಕೊಳ್ಳಲು ಸಾಧ್ಯವಿದೆ. ಇದಕ್ಕಾಗಿ ಪ್ರಾತಿನಿಧಿಕ ಸಭೆ ರೂಪುಗೊಳ್ಳಬೇಕು. ಆ ಪ್ರಾತಿನಿಧಿಕ ಸಭೆ ನಿಗದಿತವಾಗಿ ಸೇರಿ, ಒಬ್ಬ ಸಾಮಾನ್ಯ-ಅನುಯಾಯಿ ಸಹ ತನ್ನ ಸಂದೇಹ-ಸಮಸ್ಯೆಯನ್ನು

ಸಭೆಯ ಮುಂದಿಟ್ಟು ಚರ್ಚಿಸುವದಕ್ಕೆ ಅವಕಾಶವಿರಬೇಕು. ಧರ್ಮಗ್ರಂಥವು ಸಂವಿಧಾನದಂತೆ, ಈ ಪ್ರಾತಿನಿಧಿಕ ಸಭೆಯು ಸಂಸತ್ತಿನಂತೆ ಕೆಲಸ ಮಾಡಬೇಕು. ಆಗ ಅಪಮೌಲ್ಯವಾದ ನಂಬಿಕೆ, ಆಚರಣೆಗಳನ್ನು [ಜನರು ತಾವು ತಾವೇ ಮನಸ್ಸಿಗೆ ಬಂದಂತೆ ಬಿಡುವ ಬದಲು] ಕ್ರಮಬದ್ಧವಾಗಿ ತಿರಸ್ಕರಿಸಿ ಅನುಯಾಯಿಗಳು ಅನುಸರಿಸಲು ಬರುತ್ತದೆ. ಲಿಂಗಾಯತ ಸಮಾಜವನ್ನು ನಿಯಂತ್ರಿಸಲು ಮುನ್ನಡೆಸಲು ಧರ್ಮಗ್ರಂಥವೂ ಇಲ್ಲ - ಪ್ರಾತಿನಿಧಿಕ ಸಭೆಯೂ ಇಲ್ಲ ಎಂದಾಗ ಮುಂದುವರಿಯುವುದು ಹೇಗೆ ? ಬದುಕಿರಬಹುದು ಒಂದು ಹಿಂಡಿನಂತೆ, ಸಾಗುವುದೆಂದು ಒಂದು ಸುಸಂಘಟಿತ ಸಮುದಾಯವಾಗಿ ?

ಬೆಳಗಾಂವಿಯ ಮಹಾಧಿವೇಶನ ಒಂದು ದಾಖಲೆ, ಪಂಚಪೀಠಾಧೀಶರನ್ನು ಕರೆತಂದುದರಿಂದಾಗಿ ಎಂಬುದಾಗಿ ಸಂಘಟಕರು ಸ್ವಪ್ರಶಂಸೆ ಮಾಡಿಕೊಂಡಿದ್ದಾರೆ. ದಾಖಲೆಯಲ್ಲ, ದುರಂತದ ಮುನ್ಸೂಚನೆ. ಎಲ್ಲಿ ಹೋದರೂ ಅಸಹ್ಯಕರವಾದ ಅನಾಗರಿಕವಾದ ಶೀವಿಯನ್ನು ಪ್ರದರ್ಶಿಸುತ್ತ, ಇನ್ನಿತರರನ್ನು ತಿರಸ್ಕಾರದಿಂದ ಕಾಣುತ್ತ, ಮಾನವ ಧರ್ಮಕ್ಕೆ ಜಯವಾಗಲಿ ಎಂದು ಮಾನವರ ಹೆಗಲ ಮೇಲೆ ಹತ್ತಿಯೇ ಹೇಳುತ್ತ ಗುರು ಬಸವಣ್ಣನವರಂಥ ವಿಶ್ವ ವಿಭೂತಿಯನ್ನು ಹಳಿಯುತ್ತ ಹೋಗುವ ಪೀಠಾಧೀಶರನ್ನು ಕರೆತಂದು ಮಹಾಸಭೆ ತನ್ನ ಅಂತರಂಗದ ನಿಲುವನ್ನು ಬಹಿರಂಗಪಡಿಸಿದೆ! ಸಮಾರೋಪ ಸಮಾರಂಭದಲ್ಲಿ ಪಂಚಪೀಠಾಧೀಶರು ವರ್ತಿಸಿದ ರೀತಿ, ಸಮಾನವಾಗಿ ನಾಗನೂರು ಶ್ರೀಗಳಿಗೆ ಕುರ್ಚಿಯನ್ನು ಕೊಡಲಾರದ ಕ್ಷುಲ್ಲಕ ವರ್ತನೆ ಲಿಂಗಾಯತರು ಮತ್ತು ಲಿಂಗಾಯತೇತರರ ಚರ್ಚೆಗೆ ಗ್ರಾಸವಾಗಿವೆ. ಇದರಿಂದಾಗಿ ಮಹಾಧಿವೇಶನದ ಮಧುರ ಸ್ಮೃತಿ ಜನಮನದಲ್ಲಿ ಉಳಿಯದೆ ಅಮಂಗಲವಾದ ನಡತೆಯ ಪ್ರಭಾವ ಅಚ್ಚೊತ್ತಿತು. ಯಾವ ತಾತ್ತ್ವಿಕ ಖಚಿತತೆ, ತತ್ತ್ವನಿಷ್ಠೆ ಇಲ್ಲದೆ ಮಹಾಸಭೆಯ ಇದೇ ಧೋರಣೆ ಮುಂದುವರಿದರೆ ವಿಚಾರಶೀಲರು, ತತ್ತ್ವನಿಷ್ಠರು, ಪ್ರಗತಿಪರ ಚಿಂತಕರೂ ಆದ ಲಿಂಗವಂತರು ಅಖಿಲ ಭಾರತ ವೀರಶೈವ ಮಹಾಸಭೆಯ ಸಂಪರ್ಕವನ್ನು ಕಡಿದುಕೊಳ್ಳುವ, ಅದರ ಧೋರಣೆಯನ್ನು ಪ್ರತಿಭಟಿಸುವ ಕಾಲ ದೂರವಿರಲಾರದು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

(ಮಹಾಸಭಾಧ್ಯಕ್ಷರ ಭಾಷಣದಲ್ಲಿ ಇನ್ನೂ ಸಾಕಷ್ಟು ವಿಶ್ಲೇಷಣಾರ್ಹವಾದ ಹೇಳಿಕೆಗಳು ಇದ್ದರೂ, ಕಲ್ಯಾಣ ಕಿರಣದ ಸೀಮಿತ ಪುಟ ಸಂಖ್ಯೆಯನ್ನು ಗಮನದಲ್ಲಿ ಇರಿಸಿಕೊಂಡು ಮುಖ್ಯ ಅಂಶಗಳನ್ನು ಆಯ್ದು, ಉತ್ತರಿಸಿದ್ದೇನೆ.)

ಅ. ಭಾ. ವೀ. ಮ. ವರ್ಕಿಂಗ್ ಕಮಿಟಿಗೆ ರಾಜೀನಾಮೆ

ದಿನಾಂಕ : 23-6-1992
ವಾಸ್ತವ್ಯ : ಕೂಡಲ ಸಂಗಮ,

ಮಾನ್ಯ ಅಧ್ಯಕ್ಷರು,

ಅಖಿಲ ಭಾರತ ವೀರಶೈವ ಮಹಾಸಭೆ.

ಶ್ರೀ ಜಯದೇವ ಹಾಸ್ಟೆಲ್,

18, ಶೇಷಾದ್ರಿ ರಸ್ತೆ, ಬೆಂಗಳೂರು.

ಇವರಿಗೆ,

ಮಾನ್ಯರೇ,

ವಿಷಯ : ಅ. ಭಾ. ವೀ. ಮಹಾಸಭೆಯ ವರ್ಕಿಂಗ್ ಕಮಿಟಿಯ ಸದಸ್ಯತ್ವಕ್ಕೆ ರಾಜೀನಾಮೆ.

ನಿಮ್ಮ ಪತ್ರ ಕ್ರಮಾಂಕ 641/92-93, ದಿ. 12-6-1992 ರಂದು ತಲುಪಿ. ಭಾನುವಾರ ದಿ. 5-7-1992 ರಂದು ಬೆಳಿಗ್ಗೆ 11 ಗಂಟೆಗೆ ಅಖಿಲ ಭಾರತ ವೀರಶೈವ ಮಹಾಸಭೆಯ ವರ್ಕಿಂಗ್ ಕಮಿಟಿಯ ಸಭೆ ಕರೆದಿರುವುದು ತಿಳಿಯಿತು.

ತಾವು ಸಭೆಯನ್ನು ಕರೆಯುವುದು ಅಖಿಲ ಭಾರತ ವೀರಶೈವ ಮಹಾಸಭೆಯ ಪರವಾಗಿಯೇ ಹೊರತು ವೈಯಕ್ತಿಕವಾಗಿ ಪೂಜ್ಯ ಶರಣ ಬಸವಪ್ಪ ಅಪ್ಪಾ ಅವರಾಗಿ ಅಲ್ಲ, ಅಥವಾ ನೀವು ಅಧಿಪತಿಯಾಗಿರುವ ಮಹಾದಾಸೋಹ ಪೀಠದ ವತಿಯಿಂದಲೂ ಅಲ್ಲ. ಅಂದಾಗ ನಿಮ್ಮ ಭಾವಚಿತ್ರವು ಮುದ್ರಿತವಾಗಿರುವ ವೈಯಕ್ತಿಕ ಲೆಟರ್ ಹೆಡ್ ದಲ್ಲಿ ಸೂಚನಾಪತ್ರ ಕಳಿಸಿರುವುದು ಸರಿಯೆ ? ಅಖಿಲ ಭಾರತ ವೀರಶೈವ ಮಹಾ ಸಭೆಯ ಲೆಟರ್ ಹೆಡ್‌ದಲ್ಲಿ ಸೂಚನಾಪತ್ರ ಕಳಿಸಬೇಕಾಗಿದ್ದಿತು.

ವೈಯಕ್ತಿಕ ಪ್ರಚಾರಕ್ಕಾಗಿ, ಪ್ರತಿಷ್ಠೆಗಾಗಿ ಅ. ಭಾ. ವೀ, ಮಹಾಸಭೆಯನ್ನು ಬಳಸಿಕೊಳ್ಳುವುದು ತಪ್ಪು.

ನಾಡಿನಾದ್ಯಂತ ಮತ್ತು ಹೊರರಾಜ್ಯ - ರಾಷ್ಟ್ರಗಳಿಗೆ ಹೋಗಿ ಲಿಂಗಾಯತ ಧರ್ಮವನ್ನು ವ್ಯಾಪಕವಾಗಿ ಪ್ರಚಾರಮಾಡಿ, ಈ ಸಮಾಜಕ್ಕೆ ಸಂಘಟನೆಯ ಬಲ ಬರುವಂತೆ ಮತ್ತು ಧರ್ಮಾನುಯಾಯಿಗಳು ಧರ್ಮವನ್ನು ಅನುಸರಿಸು-ವಂತೆ ನಾವು ಶ್ರಮಿಸಿರುವುದು ಇಡೀ ರಾಜ್ಯಕ್ಕೆ ಗೊತ್ತಿರುವ ಸಂಗತಿ. ಹಲವಾರು ಪೀಠಾಧೀಶರು ಶಾಲೆ-ಕಾಲೇಜು, ಎಂಜಿನಿಯರಿಂಗ್ –ಮೆಡಿಕಲ್ ಕಾಲೇಜು ತೆರೆದು ಶೈಕ್ಷಣಿಕ ರಂಗದಲ್ಲಿ ದುಡಿದಿರಬಹುದು. ಆದರೆ ಧರ್ಮ-ಸಮಾಜಗಳು

ಬದುಕಲು ಬೇಕಾದ, ಲಿಂಗವಂತರು ಅನ್ಯ ಮತ ಸಂಸ್ಕೃತಿಗಳ ಪಾಲಾಗದಂತೆ, ಸ್ವಧರ್ಮವನ್ನು ಬಿಡದಂತೆ ಪ್ರೇರಿಸುವ ಧರ್ಮಪ್ರಚಾರದ ಆದ್ಯ ಕರ್ತವ್ಯ ಮಾಡಿರುವ ನಮಗೆ ಬೆಳಗಾಂವಿಯ ಮಹಾಧಿವೇಶನಕ್ಕೆ ಅತಿಥಿಗಳಾಗಿ ಆಹ್ವಾನಿಸಲು ನಿಮ್ಮಲ್ಲಿ ಕನಿಷ್ಠ ಸೌಜನ್ಯ ಅಥವಾ ಗುಣಗ್ರಾಹಕತ್ವ ಬೇಡವೆ ?

ಲಿಂಗಾಯತ ಧರ್ಮ-ಸಾಹಿತ್ಯ-ಸಮಾಜಗಳಿಗೆ ವಿರೋಧಾಭಾಸವಾದ ಉಪನ್ಯಾಸ, ಪ್ರವಚನಗಳನ್ನು ಜೀವನದುದ್ದಕ್ಕೂ ಮಾಡಿರುವವರಿಗೆ ಸಹ ಮಹಾಧಿವೇಶನದಲ್ಲಿ ಸ್ಥಾನವಿತ್ತು. ನಮಗಿಲ್ಲ; ಅದೂ ಇದೇ ಸಮಾಜ-ಸಾಹಿತ್ಯ-ಧರ್ಮಗಳಿಗೆ ಇಡೀ ಜೀವನ ಮುಡಿಪಿಟ್ಟವರಿಗೆ, ಎಂದರಿತಾಗ ನಿಮಗೆ ನಾವು ಮಾಡಿರುವ ಕೆಡುಕೇನು ? ಮಹಾಸಭೆಗೆ ಮಾಡಿರುವ ಅಪಕಾರವೇನು ? ಅಧ್ಯಕ್ಷ ಸ್ಥಾನದಲ್ಲಿರುವವರು ಹೀಗೆ ವೈಯಕ್ತಿಕ ದ್ವೇಷಮಾತ್ಸರ್ಯಗಳನ್ನು ಪ್ರಕಟಿಸುವುದು ಆ ಸ್ಥಾನಕ್ಕೆ ಯೋಗ್ಯವೆ ?

ಶ್ರೀ ಸಂಗಮೇಶ್ವರ ದೇವಾಲಯದ ಅಳಿವು—ಉಳಿವಿನ ಪ್ರಶ್ನೆ ಬಂದಾಗ ಹಿಂದಿನ ಮಹಾಸಭಾಧ್ಯಕ್ಷರಾದ ಮಾನ್ಯಶ್ರೀ ಐ. ಎಂ. ಮುಗದುಮ್ ನಮ್ಮ ಸಂಸ್ಥೆಗಳ ಸಹಕಾರ ಪಡೆದು, ಹೋರಾಟದಲ್ಲಿ ಯಶಸ್ಸು ಪಡೆದುದು ಸರ್ವವಿದಿತ. ಮಹಾಸಭೆಯನ್ನು ಮುಂದೆ ಬಿಟ್ಟು ಹಿನ್ನೆಲೆಯಲ್ಲಿ ನಾವು ಕಾರ್ಯಮಾಡಿ ಮಹಾಸಭೆಯ ಕೀರ್ತಿಯನ್ನು ಉಳಿಸಿದುದು, ನೀವು ಅಧಿಕಾರಕ್ಕೆ ಬರುತ್ತಲೇ ಮರೆತುಹೋಯಿತೆ ?

9 ವರ್ಷಗಳ ಅವಧಿಯ ನಂತರ ಒಂದು ಮಹಾಧಿವೇಶನ ಮಾಡಿ, ಅದರ ಪರಿಣಾಮ ಮಂಗಲಮಯವಾಗಿ ಆಗದೆ, ಇನ್ನೂ ವಾದ-ವಿವಾದದ ದುರ್ವಾಸನೆ ಹಬ್ಬುವಂತೆ, ಶಾಂತವಾಗಿದ್ದ ಸಮಾಜವನ್ನು ಕಲಕುವಂತೆ ಮಾಡಿರುವುದೇ ಆಗಿದೆ. ಜಾಹಿರಾತಿನಲ್ಲಿ ಪಂಚಪೀಠಾಧೀಶರಿಗೆ ವೀರಶೈವ ಮಹಾಮತಸ್ಥಾಪನಾಚಾರ್ಯ ಪರಂಪರೆಯವರು ಎಂಬ ವಿಶೇಷಣ ಕೊಡಲು ನಿಮಗೆ ಯಾರು ಅಧಿಕಾರ ಕೊಟ್ಟರು? ಈ ಬಗ್ಗೆ ಸಭೆ ಸೇರಿಸಿದ್ದಿರಾ ? ಚರ್ಚೆಮಾಡಿ ನಿರ್ಣಯಕ್ಕೆ ಬಂದಿದ್ದಿರಾ ? ಒಮ್ಮತದ ಅಥವಾ ಬಹುಮತದ ನಿರ್ಣಯ ಮಾಡಿ ನೀವು ಪ್ರಕಟಿಸಿದ್ದರೆ ಆ ಮಾತು ಬೇರೆ. ಅಂದಾಗ, ಅಧಿಕೃತವಾಗಿ ನೀವು ಹೇಗೆ ಪ್ರಕಟಿಸಿ, ಸಮಾಜದಲ್ಲಿ ಅಶಾಂತಿಯನ್ನು ಹುಟ್ಟು ಹಾಕಿದಿರಿ ?

ಸಮಾಜ ಜೀವಿಗಳಾದವರು ಸಮಾಜಕ್ಕೆ ಹೊಂದುವಂತೆ ನಡೆಯಬೇಕು. ಸಮುದಾಯದ ಜೊತೆಗೆ ಬೆರೆಯಲಾರದವರು ಸಭೆಗೆ ಬಂದು ಪ್ರಯೋಜನವೇನು ? ಎಲ್ಲರಿಗಿಂತಲೂ, ಸಮಾಜಕ್ಕಿಂತಲೂ ದೊಡ್ಡವರೆಂದು ಬೀಗುವ ಪಂಚಪೀಠಾಧೀಶರನ್ನು ವಿಶೇಷವಾಗಿ ಬರಮಾಡಿಕೊಂಡು, ಬಾಜಾ ಭಜಂತ್ರಿ ನಡುವೆ ಸ್ವಾಗತಿಸಿ, ಉಳಿದ ಸ್ವಾಮಿಗಳಿಗಿಂತ ಬೇರೆಯಾಗಿ ನಡೆಸಿಕೊಂಡ ಔಚಿತ್ಯವೇನು ? ಉಳಿದ ಮಠಾಧೀಶರೊಡನೆ ಸಮಾನವಾಗಿ ಕುಳಿತುಕೊಳ್ಳುವುದಿಲ್ಲ ಎಂಬ ಧೋರಣೆಯ ಅವರನ್ನು ಬರಮಾಡಿಕೊಂಡು, ಅವರ ಅನುಯಾಯಿಗಳ ಹೀನ ವರ್ತನೆಯ ಮೂಲಕ ವಯೋವೃದ್ಧ

ರಾದ ಶ್ರೀ ನಾಗನೂರು ಶಿವಬಸವ ಸ್ವಾಮಿಗಳಿಗೆ ಇರಿಸು-ಮುರಿಸು ಮಾಡಿದ್ದಕ್ಕೆ ನೀವು ಹೊಣೆಗಾರರಲ್ಲವೆ ? ಯಾವಾಗಲೂ ತಾತ್ತ್ವಿಕ ಖಚಿತತೆ ಬಹಳ ಮುಖ್ಯ. ಬಸವ ತತ್ತ್ವದ ಮೇಲಾದರೂ ಮಹಾಸಭೆಯನ್ನು ಬೆಳೆಸಿರಿ. ಇಲ್ಲವೇ ಅದನ್ನು ಸಂಪೂರ್ಣವಾಗಿ ಕೈಬಿಟ್ಟು ಪಂಚಾಚಾರ್ಯವಾದದ ಮೇಲಾದರೂ ಬೆಳೆಸಿರಿ. ಎಂದೂ ಹೊಂದಿಕೆಯಾಗದ ಎರಡೂ ವಿಚಾರಧಾರೆ ಮತ್ತು ಎರಡೂ ವಿಚಾರ ಧಾರೆಯ ವರನ್ನು ವೇದಿಕೆ ಮೇಲೆ (ಅದೂ ಪ್ರತ್ಯೇಕವಾಗಿ) ಕರೆತಂದು ಪ್ರದರ್ಶಿಸಿದರೆ ಸಮಾಜವು ಎಂದೂ ಒಂದಾಗದು. ನಮ್ಮ ಸಮಾಜದಲ್ಲಿ ಕೆಲವು ಮೂಢ ಶ್ರೀಮಂತರುಂಟು. ಅವರು ಲಿಂಗವಂತ ಸ್ವಾಮಿಗಳನ್ನು ಕರೆದು, ಗೌರವಿಸಿ, ಉಪಚರಿಸುವರು. ಅವರು ಆಕ್ಷೇಪಿಸುತ್ತಾರಲ್ಲಾ ಎಂದು ಅವರನ್ನು ಬೀಳ್ಕೊಟ್ಟನಂತರ, ಕಳ್ಳತನದಲ್ಲಿ ಬ್ರಾಹ್ಮಣ ಪುರೋಹಿತರನ್ನೂ ಕರೆದು ನವಗ್ರಹ ಪೂಜೆ, ಸತ್ಯನಾರಾಯಣ ವ್ರತ, ಹೋಮ ಮಾಡಿಸಿ ಗುಟ್ಟಾಗಿ ಕಳಿಸುವರು.

ಇದೇ ಜಾಡಿನಲ್ಲಿ ಮಹಾಸಭೆ ಸಾಗಿ, ಒಂದೊಂದು ದಿನದ ವೇದಿಕೆಯಿಂದ ಒಂದೊಂದು ಬಗೆಯ ಇತಿಹಾಸ, ತತ್ತ್ವಜ್ಞಾನದ ಸಂದೇಶ ನೀಡಿದರೆ ಜನರ ತಲೆ ಕೆಡುವುದರಲ್ಲಿ ಸಂದೇಹವಿಲ್ಲ. ಧೈರ್ಯವಾಗಿ, ಪ್ರಾಮಾಣಿಕವಾಗಿ ಪಂಚಾಚಾರ್ಯ ವಿಚಾರಧಾರೆ ಒಪ್ಪಿಕೊಂಡು ಬಸವ ತತ್ತ್ವ-ವಚನ ಸಾಹಿತ್ಯಕ್ಕೆ ವೀರಶೈವ ಮಹಾಸಭೆ ಯಿಂದ ಬಹಿಷ್ಕಾರ ಹಾಕಿಬಿಡಿರಿ. ಆಗ ಬಸವ ತತ್ತ್ವಾನುಯಾಯಿಗಳು ವೀರಶೈವ ಮಹಾಸಭೆ ನಮ್ಮದು ಎಂದು ಮೋಸ ಹೋಗುವುದಾದರೂ ತಪ್ಪುತ್ತದೆ. ಇಬ್ಬಗೆಯ ನೀತಿಯಿಂದ ಯಾರಿಗೂ ಶ್ರೇಯಸ್ಸಾಗದು.

ಬೆಳಗಾಂವಿಯ ಮಹಾಧಿವೇಶನದ ಮೂಲಕ ಮೇಲಿನ ಎಲ್ಲ ದೋಷಗಳನ್ನು ಮನಗಂಡು ಅ. ಭಾ. ವೀ. ಮಹಾಸಭೆಯ ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ರಾಜೀ ನಾಮೆ ನೀಡಿದ್ದೇನೆ. ಸ್ವೀಕರಿಸಬೇಕಾಗಿ ವಿನಂತಿ.

ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ಕೇವಲ ವೈಯಕ್ತಿಕ ಪ್ರಚಾರ-ಪ್ರತಿಷ್ಠೆ-ವೈಭವೀಕರಣಕ್ಕೆ ಬಳಸಿಕೊಳ್ಳದೆ, ಒಂದು ತಾತ್ತ್ವಿಕ ನೆಲೆಗಟ್ಟಿನ ಸಂಸ್ಥೆಯಾಗಿ ಬೆಳೆಯಲು ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶರಣು ಶರಣಾರ್ಥಿಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕೂಡಲ ಸಂಗಮ

ಉತ್ತರ ಕರ್ನಾಟಕ ದಿನ ಪತ್ರಿಕೆ, ಬೀದರ ಸಂಪಾದಕೀಯ ಬರಹ. 14-5-92

ಸಾರ್ಥಕವಾಗದ ಮಹಾಧಿವೇಶನ

ಬೆಳಗಾವಿಯಲ್ಲಿ ಅಖಿಲ ಭಾರತ ವೀರಶೈವ ಮಹಾ ಸಭೆಯ 21ನೇ ಅಧಿವೇಶನ. ಮೂರು ದಿನಗಳ ಕಾಲ ಧರ್ಮದ-ಸಮಾಜದ ಆಗು-ಹೋಗುಗಳ ಚಿಂತನೆ.

ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳ ಬಹಿಷ್ಕಾರ. ಮಹಾಧಿವೇಶನದ ಸಮಾರೋಪ. ಪಂಚಾಚಾರ್ಯರ ಸನ್ನಿಧಿ. ಚಿತ್ರದುರ್ಗ ಜಗದ್ಗುರುಗಳಿಂದ ಧಿಕ್ಕಾರ. ವೀರಶೈವ ಸಂಸ್ಥಾಪಕರೆಂದು ಪಂಚಾಚಾರ್ಯರಿಗೆ ಸಂಬೋಧನೆ. ಇತಿಹಾಸಕ್ಕೆ ಅಪಚಾರ. ಬಸವಣ್ಣನವರೇ ವೀರಶೈವ ಧರ್ಮದ ಸಂಸ್ಥಾಪಕರು. ಚಿತ್ರದುರ್ಗ ಜಗದ್ಗುರುಗಳ ಪ್ರತಿಪಾದನೆ.

ಮಹಾಧಿವೇಶನದಲ್ಲಿ ಮಠಾಧೀಶರ ಗೋಷ್ಠಿ. ಸಿದ್ಧಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳು ಗೋಷ್ಠಿ ಉದ್ಘಾಟಿಸಲು ಬರಲಿಲ್ಲ. ಗೋಷ್ಠಿಯಲ್ಲಿ ಗಂಭೀರ ಚಿಂತನೆ. ಬೇಲಿ ಮಠದ ಶಿವರುದ್ರ ಸ್ವಾಮಿಗಳು. ನಾವು ಮಹಾಧಿವೇಶನ ಬಹಿಷ್ಕರಿಸುತ್ತಿದ್ದೆವು. ನಮ್ಮ ನಿಲುವು ಹೇಳಲು ಬಂದಿದ್ದೇವೆ. ಪಂಚಾಚಾರ್ಯರಿಗೆ ಆಹ್ವಾನಿಸಿದವರು ಯಾರು ? ಸ್ಪಷ್ಟೀಕರಣ ನೀಡಿ. ಮಹಾಸಭೆಯವರಿಗೆ ಮಹಾಧಿವೇಶನದ ಸಂಘಟಕರಿಗೆ ಉತ್ತರ ಸವಾಲು. ಅಪ್ಪ ಬಸವಣ್ಣನವರೇ ಧರ್ಮ ಗುರು. ಬೇಲಿಮಠದ ಶಿವರುದ್ರ ಸ್ವಾಮಿಗಳ ಪ್ರತಿಪಾದನೆ. ಇಳಕಲ್ ಮಹಾಂತ ಶಿವಯೋಗಿಗಳು ಹಾಗೂ ಅನೇಕ ಮಠಾಧೀಶರ ಸಮರ್ಥನೆ.

ಬಸವಣ್ಣ ವೀರಶೈವ ಸಂಸ್ಥಾಪಕರು. 12ನೇ ಶತಮಾನದಿಂದ ಹಿಡಿದು ಇಲ್ಲಿಯ ವರೆಗೆ ಇತಿಹಾಸ ಸಂಶೋಧನೆ ಸಾರಿ ಸಾರಿ ಹೇಳುತ್ತಿವೆ. ವೀರಶೈವ ಮಹಾಸಭೆ ಕಣ್ಣು ಕಟ್ಟಿಕೊಂಡಿದೆ.

ಮಹಾಧಿವೇಶನದಲ್ಲಿ ಅನೇಕ ಗೊತ್ತುವಳಿ. ಧರ್ಮ ಸಂಸ್ಥಾಪಕರ ವಿಷಯ ನೆನೆಗುದಿಯಲ್ಲಿ. ಧರ್ಮ ಸಂಸ್ಥಾಪಕರ ವಿಷಯ ಪಂಡಿತರಿಗೆ. ಸಂಶೋಧಕರಿಗೆ, ಯಾವ ಪಂಡಿತರು ? ಯಾವ ಸಂಶೋಧಕರು ? ಅರ್ಥವಾಗಲಿಲ್ಲ.

ಇತಿಹಾಸ ಸ್ಪಷ್ಟ. ಸಂಶೋಧನೆ ಮುಗಿದಿದೆ. ಎಲ್ಲವೂ ನಿಚ್ಚಳ. ಬಸವಣ್ಣನವರನ್ನು ಒಪ್ಪಿಕೊಳ್ಳಲು ಮಹಾಸಭೆಗೆ ಏಕೆ ಸಂಕೋಚ.

ಮಹತ್ವ ಪೂರ್ಣ ನಿರ್ಧಾರ ಆದೀತೆಂಬ ನಿರೀಕ್ಷೆ. 21ನೇ ಮಹಾಧಿವೇಶನದಲ್ಲಿ ಹುಸಿಯಾಗಿದೆ. ಬಸವಣ್ಣನವರನ್ನು ಒಪ್ಪಲು ಇನ್ನೂ ತಯ್ಯಾರಿಲ್ಲ. ಇದೆಂಥ ಸಮಾಜ! ಇದೆಂಥ ಮಹಾಸಭೆ!

ಕಲಬುರ್ಗಿ ಶರಣ ಬಸವೇಶ್ವರ ಸಂಸ್ಥಾನ. ಬಸವಾದಿ ಶರಣರ ಪರಂಪರೆ. ಡಾ. ಶರಣಬಸಪ್ಪ ಅಪ್ಪ ಪೀಠಾಧಿಪತಿ. ಅಖಿಲ ಭಾರತ ವೀರಶೈವ ಮಹಾಸಭೆ ಅಧ್ಯಕ್ಷರು. ಅವರ ನೇತೃತ್ವದ ಅಧಿವೇಶನ. ಬಸವಣ್ಣನವರಿಗೆ ಒಪ್ಪಿಕೊಳ್ಳದೇ ಇರುವುದು ದುರದೃಷ್ಟಕರ.

ವೀರಶೈವ ಮಹಾಸಭೆ ಬಗ್ಗೆ ಬಸವಾನುಯಾಯಿಗಳಲ್ಲಿ ಬೇಸರ. ಮಹಾಸಭೆಗೆ ಬಹಿಷ್ಕರಿಸುವ ದಿನಗಳು ದೂರವಿಲ್ಲ. ಅಂಥ ದಿನಗಳು ಬರಬಾರದು. ಶರಣ ಬಸಪ್ಪ ಅಪ್ಪ ಅವರ ಮೇಲೆ ಹೆಚ್ಚಿನ ಹೊಣೆ. ಯಾವ ರೀತಿ ಸಮಾಜ ಮುನ್ನಡೆಸುತ್ತಾರೋ ಕಾದು ನೋಡಬೇಕು.

★

ಉತ್ತರ ಕರ್ನಾಟಕ ದಿನಪತ್ರಿಕೆ, ಬೀದರ
ಸಂಪಾದಕೀಯ ಬರಹ. 15-5-1992

ಕಂದಾಚಾರದ ಪ್ರತಿಷ್ಠಾನ ತತ್ವಕ್ಕೆ ತಿಲಾಂಜಲಿ

ಅಖಿಲ ಭಾರತೀಯ ವೀರಶೈವ ಮಹಾಸಭೆಯ 21ನೇ ಅಧಿವೇಶನ. ವಿವಿಧ ಕಾರಣಗಳಿಂದ ಅಧಿವೇಶನ ತಿಥಿಗಳಲ್ಲಿ ಬದಲಿ. ಕೊನೆಗೆ ಮೇ 10, 11, 12 ರಂದು ಜರುಗಿತು.

ಅಧಿವೇಶನ ಆಯಿತು. ಕೆಟ್ಟ ಪರಿಸ್ಥಿತಿಯಲ್ಲಿ ಮುಕ್ತಾಯಗೊಂಡಿತು. ಅಧಿವೇಶನದ ಉದ್ದೇಶ ಫಲಿಸಲಿಲ್ಲ. ವೀರಶೈವ ತತ್ವಕ್ಕೆ ತಿಲಾಂಜಲಿ. ಹಳೆ ಕಂದಾಚಾರಕ್ಕೆ ಪ್ರತಿಷ್ಠಾನ. ಅಡ್ಡ ಪಲಕ್ಕಿಯಲ್ಲಿ ಮೆರಯುವವರಿಗೆ ಮರ್ಯಾದೆ. ಬಸವಣ್ಣನವರ ತತ್ವ. ವೀರಶೈವ ಸಮಾಜದ ನೀತಿ. 21ನೇ ಅಧಿವೇಶನದಲ್ಲಿ ನಿರ್ನಾಮ.

ಅಧಿವೇಶನಗಳು ಜರುಗಬೇಕು. ಸಮಾಜ ಚಿಂತನೆ ನಡೆಯಬೇಕು. ಮುಕ್ತ ವಿಚಾರಕ್ಕೆ ಆಸ್ಪದ. ಮಹಾಸಭೆ ಅನುಭವ ಮಂಟಪ ಆಗಬೇಕು.

ಪುರಾತನದಿಂದ ಬಂದದ್ದು ಶೈವ ಪರಂಪರೆ. ವೀರಶೈವ ಧರ್ಮ–ಸಮಾಜ ವಿಶ್ವಜ್ಯೋತಿ ಬಸವಣ್ಣನವರ ಕೊಡುಗೆ. ಸಂಶೋಧನೆಯಿಂದ ಸಿದ್ಧ. ತಿಳುವಳಿಕೆ ಇದ್ದವರಿಗೆ ತಿಳಿಯುತ್ತದೆ.

ಶರಣ ಪರಂಪರೆ ಬೆಳೆಯಬೇಕು. ಅದೇ ಪರಂಪರೆಯವರಿಂದ ಧರ್ಮಕ್ಕೆಕೊಡಲಿ ಏಟು. ಅಖಿಲ ಭಾರತ ವೀರಶೈವ ಮಹಾಸಭೆಗೆ ದಾಸೋಹ ಪೀಠಾಧೀಶ ಶರಣ ಬಸಪ್ಪ ಅಪ್ಪ ಅವರೇ ಅಧ್ಯಕ್ಷರು. ಅವರ ಕಾಲದಲ್ಲೇ ಶರಣ ತತ್ವಕ್ಕೆ ತಿಲಾಂಜಲಿ. ಇದು ಶೋಚನೀಯ ಹಾಗೂ ಖಂಡನೀಯ.

ಕನ್ನಡ ಕರ್ನಾಟಕದ ಹೃದಯ. ಕನ್ನಡಿಗರ ಜೀವಾಳ. ವೀರಶೈವರ ಪ್ರೇರಣಾ ಶಕ್ತಿ. ಧರ್ಮ ಗ್ರಂಥದ ಭಾಷೆ. ಮಹಾ ಸಭೆಯಲ್ಲಿ ಇಂಗ್ಲೀಷ್‌ನಲ್ಲಿ ಗೊತ್ತುವಳಿ. ಯಾವ ಕನ್ನಡಿಗ ಸಹಿಸಲಾರ. ಕನ್ನಡದ ಕೆಚ್ಚೆದೆಯ ಧೀಮಂತ ಪಾಟೀಲ ಪುಟ್ಟಪ್ಪ. ಕನ್ನಡ ದ್ರೋಹಿಗಳಿಗೆ ಸಿಂಹ ಸ್ವಪ್ನ. ಅವರ ಹೆಸರಿಗೆ ಅಧಿಕಾರಿಗಳು ನಡುಗುತ್ತಾರೆ. ಅವರ ಎದುರಿನಲ್ಲೇ ಕನ್ನಡದ ಕೊಲೆ. ಅವರು ಸಹಿಸಲು ಸಾಧ್ಯವಿಲ್ಲ. ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ತತ್ವಕ್ಕಾಗಿ ಹೋರಾಡಿದ್ದಾರೆ. ಸಭೆಯಲ್ಲಿ ಅವರಿಗೆ ಜಗ್ಗಾಡುವುದು ಅಮಾನವೀಯ.

ಶರಣರೆಂದು ಹೇಳಿಕೊಳ್ಳುವ ವಿಶ್ವನಾಥ ರೆಡ್ಡಿ ಮುದ್ನಾಳರ ಉಪಸ್ಥಿತಿ. ಬಸವರಾಜ ಪಾಟೀಲ ಅನ್ವರಿಯವರ ಸಾಕ್ಷಮ. ಅವರು ಸುಮ್ಮನಿದ್ದರೇ ಸಾಕಿತ್ತು. ಪುಟ್ಟಪ್ಪನವರ ಪ್ರತಿಭಟನೆಗೆ ವಿರೋಧಿಸಿದ್ದು ಕನ್ನಡ ದ್ರೋಹ. ಕನ್ನಡಿಗರು ಸಹಿಸಬಾರದು. ಇದರ ಬಗ್ಗೆ ಪ್ರತಿಭಟನೆ ನಡೆಯಬೇಕು.

ಮಹಾಧಿವೇಶನದಲ್ಲಿ ಪುಟ್ಟಪ್ಪನವರಿಗೆ ಜಗ್ಗಾಟ. ಛಾಯಾಗ್ರಾಹಕನ ಮೇಲೆ ಆಕ್ರಮಣ. ಕ್ಯಾಮರಾ ಕಸಿದುಕೊಳ್ಳುವ ಹೇಯ ಕೆಲಸ. ಪ್ರಜಾಪ್ರಭುತ್ವಕ್ಕೆ ವಿರೋಧ. ಅಧಿಕಾರಶಾಹಿ ತಲೆ ಎತ್ತುವ ಲಕ್ಷಣ. ಅಧಿವೇಶನ ಗೂಂಡಾಗಳ ಸಮಾವೇಶ ಅಲ್ಲ. ತತ್ವ ಪ್ರತಿಪಾದನೆಯ ಬಹಿರಂಗ ಸಭೆ. ವಿಚಾರ ಮಂಡನೆಗೆ ಮುಕ್ತ ಅವಕಾಶ.

ಬೆಳಗಾವಿಯ ಅಧಿವೇಶನ. ಲೋಕಶಾಹಿಗೆ ವಿರೋಧಿಸಿದೆ. ತತ್ವಕ್ಕೆ ಕೈಬಿಟ್ಟಿದೆ. ಸ್ವಪ್ರತಿಷ್ಠೆಗೆ ಸಾಧನವಾಗಿದೆ.

ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಕನಸು ನುಚ್ಚು ನೂರಾಗಿದೆ. 90 ವರ್ಷದ ಇತಿಹಾಸ ಮಾಯವಾಗಿದೆ.

ಭಾರತದ ವೀರಶೈವರು ಗಂಭೀರವಾಗಿ ವಿಚಾರ ಮಾಡಬೇಕು. ದುಷ್ಟ ಶಕ್ತಿಗಳಿಗೆ ಗುರುತಿಸಬೇಕು. ವೀರಶೈವ ತತ್ವ ದ್ರೋಹಿಗಳಿಗೆ ಬಯಲಿಗೆ ತರಬೇಕು. ಕನ್ನಡಾಭಿಮಾನಿ ಪಾಟೀಲ ಪುಟ್ಟಪ್ಪನವರ ಅವಮಾನ. ಕನ್ನಡಿಗರಿಗೆ ಬಳಿದ ಮಸಿ.

ಪಾಟೀಲ ಪುಟ್ಟಪ್ಪನವರು ಲೋಕಶಾಹಿ ಪ್ರತಿಪಾದಕರು. ಕನ್ನಡದ ಹೋರಾಟಗಾರರು. ಧೀಮಂತ ಪತ್ರಕರ್ತರು. ಸತ್ಯವನ್ನು ನಿಷ್ಠುರವಾಗಿ ಧೈರ್ಯದಿಂದ ಮಂಡಿಸುವವರು.

ವೀರಶೈವ ಮಹಾಸಭೆ ತನ್ನ ಮರ್ಯಾದೆ ಮೀರಿದೆ. ಅಧಿವೇಶನದ ಉದ್ಘಾಟನೆ ಉಪ ರಾಷ್ಟ್ರಪತಿಯವರಿಂದ. ಬಸವ ತತ್ವದ ಬಗ್ಗೆ ಹಾಡಿ ಹೊಗಳಿದ್ದಾರೆ. ವಿಶ್ವದ ಜನರಿಗೆ ಮಾರ್ಗದರ್ಶನ ಎಂದು ಹೇಳಿದ್ದಾರೆ. ಅವರು ಹೇಳಿದ ಮಾತು ಮೂರೇ ದಿವಸದಲ್ಲಿ ಮಾಯವಾಗಿದೆ. ಅದೇ ವೇದಿಕೆ ಮೇಲೆ ನುಚ್ಚು ನೂರಾಗಿದೆ.

ಪಾಟೀಲ ಪುಟ್ಟಪ್ಪನವರು ಎದೆಗುಂದಬೇಕಾಗಿಲ್ಲ. ಧೈರ್ಯ ಬಿಡಬೇಕಾಗಿಲ್ಲ. ತತ್ತ್ವ ನಿಷ್ಠ ಹೋರಾಟಕ್ಕೆ ಕನ್ನಡಿಗರು ಅವರ ಹಿಂದೆ ಇದ್ದಾರೆ. ತತ್ವನಿಷ್ಠ ವೀರಶೈವರ ಬೆಂಬಲ ಇದೆ. ತೋರಿಕೆಯ ವೀರಶೈವ ಮುಖಂಡರ ಬಣ್ಣ ಬಯಲು ಮಾಡಬೇಕಾಗಿದೆ. ಪಂಚಾಚಾರ್ಯರ ಪುರೋಹಿತಶಾಹಿ. ಪೀಠಾಧೀಶರ ದೊಡ್ಡಸ್ತಿಕೆ. ಸಮಾಜಕ್ಕೆ ತಿಳಿಹೇಳಬೇಕಾಗಿದ. ಇನ್ನು ಮುಂದೆ ತತ್ವನಿಷ್ಠ ಅಧಿವೇಶನ ನಡೆಯುವಂತೆ ಮಾಡಬೇಕಾಗಿದೆ.

ಸಂಪ್ರದಾಯಿ ಶೈವರ ಕಪಿಮುಷ್ಠಿಯಿಂದ ವೀರಶೈವ ಸಮಾಜ ಹೊರ ಹೊಮ್ಮಬೇಕಾಗಿದೆ. ಮುಕ್ತವಾಗಿ ಬೆಳೆಯಬೇಕಾಗಿದೆ.

ಬಸವ ತತ್ತ್ವ ನಿಷ್ಠರು ಬಸವಾನುಯಾಯಿಗಳು, ವಿಶೇಷವಾಗಿ ವಿರಕ್ತ ಮಠಾಧೀಶರು ತಮ್ಮ ನಿಲುವನ್ನು ವ್ಯಕ್ತಪಡಿಸಬೇಕು. ಅವಶ್ಯಕತೆ ಬಿದ್ದರೆ ಬೀದಿಗೆ ಇಳಿಯಬೇಕು. ಶರಣರು ರಕ್ತ ಕೊಟ್ಟು ತತ್ವ ರಕ್ಷಿಸಿದ್ದಾರೆ. ಮಠಾಧೀಶರು ಹೋರಾಟ ಮಾಡಿ ತತ್ವ ರಕ್ಷಿಸಿದರೆ ಸಾಕು.

★

ಉತ್ತರ ಕರ್ನಾಟಕ, ಬೀದರ.

(ಕನ್ನಡಿಗರ ಅನಿಸಿಕೆಗಳು)

ಮಾದಾರ ಚನ್ನಯ್ಯನಿಗೆ ಯಾವ ಪೀಠ !

ಮಾನ್ಯರೆ,

ಬೆಳಗಾವಿಯಲ್ಲಿ ಜರುಗಿದ ವೀರಶೈವ ಮಹಾಸಭೆಯ ಕೊನೆಯ ದಿನದ ಸಮಾರೋಪ ಸಮಾರಂಭದಲ್ಲಿ ಪೀಠಕ್ಕಾಗಿ ಕಿತ್ತಾಡಿದ ದೃಶ್ಯವನ್ನು ನೋಡಿ ನನ್ನ ಮನಸ್ಸಿಗೆ ಚೇಳು ಕುಟುಕಿದಂತಾಯಿತು. ಶತಾಯುಷಿ ವಯೋವೃದ್ಧರಾದ ಸಮಾಜ ಸೇವಾ ನಿಷ್ಠರಾದ, ನಾಗನೂರು ರುದ್ರಾಕ್ಷಿಮಠಾಧ್ಯಕ್ಷರಾದ ಡಾ. ಶಿವಬಸವ ಸ್ವಾಮಿಗಳು ಪಂಚ ಪೀಠಾಧೀಶ್ವರರ ದೃಷ್ಠಿಯಲ್ಲಿ ಕುಬ್ಜರಾಗಿ ಕಂಡರು. ಜಗದಗಲದ, ಮುಗಿಲಗಲದ ಮಹಾ ಲಿಂಗವನ್ನು ಕೈಗೆ ಇಷ್ಟಲಿಂಗವನ್ನಾಗಿ ಮಾಡಿಕೊಟ್ಟು ವೀರಶೈವ (ಲಿಂಗವಂತ) ಧರ್ಮವನ್ನು ಸ್ಥಾಪಿಸಿದ ಬಸವಣ್ಣನವರು ಈ ಪಂಚ ಪೀಠಾಧೀಶ್ವರರ ದೃಷ್ಟಿಯಲ್ಲಿ ಗುರುವಾಗಲು ಜಂಗಮನಾಗಲು ಸಾಧ್ಯವೇ ಇಲ್ಲ.

ಅರ್ಧ ಶತಮಾನದ ಹಿಂದೆ ಈ ಪಂಚಾಚಾರ್ಯ ಪರಂಪರೆಯವರು ಬಸವಣ್ಣನವರನ್ನು ಬಾಯಿಗೆ ಬಂದಂತೆ, ವಾಚಾಮ ಗೋಚರವಾಗಿ ಉಗ್ರವಾಗಿ ನಿಂದಿಸುತ್ತಿದ್ದರು. ಈಗ ಬಸವಣ್ಣನವರ ಕೀರ್ತಿ ಬೆಳೆದಂತೆಲ್ಲ ಈ ಪಂಚಪೀಠಾಧೀಶ್ವರರು ಅವರನ್ನು ಒಬ್ಬ (ಗುಲಾಮ) ಭಕ್ತನಂತೆ ಕಾಣುತ್ತಿದ್ದಾರೆ. ಇದು ಇವರ ನಿಲುವನ್ನು ಬಣ್ಣದಲ್ಲಿಯೇ ತೋರಿಸುತ್ತಿದೆ.

ಬಸವಣ್ಣನವರು ಇಡೀ ಭಾರತೀಯ ಸತ್ಪರಂಪರೆಯ ಸಾರವನ್ನೇ ರಸಾಯನವನ್ನಾಗಿ ಮಾಡಿ ಕಟ್ಟಿದ ಈ ಧರ್ಮದ ಹುತ್ತದಲ್ಲಿ, ಈ ಪುರೋಹಿತಶಾಹಿ ಸರ್ಪಗಳು ಬಂದು ಸೇರಿವೆ. ಈ ಸರ್ಪಗಳು ಡಾ. ಶಿವಬಸವ ಸ್ವಾಮಿಗಳವರನ್ನು, ಬಸವಣ್ಣನವರನ್ನು ಹಾಗೂ ಅವರ ಅನುಯಾಯಿಗಳನ್ನು ಕಂಡು ಬುಸುಗುಡಹತ್ತಿವೆ. ಇದೆಂಥ ವಿಪರ್ಯಾಸ !

ಇಂಥವರನ್ನು ಬಹಿರಂಗ ತರಾಟೆಗೆ ತೆಗೆದುಕೊಂಡ ವಿಶ್ವನಾಥರೆಡ್ಡಿ ಮುದ್ನಾಳರವರು ಅಭಿನಂದನಾರ್ಹರು. ಇವರ ಸಕಾಲಿಕ ಪ್ರತಿಭಟನೆಯು ಈ ಸರ್ಪಗಳಿಗೆ ಗಾರುಡಿಗ ಮಂತ್ರವಾಗಿದೆ. ಹೀಗಾಗಿ ಇಂತಹ ಪ್ರತಿಗಾಮಿ ಶಕ್ತಿಗಳಿಗೆ ಸದ್ಯದಲ್ಲಿ ಭವಿಷ್ಯತ್ತಿನಲ್ಲಿ ವಿಪತ್ತು ಕಾದಿದೆ ಎಂಬ ಆತ್ಮ ಭರವಸೆಯು ಕೊಲ್ಮಿಂಚಿನಂತೆ ಮಿಂಚುತ್ತಿದೆ.

ಬಸವಣ್ಣನವರು ಮಾದಾರ ಚನ್ನಯ್ಯನನ್ನು ಹಿರಿಯ ಮಹೇಶ್ವರ, ತನ್ನಪ್ಪ ತನ್ನಜ್ಜನೆಂದು, ತಾನು ಆತನ ಮಗನೆಂದು ಲೋಕಕ್ಕೆ ಸಾರಿ ಹೇಳಿ ಮಾದಾರ ಚನ್ನಯ್ಯನಿಗೆ ಉನ್ನತ ಪೀಠವನ್ನು ಒದಗಿಸಿದ್ದಾರೆ. ಇಂಥ ಬಸವಣ್ಣನವರನ್ನು (ಗುಲಾಮ) ಭಕ್ತನಂತೆ ಕಾಣುವ ತಮ್ಮ ಶ್ರೀಮಠಕ್ಕೆ ಈ ಪಂಚ ಪೀಠಾಧೀಶ್ವರರನ್ನು ಸ್ವಾಗತಿಸಿದ ವಯೋವೃದ್ಧ ವಿರಕ್ತರನ್ನೇ ಲಘುವಾಗಿ ಕಾಣುವ ಈ ಪೀಠಾಧೀಶ್ವರರು ಮಾದಾರ ಚನ್ನಯ್ಯನಿಗೆ ಯಾವ ಪೀಠವನ್ನು ಕೊಟ್ಟಾರು ? ಬಸವಣ್ಣನವರು ಮಾದಾರ ಚನ್ನಯ್ಯನಿಗೆ ಕೊಟ್ಟ ಪೀಠವನ್ನು, ಮತ್ತೆ ಈ ಸಮಾಜವು ಕೊಡಬಲ್ಲದೇ ? ಎಂಬುದು ನನ್ನ ನಿರಂತರ ದುಗುಡವಾಗಿದೆ. ಇದಕ್ಕೆ ಕಾಲವೇ ಉತ್ತರ ಹೇಳುತ್ತದೆ ಎಂಬುದರಲ್ಲಿ ಯಾವ ಸಂಶಯವಿಲ್ಲ.

★

—ಪ್ರೊ. ವಿ. ವಿ. ಸಂಗಮದ
ರಾಣೆಬೆನ್ನೂರು

ಹೊಲೆಯ ಹೊಲಬಿಗ ನಾದೊಡೆ
ಅವನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯ
ಹೊಲಬುಗೆಡದೆ ಲಿಂಗಶರಣೆನ್ನಿರಯ್ಯ
ಹೊಲಬುಗೆಡಬೇಡ ಶಿವಶರಣೆನ್ನಿರಯ್ಯ
ನಮ್ಮ ಕೂಡಲ ಸಂಗನ ಮಹಾಮನೆಯೊಳು
ಮಾದಾರ ಚನ್ನಯ್ಯ ಹೊಲಬಿಗನಯ್ಯ

ವಿಶ್ವಗುರು ಬಸವಣ್ಣನವರು.

ಬಸವ ಧರ್ಮ ಸಂಸತ್ ಸದಸ್ಯರಿಗೆ
ಮತ್ತು
ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ.

****

ಅಕ್ಟೋಬರ ತಿಂಗಳಲ್ಲಿ ನಡೆಯುವ ಶಿಬಿರದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಚಿಂತನೆ, ಚರ್ಚೆ ಅತ್ಯಗತ್ಯವಾಗಿ ಮಾಡುವುದಿದೆ. ಅದಕ್ಕಾಗಿ ಬಸವ ಧರ್ಮ ಸಂಸತ್ ಸದಸ್ಯರು, ರಾಷ್ಟ್ರೀಯ ಬಸವದಳದವರು ಮತ್ತು ಎಲ್ಲ ಬಸವ ತತ್ತ್ವಾಭಿಮಾನಿಗಳು ಈ ಬಗ್ಗೆ ಪೂರ್ವಭಾವಿ ಚಿಂತನೆ ಮಾಡಬೇಕು. ರಾಷ್ಟ್ರೀಯ ಬಸವ ದಳದವರು ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಈ ಬಗ್ಗೆ ಚಿಂತನೆ ಮಾಡಿ ಸದಸ್ಯರ ಅಭಿಪ್ರಾಯ ಪಡೆಯು-ಬೇಕು.

1. ಸಚಿವ ಶ್ರೀ ಬಸವಲಿಂಗಪ್ಪನವರು ಲಿಂಗಾಯತರು ಹಿಂದುಗಳಲ್ಲ ಎಂದು ಇತ್ತೀ-ಚೆಗೆ ಬಸವ ಜಯಂತಿ ಸನ್ನಿವೇಶದಲ್ಲಿ ಸಹ ಹೇಳಿದರು. ಈ ಬಗ್ಗೆ ಚಿಂತನೆ ನಡೆಸುವುದು ಅತ್ಯಗತ್ಯವಾಗಿದೆ.
   ಲಿಂಗಾಯತ ಧರ್ಮವು ಹಿಂದೂ ಕಕ್ಷೆಯ ಒಳಗಿರುವುದು ಸೂಕ್ತವೊ ? ಅಥವಾ ಹಿಂದೂ ಕಕ್ಷೆಯ ಹೊರಗೆ ಹೋಗಿ ಅಹಿಂದು ಧರ್ಮವಾಗಿರುವುದು ಸೂಕ್ತವೋ? ಧರ್ಮ, ಸಂಸ್ಕೃತಿ, ದೇಶ–ಈ ಎಲ್ಲವುಗಳ ಹಿನ್ನೆಲೆಯಲ್ಲಿ ಚಿಂತನೆ ಮಾಡಬೇಕು. ಅನುಯಾಯಿಗಳಲ್ಲಿ ಸ್ಪಷ್ಟ ತಿಳುವಳಿಕೆ ಅತ್ಯಗತ್ಯ.
2. ವೀರಶೈವ ಮಹಾಧಿವೇಶನದಲ್ಲಿ ಮತ್ತು ಅನಂತರ ಸಹ ಪಂಚಪೀಠಾಧೀಶರು ಕೆಲವು ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಲಿರುವರು. ಈ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮದ ಶುದ್ಧೀಕರಣ, ಖಚಿತತೆ, ಅನುಯಾಯಿಗಳಿಗೆ ಸ್ಪಷ್ಟ ತಿಳುವಳಿಕೆ ಕೊಡಬೇಕಾದ ಕಾರ್ಯಕ್ರಮದ ರೂಪುರೇಷೆ.
3. ಬಸವ ಧರ್ಮ ಸಂಸತ್ ಸದಸ್ಯರ ಧರ್ಮಾಚರಣೆ, ಕೆಲವು ನಿಯಮಗಳು ಹೇಗಿರಬೇಕು ?
4. ಏಕದೇವೋಪಾಸನೆ ಬಸವ ಧರ್ಮದ ಜೀವಾಳ ಮತ್ತು ವೈಶಿಷ್ಟ್ಯ. ಇದಕ್ಕೆಚ್ಯುತಿ ತರದಂತಹ ಆಚರಣೆ ಅತ್ಯಗತ್ಯ. ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅಂದಿನಿಂದ ಇಂದಿನವರೆಗೆ ಆಗಿ ಹೋಗಿರುವ ಅನೇಕ ಶಿವಯೋಗಿಗಳು, ಶರಣರು ಮೆಟ್ಟಿದ ಸ್ಥಳಗಳಿವೆ, ಲಿಂಗೈಕ್ಯರಾದ ಸ್ಥಾನಗಳಿವೆ. ಇವುಗಳನ್ನು ರಕ್ಷಿ-ಸುವ ಬಗೆ ಹೇಗೆ ? ಮತ್ತು ಅರ್ಚನೆ ಬೇಕೆ, ಬೇಡವೆ ?

5. ವಿವಿಧ ಶರಣರು ಆಗಿ ಹೋಗಿದ್ದಾರೆ. ಅವರೆಲ್ಲರ ಭಾವಚಿತ್ರಗಳನ್ನು ಬರೆಸು-ವುದು, ಮುದ್ರಿಸುವುದು, ಪೂಜಿಸುವುದು ಅಗತ್ಯವೇ, ಅನಗತ್ಯವೇ ? ವಿವಿಧ ಶರಣರ ಅನುಯಾಯಿಗಳ ಭಾವನಾತ್ಮಕ ಸಂಬಂಧದ ಹಿನ್ನೆಲೆಯಲ್ಲಿ ಇದನ್ನು ಚಿಂತಿಸಬೇಕು.
6. ನಿಸರ್ಗ ಚಿಕಿತ್ಸಕರು ಹೇಳುವ ಉಪಃಪಾನ ಮತ್ತು ಧಾರ್ಮಿಕ ನೇಮ ಇತ್ಯಾದಿ ಇತ್ಯಾದಿ.

ಅಕ್ಟೋಬರ್‌ವರೆಗೆ ಲಭ್ಯವಿರುವ ಸಮಯಾವಕಾಶದಲ್ಲಿ ನೀವುಗಳು ಎಲ್ಲರೂ ಚಿಂತನೆ ಮಾಡಿ, ಚರ್ಚಿಸಬೇಕಾದ ಸಂಗತಿಗಳನ್ನು ಸೂಚಿಸಬಹುದು.

—ಮಾತಾಜಿ

ಬಸವ ತತ್ತ್ವ ತರಬೇತಿ ಶಿಬಿರದಲ್ಲಿ
ಶರಣರ ದಿನಚರಿ.

ಸುಪ್ರಭಾತದಲ್ಲಿ ಏಳುವಿಕೆ.	ಬೆಳಿಗ್ಗೆ 5-00 ಗಂಟೆ
ಶೌಚ	5 ರಿಂದ 5-30
ಮಂತ್ರಧ್ಯಾನ-ಯೋಗಾಸನ	5-30 ರಿಂದ 7
ಸ್ನಾನ-ಪೂಜೆ-ಉಪಾಹಾರ	7 ರಿಂದ 9-30
ಪ್ರಾರ್ಥನೆ-ಪ್ರವಚನ-ಚರ್ಚಾಗೋಷ್ಠಿ	9-30 ರಿಂದ 1-00
ಮಧ್ಯಾಹ್ನದ-ಪ್ರಸಾದ-ಅಲ್ಪವಿಶ್ರಾಂತಿ ಸ್ವಾಧ್ಯಾಯ	1-00 ರಿಂದ 3-30
ಉಪನ್ಯಾಸಗಳು	3-30 ರಿಂದ 5-30
ಟೀ, ಕಾಫಿ, ಸಂಜೆಯ ಓಡಾಟ	5-30 ರಿಂದ 7-00
ಪ್ರವಚನ	7-00 ರಿಂದ 9-00
ರಾತ್ರಿಯ ಊಟ	9-00 ರಿಂದ 10-00
ಲಘು ಓಡಾಟ	10-00 ರಿಂದ 10-30
ಶಿವಯೋಗ ನಿದ್ರೆ	10-30 ರಿಂದ ಬೆಳಗಿನ 5-00

ಪ್ರತಿನಿತ್ಯ ಮಧ್ಯಾಹ್ನ 3-30 ರಿಂದ 5-30 ರ ವರೆಗಿನ ಅವಧಿಯಲ್ಲಿ ಶಿಬಿರಾರ್ಥಿಗಳಾದ ಶರಣರು ಉಪನ್ಯಾಸಗಳನ್ನು ಮಾಡಲು ಅವಕಾಶ ಉಂಟು.

ತಾವು ಪ್ರತಿಪಾದಿಸುವ ವಿಷಯ ಕುರಿತು ಸಿದ್ಧತೆ ಮಾಡಿಕೊಳ್ಳಬೇಕು. ಆ ಬಗ್ಗೆ ಮೊದಲಿಗೇ ಪತ್ರ ಬರೆದು ನಮಗೆ ತಿಳಿಸಬಹುದು. ಒಬ್ಬರಿಗೆ ಕನಿಷ್ಟ ಕಾಲಾವಧಿ ಅರ್ಧಗಂಟೆ, ಅತ್ಯಂತ ಅಧಿಕ ಕಾಲಾವಧಿ 1 ಗಂಟೆ. ಬೇರೆ ಬೇರೆ ವಿಷಯಗಳನ್ನು ಕುರಿತು

ಮಾತಾಡಬಹುದು.ಅಥವಾ ಆಯ್ದ ವಚನಗಳಿಗೆ ಅರ್ಥವಿವರಣೆ ಕೊಡಬಹುದು. ಒಂದು ದಿವಸಕ್ಕೆ ಇಬ್ಬರು-ಮೂವರಿಗೆ ಪೂರ್ಣಾವಧಿ ಉಪನ್ಯಾಸ ಮಾಡಲು ಅವಕಾಶ ನೀಡಬಹುದಾಗಿದೆ ಮತ್ತು ಸಿದ್ಧತೆ ಮಾಡಿಕೊಂಡವರು ಎಷ್ಟು ಉಪನ್ಯಾಸಗಳನ್ನಾದರೂ ಮಾಡಬಹುದಾಗಿದೆ. ತಾವು ಸಿದ್ಧತೆ ಮಾಡಿಕೊಂಡ ವಿಷಯದ ಬಗ್ಗೆ ಪತ್ರ ಬರೆದು ತಿಳಿಸಿದರೆ ಕಾರ್ಯಕ್ರಮ ಹೊಂದಿಸಲು ಅನುಕೂಲವಾಗುವುದು. ★

.... ಬಸವ ತತ್ತ್ವ ತರಬೇತಿ ಕಮ್ಮಟ ....

ಅಕ್ಟೋಬರ್ ತಿಂಗಳಲ್ಲಿ ಮಹತ್ವಪೂರ್ಣ ಶಿಬಿರ

ಶರಣ ಬಂಧುಗಳೇ,

ಪ್ರತಿ ವರ್ಷವೂ ಅಕ್ಟೋಬರ ತಿಂಗಳಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು ನಡೆಯುವುದು ಸರ್ವವಿದಿತವಷ್ಟೆ. 1992 ನೇ ಸಾಲಿನ ಶಿಬಿರವನ್ನು ಅಕ್ಟೋಬರ್ 4 ರಿಂದ 18 ರ ವರೆಗೆ 15 ದಿವಸಗಳ ಕಾಲ ನಡೆಸಲಾಗುವುದು. ಬೆಂಗಳೂರು ದಕ್ಷಿಣ ತಾಲ್ಲೋಕು, ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ ಬಸವ ಗಂಗೋತ್ರಿಯಲ್ಲಿ ಈ ತತ್ತ್ವ ತರಬೇತಿ ಶಿಬಿರವು ನಡೆಯುತ್ತಲಿದ್ದು, ದಿ. 15, 16, 17, ರಂದು ಭಕ್ತಿಪಕ್ಷ ಸಮ್ಮೇಳನ ಇರುವುದು. 18-10-1992 ರಂದು ಮುಕ್ತಾಯ ಸಮಾರಂಭವು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 10 ರಿಂದ ನಡೆಯಲಿರುವುದು.

ಬಸವ ಗಂಗೋತ್ರಿಯು ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರಿಂದ 21 ನೆಯ ಕಿಲೋ ಮೀಟರ್ ಬಳಿ ಇರುವುದು. ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆಯೂ ಇದೆ. ಸಿಟಿ ಬಸ್‌ಗಳು ಕಲ್ಯಾಸಿ ಪಾಳ್ಯಂ ಬಸ್ ನಿಲ್ದಾಣದಿಂದ ಹೋಗುತ್ತಿದ್ದು, ಸಂಖ್ಯೆ ಹೀಗಿದೆ 231, 227, 229B. 228, 229.

ಮೆಜೆಸ್ಟಿಕ್‌ದಿಂದ ಮೈಸೂರು ರಸ್ತೆಯಲ್ಲಿ ಸಂಚರಿಸುವ ಗ್ರಾಮಾಂತರ ಪ್ರದೇಶಕ್ಕೆ ಹೋಗುವ ಬಸ್ಸುಗಳು ಬಸವ ಗಂಗೋತ್ರಿ ಬಳಿ ನಿಲ್ಲುತ್ತವೆ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ನಿಲ್ದಾಣಗಳ ಮಧ್ಯೆ ಬಸವ ಗಂಗೋತ್ರಿ ನಿಲ್ದಾಣವಿದೆ.

— ಶುಲ್ಕ ವಿವರ —

1. ಭಾನುವಾರ 4-10-1992 ರಿಂದ 18-10-1992 ರ ವರೆಗೆ ನಡೆಯುವ ಶಿಬಿರದ ಪೂರ್ಣಾವಧಿಯ ಶುಲ್ಕ 200-00 (ಎರಡು ನೂರು) ರೂ.
2. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ರಿಯಾಯಿತಿ ಇದ್ದು 125-00 ರೂ. ಶುಲ್ಕವಿದೆ.
3. ಭಕ್ತಿ ಪಕ್ಷ ಸಮ್ಮೇಳನದಲ್ಲಿ 4 ದಿವಸಗಳವರೆಗೆ ಭಾಗವಹಿಸುವವರಿಗೆ 60-00 ರೂ. ಶುಲ್ಕವಿದೆ.
4. ಭೃತ್ಯಾಚಾರ ಗಣದ ಸದಸ್ಯರಾಗಿ ಮುಂದೆ ಕಾರ್ಯಕರ್ತರಾಗುವವರಿಗೆ ಉಚಿತ ಪ್ರವೇಶವಿದೆ.
5. ಆರ್ಥಿಕ ಅನಾನುಕೂಲತೆಯಿದ್ದು, ಬಸವ ತತ್ತ್ವವನ್ನು ತಿಳಿದುಕೊಳ್ಳುವ ಆಸಕ್ತಿ ಇರುವವರಿಗೆ ಉಚಿತ ಪ್ರವೇಶವಿದೆ.

ಭೃತ್ಯಾಚಾರ ಗಣದ ಸದಸ್ಯರಾಗಬೇಕೆನ್ನುವವರು ಮತ್ತು ಆರ್ಥಿಕ ಅನಾನುಕೂಲತೆಯಿದ್ದು ಉಚಿತ ಪ್ರವೇಶ ಪಡೆಯಬೇಕು ಎನ್ನುವವರು ಮೊದಲೇ ಪತ್ರ ಬರೆದು ಅನುಮತಿಯನ್ನು ಪಡೆಯಬೇಕು.

ಈ ಸಲದ ಶಿಬಿರದಲ್ಲಿ ಕೆಲವೊಂದು ಮಹತ್ವ ಪೂರ್ಣ ವಿಷಯಗಳನ್ನು ಚರ್ಚಿಸಬೇಕೆಂದಿರುವ ಕಾರಣ ಬಸವ ಧರ್ಮ ಸಂಸತ್ ಸದಸ್ಯರು ಪೂರ್ಣಾವಧಿಗೆ ಭಾಗಿಗಳಾದರೆ ಒಳ್ಳಿತು. ಮತ್ತು ಎಷ್ಟೇ ವೈಯಕ್ತಿಕ ಅಡಚಣೆಗಳಿದ್ದರೂ ಅವರು ತಪ್ಪದೆ ಭಕ್ತಿಪಕ್ಷ ಸಮ್ಮೇಳನದಲ್ಲಿ ಭಾಗವಹಿಸಬೇಕು. ಚಿಂತನ ಮಂಥನ ಮಾಡಬೇಕು.

ಶಿಬಿರದ ಅವಧಿಯಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ದೀಕ್ಷಾ ಕಾರ್ಯಕ್ರಮ, ಸಮುದಾಯ ಪ್ರಾರ್ಥನೆ-ನಿರ್ವಹಣೆ, ಶ್ರೀ ಬಸವೇಶ್ವರ ಪೂಜಾವ್ರತ ಮುಂತಾದವುಗಳ ಬಗ್ಗೆ ಪ್ರಾಯೋಗಿಕ ತರಬೇತಿ ಸಹ ಇರುತ್ತದೆ. ಎಲ್ಲ ರಾಷ್ಟ್ರೀಯ ಬಸವದಳಗಳವರು ಕೆಲವು ಜನಗಳನ್ನಾದರೂ ಪ್ರಾತಿನಿಧಿಕವಾಗಿ ಕಳಿಸಿ, ತರಬೇತಿ ಪಡೆದರೆ ಸ್ಥಳೀಯವಾಗಿ ಕಾರ್ಯನಿರ್ವಹಣೆ ಸುಲಭವಾಗುತ್ತದೆ. ಶಿಬಿರ ಶುಲ್ಕವನ್ನು ಡಿ.ಡಿ./ಎಂ.ಓ ಮೂಲಕ ಕಳಿಸಬಹುದು. ವಿಳಾಸ : **ಸೋದರಿ ಕಸ್ತೂರಿ,** ಬಸವ ಗಂಗೋತ್ರಿ, ಕುಂಬಳಗೋಡು - 560074, ಬೆಂಗಳೂರು ದಕ್ಷಿಣ ತಾಲೂಕು. ಬೆಂಗಳೂರು ಜಿಲ್ಲೆ. ಡಿ.ಡಿ. ತೆಗೆಸುವ ಹೆಸರು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬೆಂಗಳೂರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ
ಕೂಡಲ ಸಂಗಮ - 587115
ತಾ॥ ಹುನಗುಂದ, ಜಿ॥ ಬಿಜಾಪೂರ

'ಬಸವ ಕಿರಣ' ಪಾಕ್ಷಿಕ ಪತ್ರಿಕೆಗೆ

ಚಂದಾದಾರರಾಗಿರಿ.

****

ಶರಣ ಬಂಧುಗಳೇ,

ಬಸವ ತತ್ತ್ವಾನುಯಾಯಿಗಳಿಗೆ ಒಂದು ಸಂತೋಷದ ಸುದ್ದಿ. ಶಿವಮೊಗ್ಗ ರಾಷ್ಟ್ರೀಯ ಬಸವ ದಳದವರು ಒಂದು ಪಾಕ್ಷಿಕ ಪತ್ರಿಕೆಯನ್ನು ಹೊರಡಿಸಲು ಸಂಕಲ್ಪಿಸಿ. "ಬಸವ ಕಿರಣ" ಎಂಬ ಹೆಸರಿನಲ್ಲಿ ಮೊದಲ ಸಂಚಿಕೆಯನ್ನು 1-6-1992 ರಂದು ಬಿಡುಗಡೆ ಮಾಡಿದ್ದಾರೆ. ½ ಕ್ರೌನ್ ಆಕಾರದ 4 ಪುಟಗಳಿಂದ ಪತ್ರಿಕೆ ಹೊರಬಂದಿದೆ, ನೋಡಲು ಅಂದವಾಗಿದೆ. ಶರಣ ಡಿ. ಎಸ್. ವಿಜಯಕುಮಾರರು ಸಂಪಾದಕರಾಗಿ, ಶಿವಮೊಗ್ಗಾದ ಬಸವ ಸಾಗರ ಪ್ರಿಂಟಿಂಗ್ ಪ್ರೆಸ್ಸಿನ ಶರಣ ಜಿ. ಎಂ. ಶಿವಕುಮಾರ್ ಅವರು ಮುದ್ರಕರಾಗಿದ್ದಾರೆ. ಈ ಕಾಲದಲ್ಲಿ ಧಾರ್ಮಿಕ ಪತ್ರಿಕೆ ನಡೆಸುವುದು ದೊಡ್ಡ ಸಾಹಸ. ಅಂತೂ ಶರಣ ವಿಜಯಕುಮಾರರು ಅದಕ್ಕೆ ಕೈ ಹಾಕಿದ್ದಾರೆ. ಇದಕ್ಕೆ ಪ್ರೇರಣೆ ನೀವೆಲ್ಲ ಶರಣ ಬಂಧುಗಳು ಅವರ ಬೆನ್ನ ಹಿಂದಿದ್ದೀರಿ ಎಂಬ ನಂಬಿಕೆ.

ರಾಷ್ಟ್ರೀಯ ಬಸವ ದಳ ಸಂಘಟನೆಗೆ ಪತ್ರಿಕೆಯೊಂದರ ಅಗತ್ಯ ಬಹಳವಿತ್ತು. "ಕಲ್ಯಾಣ ಕಿರಣ"ವು ಲೇಖನಗಳಿಗೇ ಹೆಚ್ಚು ಪ್ರಾಧಾನ್ಯತೆ ಕೊಡುವುದರಿಂದ ವಿಶ್ವಧರ್ಮ ಪ್ರವಚನಗಳು, ರಾಷ್ಟ್ರೀಯ ಬಸವ ದಳ ಮತ್ತು ಬಸವ ಧರ್ಮ ಸಂಸತ್ ಸದಸ್ಯರು ಹಮ್ಮಿಕೊಳ್ಳುವ ಚಟುವಟಿಕೆ, ಅವರು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಪ್ರಕಟಿಸಲು ನಮಗೆ ಒಂದು ಮಾಧ್ಯಮವಿರಲಿಲ್ಲ. ಈ ಕೊರತೆಯೊಂದನ್ನು ತುಂಬಲೋಸುಗ "ಬಸವ - ಕಿರಣ" ಪ್ರಕಟಗೊಳ್ಳುತ್ತಿದೆ. ಆದ್ದರಿಂದ ತಾವುಗಳು ಈ ರೀತಿಯಾಗಿ ಸಹಕರಿಸಬೇಕು.

1. ಎಲ್ಲ ರಾಷ್ಟ್ರೀಯ ಬಸವ ದಳಗಳವರು ಮತ್ತು ಬಸವ ಧರ್ಮ ಸಂಸತ್ ಸದಸ್ಯರು ವಾರ್ಷಿಕ ಚಂದಾದಾರರು ಅಥವಾ ಅನುಕೂಲವಿದ್ದರೆ ಆಜೀವ ಸದಸ್ಯರು ಆಗಬೇಕು. ವಾರ್ಷಿಕ ಚಂದಾ 25 ರೂ. ಆಜೀವ ಸದಸ್ಯತ್ವ 250.00
2. ನಿಮ್ಮ ಪರಿಚಿತರು, ಮಿತ್ರರು, ಬಂಧುಗಳು ಚಂದಾದಾರರಾಗಲು ಪ್ರೇರೇಪಿಸಬೇಕು.
3. ರಾಷ್ಟ್ರೀಯ ಬಸವ ದಳಗಳ ಶಾಖೆಗಳನ್ನು ನೀವು ತೆರೆಯುತ್ತಿದ್ದಂತೆಯೇ ಅಥವಾ ರಾಷ್ಟ್ರೀಯ ಬಸವ ದಳಗಳ ಆಡಿಯಲ್ಲಿ ಪ್ರಾರ್ಥನಾ ಸಭೆಗಳನ್ನು ಬೇರೆ ಬೇರೆ

ಕಡೆ ನಡೆಸಲು ಆರಂಭಿಸುತ್ತಿದ್ದಂತೆಯೇ "ಬಸವ ಕಿರಣ" ಕಾರ್ಯಾಲಯಕ್ಕೆ ವರದಿಗಳನ್ನು ಕಳಿಸಬೇಕು.
4. ದಳಗಳಿಂದ ಶರಣರ ಜಯಂತಿ, ಹಬ್ಬ–ಹುಣ್ಣಿಮೆ ಆಚರಿಸಿದ ಬಳಿಕ ಅದರ ವರದಿ ಕಳಿಸಿಕೊಡಬೇಕು.
5. ಬಸವ ಧರ್ಮ, ವಚನ ವಾಙ್ಮಯಕ್ಕೆ ಸಂಬಂಧಿಸಿದ ಲೇಖನ, ಕವನ, ಅಭಿಪ್ರಾಯಗಳನ್ನು ಬರೆದು ಕಳಿಸಿಕೊಡಬಹುದು.
6. ಗುರು ಬಸವಣ್ಣನವರು, ಮತ್ತು ಇತರ ಶರಣರ ಬದುಕು-ಬರಹಗಳಿಗೆ ಅಪಚಾರ ಮಾಡುವ ಬೇರೆ ಬರಹಗಾರರು, ಉಪನ್ಯಾಸಕರ ವಿಚಾರಗಳನ್ನು ವಿಮರ್ಶಿಸಿ ಲೇಖನಗಳನ್ನು, ಅಭಿಪ್ರಾಯಗಳನ್ನು ಬರೆದು ಕಳಿಸಬೇಕು.

ವರ್ಷಕ್ಕೆ ಕೇವಲ 25 ರೂ.ಗಳ ಚಂದಾದರ ಹೊಂದಿ, ತತ್ತ್ವ ಪ್ರಚಾರದ ಕಳಕಳಿಯಿಂದ ಪಾಕ್ಷಿಕ ಪತ್ರಿಕೆಯಾಗಿ ಹೊರಟಿರುವ 'ಬಸವ ಕಿರಣ'ಕ್ಕೆ ಸದಸ್ಯತ್ವ ಕಳಿಸಿ, ಓದುಗರಾಗಿ ಜ್ಞಾನ ಸಂಪದವನ್ನು ಹೆಚ್ಚಿಸಿಕೊಳ್ಳಿರಿ. ನಿಮ್ಮೆಲ್ಲರ ಸಹಾಯ-ಸಹಕಾರ ದೊರೆತರೆ ಇದನ್ನು ವಾರ ಪತ್ರಿಕೆಯನ್ನಾಗಿ ಮಾಡುವ ಪ್ರಯತ್ನಕ್ಕೆ ಶರಣ ವಿಜಯ ಕುಮಾರ್ ಅವರಿಗೆ ಪ್ರೇರಣೆ ನೀಡಬಹುದು.

ಹೃತ್ಪೂರ್ವಕ ಶುಭ ಹಾರೈಕೆಯೊಡನೆ,

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಿಳಾಸ :—

ಬಸವ ಕಿರಣ ಪಾಕ್ಷಿಕ ಪತ್ರಿಕೆ
ಶರಣ ಡಿ. ಎಸ್. ವಿಜಯಕುಮಾರ್
ಬಸವ ಸಾಗರ ಪ್ರಿಂಟರ್ಸ್, ಉಷಾದೇವಿ ಕಾಂಪ್ಲೆಕ್ಸ್
ಪಾರ್ಕ್ ಬಡಾವಣೆ, ದುರ್ಗಿಗುಡಿ 4 ನೇ ತಿರುವು
ಶಿವಮೊಗ್ಗ - 577201.

ಬಸವನೇ ಜಗದಾದಿ ಬಸವನೇ ಜಗದೀಶ
ಬಸವನೇ ಜಗದ ಗುರು ಪ್ರಣಮವೆಂದರಿದು
ಬಸವನನು ಜಪಿಸು ಸರ್ವಜ್ಞ ॥

ಮಾರ್ಚ್ - ಏಪ್ರಿಲ್ ಕಲ್ಯಾಣ ಕಿರಣದ ಮುದ್ರಣ ದೋಷಗಳು

ಕಲ್ಯಾಣ ಕಿರಣದ ಮಾರ್ಚ್–ಏಪ್ರಿಲ್ ಸಂಚಿಕೆಯಲ್ಲಿ ಲೇಖನಗಳು ಬಹಳ ಮಹತ್ವಪೂರ್ಣವಾಗಿವೆ. ಆದರೆ ಮುದ್ರಣ ದೋಷಗಳು ಅಸಂಖ್ಯಾತವಾಗಿವೆ. ಬಸವ–ಗಂಗೋತ್ರಿಯ ಮುದ್ರಣಾಲಯದಲ್ಲಿ ಕೆಲಸ ನಿಂತು, ಹೊರಗಿನ ಒಂದು ಮುದ್ರಣಾಲ–ಯಕ್ಕೆ ಕೊಟ್ಟುದರಿಂದ ತಪ್ಪುಗಳು ಉಳಿದಿರುವುದಲ್ಲದೆ, ವಿಪರೀತ ತಡವಾಯಿತು. ಸಕಾಲಕ್ಕೆ ಮಾಡಿಕೊಡುತ್ತೇವೆಂದು ಕೆಲಸವನ್ನು ಸ್ವೀಕರಿಸಿದವರು ಕೆಲಸ ಮಾಡದೆ ಬಹಳ ಅನಾನುಕೂಲ ಮಾಡಿಬಿಟ್ಟರು. ಕೆಲವು ಲೇಖನಗಳ ದೋಷಗಳನ್ನು ತಿದ್ದಿಕೊಂಡು ಓದಬೇಕೆಂದು ವಿನಂತಿಸುತ್ತೇವೆ.

1. "ಬೆಳ್ಳಿತ್ತಿನ ಮರೆಯಲಿದ್ದು ಹುಲ್ಲೆಗಂಬ ತೊಟ್ಟ ಮಹಾಧಿವೇಶನ" ಲೇಖನವನ್ನು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು** ಬರೆದಿದ್ದು ಲೇಖಕರ ಹೆಸರನ್ನೇ ಲೇಖನದೊಡನೆ ಮುದ್ರಿಸಿಲ್ಲ.
   ಈ ಲೇಖನವು 41 ನೇ ಪುಟದಿಂದ 53 ನೇ ಪುಟದವರೆಗೆ ಮುದ್ರಣಗೊಂಡಿದ್ದು ಇನ್ನೂ ಪೂರ್ಣಗೊಂಡಿಲ್ಲ. 53 ನೇ ಪುಟದ ಕೊನೆಯಲ್ಲಿ 'ಮುಂದುವ–ರಿಯುವುದು' ಎಂಬ ಸೂಚನೆಯೇ ಇಲ್ಲ. ಈ ಲೇಖನದ ಮುಂದಿನ ಭಾಗವು ಕಲ್ಯಾಣ ಕಿರಣದ ಮೇ–ಜೂನ್ ಸಂಚಿಕೆಯಲ್ಲಿ ಮುಂದುವರಿದಿದೆ.
2. ಶ್ರೀ ಕೋ. ಚನ್ನಬಸಪ್ಪನವರ ಲೇಖನಕ್ಕೆ ಪ್ರತಿಕ್ರಿಯೆಯಾಗಿರುವ ಬರಹ "ಕಣ್ಣೀರು ಸುರಿಸುವುದಲ್ಲ, ಸೆಡ್ಡು ಹೊಡೆದು ಎದ್ದು ನಿಲ್ಲುವ ಕಾಲ" ಎಂಬು–ದನ್ನು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು** ಬರೆದಿದ್ದು ಇದು 6 ನೇ ಪುಟದಿಂದ 8 ರ ವರೆಗೆ ಇದ್ದು, 54 ನೆಯ ಪುಟಕ್ಕೆ ಮುಂದು–ವರಿದಿದೆ. ಆದರೆ 54 ನೇ ಪುಟದಲ್ಲಿ '8 ನೇ ಪುಟದಿಂದ ಮುಂದುವರಿದಿದೆ' ಎಂಬ ಸೂಚನಾ ವಾಕ್ಯವಿಲ್ಲದೆ ನೇರವಾಗಿ ಆರಂಭವಾಗಿರುವುದರಿಂದ ಅರ್ಥವಾಗದು. 53 ನೇ ಪುಟದಲ್ಲಿ ಬಂದ ವಿಷಯದ ಮುಂದುವರಿದ ಭಾಗವೇನೋ ಎಂದು ತಪ್ಪು ಕಲ್ಪನೆಯಾಗುವುದು.

ಇನ್ನು ಅಚ್ಚುದೋಷವಂತೂ ಹೇಳಲಸಾಧ್ಯವಾಗಿವೆ. ಸಂದರ್ಭಕ್ಕನು–ಸಾರವಾಗಿ ತಿದ್ದಿಕೊಂಡು ಓದಬೇಕಾಗಿ ವಿನಂತಿ.

—ಸೋದರಿ ಕಸ್ತೂರಿ.
ಕಲ್ಯಾಣ ಕಿರಣ ಮಾಸ ಪತ್ರಿಕೆ

ಬಸವ ಧರ್ಮ ಪೀಠದ

ಮಹಾಮನೆ ಮಹಾಮಠದ ಯೋಜನೆಗಳಿಗೆ ಧನದಾಸೋಹ ಮಾಡಿದ ಸದ್ಭಕ್ತರು

ಕಟ್ಟಡ ನಿಧಿಗೆ

(ಜನವರಿ- ಫೆಬ್ರವರಿ ಸಂಚಿಕೆಯಿಂದ ಮುಂದುವರಿದುದು)

ಶರಣರುಗಳಾದ :

1.	ಗಿರಿಜಾಪತಿ ವೈ. ಭಾವಿಕಟ್ಟಿ,	ಗದಗ	1, 11111-00
2.	ಬಿ. ಹೆಚ್. ಬಗಲಿ,	ವಿಜಾಪುರ	50001-00
3.	ಬಿ. ಶಂಭುಲಿಂಗಯ್ಯ, ಸಂಪಾದಕರು ಕಲ್ಯಾಣ ಕಿರಣ ಮಾಸ ಪತ್ರಿಕೆ,	ಬೆಂಗಳೂರು	40001-00
4.	ಸಿಂಧುತಾಯಿ ಶಿವಶಂಕರ್ ನಾಗಪ್ಪಕಾಡಾದಿ,	ಸೊಲ್ಲಾಪುರ	40001-00
5.	ಶಾಲಿನಿತಾಯಿ ವೀರಂತಪ್ಪ ನಾಗಪ್ಪ ಕಾಡಾದಿ,	"	40001-00
6.	ಮಲ್ಲಿನಾಥ ಗಿರಿಮಲ್ಲಪ್ಪ ಥಳಂಗೆ,	"	5001-00
7.	ಭ್ರಮರಾಂಬಿಕಾದೇವಿ ಗುರುಸಿದ್ಧಪ್ಪ ಲೋಣಿ	"	5001-00
8.	ಗಂಗಾಬಾಯಿ ಕರಿಬಸಪ್ಪ ಬಸವಂತಿ	"	5001-00
9.	ಡಾ॥ ಬಸವರಾಜ ಲಿಗಾಡೆ	"	5001-00
10.	ಮಡಿವಾಳಪ್ಪ ಗುರುಬಸಪ್ಪ ಲೋಣಿ	"	5001- 00
11.	ಮಹಾದೇವಿ ಸಿದ್ಧೇಶ್ವರ ಕಲಶೆಟ್ಟಿ	"	5001-00
12.	ಆಶಾಬಾಯಿ ರತ್ನಾಕರ ಕೋರೆ,	ಅಕ್ಕಲಕೋಟೆ	5001-00
13.	ಕಲ್ಯಾಣಪ್ಪ ಕಾಪ್ಸೆ	"	5111-00
14.	ಗಂಗಾಬಾಯಿ ನಾಗಪ್ಪ ಬಾಗೇವಾಡಿ	ಬಿಜಾಪುರ	5001-00
15.	ನಿಜಲಿಂಗಪ್ಪ ಸಂಗನಬಸಪ್ಪ ಹೊಳಿ	"	5001-00
16.	ಮಹಾಂತೇಶ ಮಲ್ಲಿಕಾರ್ಜುನಪ್ಪ ಹುಂಡೇಕಾರ	"	5001-00
17.	ಶಂಕರಗೌಡ ಮಲ್ಲನಗೌಡ ರಂಗನಗೌಡರ್	"	11001-00
18.	ಶಿವನಗೌಡ ಬಾಪೂಗೌಡ ಪಾಟೀಲ (ಯತ್ನಾಳ)	"	5001-00
19.	ಅಂದಾನಪ್ಪ ಶಿವಪ್ಪ ಕತ್ತಿ	"	5101-00
20.	ವೀರಬಸಪ್ಪ ದುಂಡಪ್ಪ ಬುರ್ಲಿ	"	5001-00
21.	ಜಿ. ಆರ್. ಆಸಂಗಿ	"	5001-00

22.	ಪ್ರೊ. ಬಿ. ಬಿ. ನಾಡಗೌಡರು	ಬಿಜಾಪುರ	5001-00
23.	ಶಿವಪ್ಪ ಮಲ್ಲಪ್ಪ ಕಪ್ಪರದ (ಮನಗೂಳಿ)	ಗದಗ	5001-00
24.	ಎಂ. ಜಿ. ತೊರಗಲ್	ಬಿಜಾಪುರ	5001-00
25.	ಸಿದ್ಧಲಿಂಗಪ್ಪ ದಾನಪ್ಪ ಧಾರವಾಡಕರ	"	10001-00
26.	ಲೀಲಾದೇವಿ ರಮೇಶ್ ಮಡಕಿ,	ಸೊಲ್ಲಾಪುರ	1001-00
27.	ಬಸವರಾಜ ಈರಪ್ಪ ಕಲ್ಲೂರ್‌ಕರ	"	1001-00
28.	ಮಹಾದೇವಪ್ಪ ಗುರಪ್ಪ ಅಷ್ಟಗಿ	"	1001-00
29.	ನೀಲಕಂಠಪ್ಪ ಭೋಜಪ್ಪ ಮಹಾಮನಿ	"	1001-00
30.	ವಿವೇಕಾನಂದ ಅನಂತಪುರ	"	1001-00

ಸಾಹಿತ್ಯ ಪ್ರಕಟನೆಗಾಗಿ

ಶರಣರುಗಳಾದ :

1.	ಪ್ರಭಾವತಿ ಮಹಾಂತಪ್ಪ ತಾಳೀಕೋಟೆ	ಸೊಲ್ಲಾಪುರ	6000-00
2.	ಚಂದ್ರಶೇಖರಪ್ಪ ಮಲ್ಲಿಕಾರ್ಜುನಪ್ಪ ಪಡಸಲಗಿ	"	3000.00
3.	ಡಾ|| ಬಸವರಾಜ ಮಲ್ಲಿಕಾರ್ಜುನಪ್ಪ ಪಡಸಲಗಿ	"	3000-00

ಈ ಮೂವರು ದಾನಿಗಳ ಸಹಾಯದಿಂದ "ಲಿಂಗಾಯತ ಧರ್ಮ ದರ್ಪಣ" ಎಂಬ ಮರಾಠಿ ಪುಸ್ತಕವನ್ನು ಸೊಲ್ಲಾಪುರದಲ್ಲಿ ಮುದ್ರಿಸಿ ಬಿಡುಗಡೆ ಮಾಡಲಾಗಿದೆ.

4. ಅನ್ನಪೂರ್ಣಾ ಭತಗುಣಕಿ, ಸೊಲ್ಲಾಪುರ. 8000-00
(ವಿಶ್ವ ವಿಭೂತಿ ಬಸವಣ್ಣ ಕನ್ನಡ ಕೃತಿಯ ಮರಾಠಿ ಅನುವಾದಕ್ಕೆ)

ಗುರು ಕಾಣಿಕೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಹುಟ್ಟುಹಬ್ಬದ ನಿಮಿತ್ತ ದಿ. 13-3-92 ರಂದು ಶರಣ. ಚಂದ್ರಾಮ ಗುರೂಜಿಯವರು ಸಾಂಕೇತಿಕವಾಗಿ 13000-00 (ಹದಿಮೂರು ಸಾವಿರ) ರೂಪಾಯಿಗಳನ್ನು ಸಂಗ್ರಹಿಸಿ ಸಮರ್ಪಿಸಿದರು.

ವಿಶ್ವಧರ್ಮ ಪ್ರವಚನ

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಧಾರವಾಡ ಜಿಲ್ಲೆಯ ಹಿರೇಕೆರೂರಿನ ಶ್ರೀ ಬಸವೇಶ್ವರ ದೇವಾಲಯದಲ್ಲಿ ಇದೇ ತಾ|| 20-7-92 ರಿಂದ ಆರು ವಾರುಗಳವರೆಗೆ ಪ್ರವಚನ ಮಾಡಲಿದ್ದಾರೆ. ಆ ಭಾಗದ ಸದ್ಭಕ್ತರು ಇದರ ಪ್ರಯೋಜನ ಪಡೆದುಕೊಳ್ಳುವಿರಾಗಿ ನಂಬಿದ್ದೇವೆ.

—ವಿಶ್ವಧರ್ಮ ಪ್ರವಚನ ಸಮಿತಿ,

ದಾಸೋಹ ನಿಧಿಗೆ 1111ರೂ ಸಲ್ಲಿಸಿದವರು

[ಮಾರ್ಚ್--ಏಪ್ರಿಲ್ ಸಂಚಿಕೆಯಿಂದ ಮುಂದುವರಿದುದು]

ಕ್ರಮ ಸಂಖ್ಯೆ	ಹೆಸರು	ಊರು
	ಶರಣರುಗಳಾದ:	
753	ಮೇದಾರ ರಾಜಪ್ಪ (ಮರೆತದ್ದು)	ಮಾನ್ವಿ
981	ಸಿಂಧುತಾಯಿ ಶಿವಶಂಕರಪ್ಪ ಕಾಡಾದಿ	ಸೊಲ್ಲಾಪುರ
982	ಮಲ್ಲಿನಾಥ ಗಿರಿಮಲ್ಲಪ್ಪ ಥಳಂಗೆ	"
983	ಭ್ರಮರಾಂಬಿಕಾದೇವಿ ಗುರುಸಿದ್ಧಪ್ಪ ಲೋಣಿ	"
984	ಡಾ|| ಬಸವರಾಜ ಲಿಗಾಡೆ	"
985	ಮಡಿವಾಳಪ್ಪ ಗುರುಬಸಪ್ಪ ಲೋಣಿ	"
986	ಮಡಿವಾಳಪ್ಪ ಶಿವಪ್ಪ ಅವಜಿ	"
987	ಶಾಂತವೀರ ಬಂಡೆಪ್ಪ ದುಲಂಗಿ	"
988	ಲಕ್ಷ್ಮೀಬಾಯಿ ಸಿದ್ಧರಾಮಯ್ಯ ಕಮಠಾಣಕರ	"
989	ವಸಂತರಾವ ಅಪ್ಪಾರಾವ ಕುಲಕರ್ಣಿ	"
990	ಬಸವರಾಜ ಎನ್. ಭಿಮದೆ	"
991	ರಾಜಶೇಖರ ಚನ್ನಬಸಪ್ಪ ಮಡಕಿ	"
992	ಭಾಗೀರಥಿಬಾಯಿ ಕರಿಬಸಯ್ಯ ಸಿರ್ಸಿ	"
993	ಶಿವಶಂಕರ್ ಮಲ್ಲಪ್ಪ ಕೊಬ್ರೆ	"
994	ಚಂದ್ರಶೇಖರ ರೇವಣಸಿದ್ಧಪ್ಪ ತಮಶೆಟ್ಟಿ	"
995	ವಿಶ್ವನಾಥ ರಿಕ್ಕೆ	"
996	ಶಾಂತಾಬಾಯಿ ಚನ್ನಪ್ಪ ತಾಳೀಕೋಟೆ	"
997	ಅನಿಲ ಬಾಳಪ್ಪ ಮಾಳಗೆ, ದುಧನಿ	"
998	ಸಿದ್ಧರಾಮಪ್ಪ ಈರಪ್ಪ ವಿಜಾಪುರೆ	"
999	ಶ್ರೀ ಸಿದ್ಧೇಶ್ವರ ಶಿವಶರಣ ಭಜನಾ ಮಂಡಳ	"
1000	ಸುಭಾಷ್‌ಚಂದ್ರ ರೇವಣಸಿದ್ಧಪ್ಪ ಕೈರಾತೆ	"
1001	ಸುಗ್ಗಲಾಬಾಯಿ ರೇವಣಸಿದ್ಧಪ್ಪ ಧರಣೆ	"
1002	ಅಣ್ಣಪ್ಪ ಬಸಪ್ಪ ಪಟ್ಟಣಶೆಟ್ಟಿ	"
1003	ಅನ್ನಪೂರ್ಣಾ ಭಟಗುಣಕಿ	"
1004	ಡಾ|| ಬಸವರಾಜ ಲಿಗಾಡೆ	"

1005 ನಾಗೇಶ ಗುರುಬಸಪ್ಪ ಮೆಣಸೆ ಸೊಲ್ಲಾಪೂರ
1006 ಶರಣಪ್ಪ ಸದಾಶಿವಪ್ಪ ಥನವಾಡೆ ”
1007 ಮಹಾದೇವಪ್ಪ ಗುರಪ್ಪ ಅಪ್ಪಗಿ ”
1008 ಶಶಿಕಲಾ ರಾಜಶೇಖರ ಜಮಾಣಿ ”
1009 ಸುರೇಶ್ ಬಸವರಾಜ ತೋಟದ ”
1010 ಬಾಲಚಂದ್ರ ಶಿವಶಂಕರ ಮಾಶಾಳ ”
1011 ಸ್ವಾಮಿನಾಥ ಮಲ್ಲಿಕಾರ್ಜುನ ಥನವಾಡೆ ”
1012 ಕಮಲಾಬಾಯಿ ಎಂ. ಶೆಟ್ಟರ ”
1013 ಎಂ. ಆರ್. ಪಾಟೀಲ ”
1014 ತುಕಾರಾಂ ವಿಠೋಬಾ ಜಕನಾಯಕ (ಗೌಳಿ) ”
1015 ವಿ. ಎಸ್. ಬಿರಾದಾರ ”
1016 ಚಂದ್ರಯ್ಯ ಮಲಕಯ್ಯ ಸ್ವಾಮಿ ”
1017 ರಾಜಶೇಖರ ಶಿವಲಿಂಗಪ್ಪ ದೇಸಾಯಿ ”
1018 ಸುಭಾಷ್ ನಾಗಪ್ಪ ತೋಟದ ”
1019 ಸಿದ್ಧರಾಮಪ್ಪ ಮಲಕಪ್ಪ ಪಾಂಡ್ರೆ ”
1020 ಮಲ್ಲಿಕಾರ್ಜುನಪ್ಪ ಶಂಕರಪ್ಪ ಮಂಗಲಗಿ ”
1021 ಕಮಲಾ ಚಂದ್ರಶೇಖರ ನಾಡಗೇರಿ ”
1022 ಮಹಾದೇವಿ ಮಲ್ಲಿಕಾರ್ಜುನಪ್ಪ ಭಾವಿಕಟ್ಟಿ ”
1023 ಬಸವರಾಜಪ್ಪ ನಾಗಪ್ಪ ಕಾಡಾದಿ ”
1024 ಸೋಮಶೇಖರ ಸಿದ್ಧರಾಮಪ್ಪ ಸಿರ್ಸಿ ”
1025 ಜಯಕುಮಾರ ಸೋಮಶೇಖರ ಮಡಕಿ ”
1026 ವಿಶ್ವನಾಥ ಸಂಗಪ್ಪ ಚೊಳ್ಳಿ, ಮಾಲಿನಗರ ”
1027 ವೀರಪ್ಪ ಅಂದಪ್ಪ ಬುಗದೆ ”
1028 ನೀಲಾ ಸಿದ್ದೇಶ್ವರ ಹತ್ತಿ ”
1029 ಶಿವಲಿಂಗಪ್ಪ ವಿಶ್ವನಾಥಪ್ಪ ಪಾಟೀಲ ”
1030 ಪ್ರಮೀಳಾತಾಯಿ ಪಿ. ಲಿಗಾಡೆ ”
1031 ಪಾರ್ವತಮ್ಮ ಅಪ್ಪಾರಾವ ಖಟ್ಟೆ ”
1032 ರೇವಣಸಿದ್ಧಪ್ಪ ಕರಬಸಪ್ಪ ತಂಬಾಕೆ ”
1033 ಸಿದ್ಧರಾಮಪ್ಪ ಶಿವಪ್ಪ ಬುರ್‌ಕುಲೆ ಸೊಲ್ಲಾಪುರ
1034 ಕಲ್ಲಪ್ಪ ಮುದ್ದಾ ಅವರಾದ ಬೀದರ

1035 ಸಂಗೀತಾ ಗುರುರಾಜ ಬಾಗೀಮನಿ ಅಕ್ಕಲಕೋಟೆ
1036 ಶಕುಂತಲ ಕಾಶೀನಾಥ ತನವಾಡೆ ”
1037 ಶರಣಪ್ಪ ಹಿಪ್ಪರಗಿ ”
1038 ನೀಲಕಂಠಗೌಡ ಪಾಟೀಲ ”
1039 ಬಸಲಿಂಗಪ್ಪ ಚನ್ನಬಸಪ್ಪ ಖೇಡಗಿ ”
1040 ಗುರುಬಾಯಿ ಬಸವಲಿಂಗಪ್ಪ ಖೇಡಗಿ ”
1041 ಶಿವಮ್ಮ ಬಸವಲಿಂಗಪ್ಪ ಖೇಡಗಿ ”
1042 ಚನ್ನಬಸಪ್ಪ ಬಸವಲಿಂಗಪ್ಪ ಖೇಡಗಿ ”
1043 ನೀಲಾಬಾಯಿ ಚನ್ನಬಸಪ್ಪ ಖೇಡಗಿ ”
1044 ಸಿದ್ಧವ್ವ ಚನ್ನಬಸಪ್ಪ ಖೇಡಗಿ ”
1045 ಶಾಲಿನಿಬಾಯಿ ಪ್ರಭಾಕರ ಕೋರೆ ”
1046 ಹನುಮಂತಪ್ಪ ಶಿವಲಿಂಗಪ್ಪ ಪಾಟೀಲ ”
1047 ಸುಲೋಚನಾ ಶಿವಪುತ್ರಪ್ಪ ಆಳಗುಂಡಗಿ ”
1048 ಗಣಪತಿ ತಾತ್ಯಾ ಹರವಾರಕರ ”
1049 ಶೋಭಾ ಎಸ್. ಎಸ್. ಚಿಟಾಲಿ ”
1050 ಶಂಕರಗೌಡ ಬಿರಾದಾರ ”
1051 ಹೆಚ್. ಬಸಪ್ಪ, ಹೇರೂರು, ರಾಯಚೂರು ಜಿಲ್ಲೆ
1052 ಕೆ. ಸಿದ್ಧರಾಮಪ್ಪ, ಕುಂಟನಹಾಳ, ಬಳ್ಳಾರಿ ಜಿಲ್ಲೆ
1053 ಪರಪ್ಪ ಬಸಪ್ಪ ನರಿ, ಗುಳೇದಗುಡ್ಡ, ಬಿಜಾಪುರ ಜಿಲ್ಲೆ
1054 ಸಿದ್ಧಮ್ಮ ಪಾಟೀಲ, ರಾಜೂರು, ಧಾರವಾಡ ಜಿಲ್ಲೆ
1055 ಗಂಗಾಬಾಯಿ ನಾಗಪ್ಪ, ಬಾಗೇವಾಡಿ, ಬಿಜಾಪುರ
1056 ಕುಮಾರ ಕಕ್ಕಯ್ಯ ಪೋಳ ”
1057 ಜವಾಹರ (ರಾಜು) ಹರಕಾರಿ. ”
1058 ಅನುಜಾ ರಮೇಶ ಸುಗಂಧಿ. ”
1059 ಮಲ್ಲಿಕಾರ್ಜುನ ಸಿದ್ಧರಾಮಪ್ಪ ರತನಶೆಟ್ಟಿ, ”
1060 ಚಂದ್ರಶೇಖರ ಶರಣಪ್ಪ ಮಿಣಜಗಿ, ”
1061 ಶಿವನಗೌಡ ಬಾಪೂಗೌಡ ಪಾಟೀಲ (ಯತ್ನಾಳ) ಬಿಜಾಪುರ
1062 ಮಲ್ಲಿಕಾರ್ಜುನಪ್ಪ ವಿರುಪಾಕ್ಷಪ್ಪ ಒಣರೊಟ್ಟಿ ”
1063 ಡಾ ॥ ಲಿಂಗಪ್ಪ ಮಹಾಲಿಂಗಪ್ಪ ಚಿನ್ನಸ್ವಾಮಿ ”
1064 ಸಂಗಪ್ಪ ಬಸಪ್ಪ ಜುಗತಿ, ”

1065 ಮುತ್ತಪ್ಪ ಶಿವಲಿಂಗಪ್ಪ ಸಂಕಣ್ಣನವರ. ಬಿಜಾಪೂರ
1066 ಗುರುಲಿಂಗಪ್ಪ ಸಿದ್ಧರಾಮಪ್ಪ ಜಂಗಮಶೆಟ್ಟಿ. ”
1067 ಗಂಗಮ್ಮ ವೀರಭದ್ರಯ್ಯ ಕೋಡೀಕೊಪ್ಪ ಮಠ. ”
1068 ಬಸಪ್ಪ ಮಲ್ಲಪ್ಪ ಹನುಮಶೆಟ್ಟಿ, ”
1069 ಬಸವರಾಜ ಈಶ್ವರಪ್ಪ ಕೊಂಡಗೂಳಿ, ಕಗ್ಗೋಡ, ”
1070 ಬಾಪೂಗೌಡ ಬಸನಗೌಡ ಪಾಟೀಲ ಹೆಗಡಿಹಾಳ. ”
1071 ಶಿವಲಿಂಗಪ್ಪ ಬಸಗೊಂಡಪ್ಪ ಬಿರಾದಾರ, ಹೆಗಡಿಹಾಳ, ”
1072 ರಂಗನಗೌಡ ಹನುಮನಗೌಡ ಪಾಟೀಲ, ”
1073 ಪ್ರಶಾಂತ, ಎಸ್. ಮೋಟಗಿ, ”
1074 ಗುರುಸಿದ್ಧಪ್ಪ ಭೀಮಪ್ಪ ಹಳ್ಳದ ”
1075 ಚನ್ನಗೊಂಡಪ್ಪ ಮಲಗೊಂಡಪ್ಪ ನುಚ್ಚಿ ”
1076 ಆರ್. ಬಿ. ಪಾಟೀಲ. ”
1077 ವೀರಬಸಪ್ಪ ದುಂಡಪ್ಪ ಬುರ್ಲಿ, ”
1078 ಜಿ. ಆರ್. ಆಸಂಗಿ. ”
1079 ಗಂಗಪ್ಪ ಸಂಗಪ್ಪ ಇಜೇರಿ ”
1080 ಡಾ || ಬಸವರಾಜ ಸಂಗಪ್ಪ ಸಿರುಮಗೊಂಡ. ”
1081 ಡಾ || ಮಲ್ಲಿಕಾರ್ಜುನ ಸಿದ್ಧಪ್ಪ ಕಲ್ಲೂರ, ”
1082 ಬಿ. ವಿ. ಹಂಪನಗೌಡರು, ”
1083 ಶಾಂತಾಬಾಯಿ ಬೋರಪ್ಪ ಛಲವಾದಿ ”
1084 ಭೀಮರಾಯ ವಿರುಪಾಕ್ಷಪ್ಪ ಅವಟಿಗೇರಿ ”
1085 ಇಂದುಮತಿ. ಜಿ. ಮಠ. ”
1086 ರಾಮನಗೌಡ ರುದ್ರಗೌಡ ಪಾಟೀಲ, ”
1087 ಬಸವರಾಜ ಗೌಡಪ್ಪಗೌಡ ಪಾಟೀಲ, ”
1088 ಎಂ. ಕೆ. ಶಿರಗುಪ್ಪಿ, ”
1089 ನಿಂಗಪ್ಪ ಧೂಳಪ್ಪ ನ್ಯಾಮಗೊಂಡ, ”
1090 ಎಸ್. ಎಸ್ ಸಾವಳಗಿ, ಬಿಜಾಪುರ
1091 ಎಸ್. ಜಿ. ಭಾವಿ, ”
1092 ಎನ್. ಐ. ಮೊಗಲಿ ”
1093 ಮುರಿಗೆಪ್ಪ ಹೊನ್ನಪ್ಪ ಆಳೂರು ”
1094 ಗುರುಸಿದ್ಧಪ್ಪ ಮುರಿಗೆಪ್ಪ ಕೋರ್ರಿ. ”

1095 ನೀಲ ಚನ್ನಮಲ್ಲಪ್ಪ ಸಜ್ಜನ. ಬಿಜಾಪುರ
1096 ಆರ್. ಜಿ. ನುಚ್ಚಿ. ”
1097 ಮಲ್ಲಪ್ಪ ಸಿದ್ಧರಾಮಪ್ಪ ಖಾನಾಪುರೆ, ”
1098 ಶಕುಂತಲಾ ಮುತ್ತಣ್ಣ ಸಿಂಗಾರಿ ”
1099 ಬನದೇವಿ ಮಹಾದೇವ ಅವರಾದಿ ”
1100 ಜಿ. ಎಸ್. ಗನ್ನೂರ, ”
1101 ಸಿದ್ಧರಾಮಪ್ಪ ಚನ್ನಪ್ಪ ಕುರ್ಲೆ, ”
1102 ಬಾಪೂಗೌಡ ಬಸವಗೌಡ ಬಿರಾದಾರ, ”
1103 ಗುರುಲಿಂಗಪ್ಪ ರುದ್ರಪ್ಪ ಜಳಕಿ. ”
1104 ಸಂಗಮೇಶ ಸಕ್ರಿ ”
1105 ಲಿಂಗನಗೌಡ ಬಸವನಗೌಡ ಬಿರಾದಾರ, ”
1106 ಷಣ್ಮುಖಪ್ಪ ಭೀಮರಾವ ಜಮಾದಾರ, ”
1107 ಶಂಕರಗೌಡ ಚಂದನಗೌಡ ಪಾಟೀಲ, ”
1108 ಉಮಾಶಂಕರ ಗುರುಲಿಂಗಪ್ಪ ಮೋಟಗಿ, ”
1109 ಗುರುಪಾದಪ್ಪ ರಾಮಗೊಂಡಪ್ಪ ದೇಸಾಯಿ, ”
1110 ಬಸವಲಿಂಗಪ್ಪ ಗುರುಲಿಂಗಪ್ಪ ಸಿಂಪಿ. ”
1111 ಮಲ್ಲಿಕಾರ್ಜುನಪ್ಪ ರುದ್ರಪ್ಪ ಕಂಕಣಮೇಲಿ. ”
1112 ಪಿ. ಎಸ್. ಮುತ್ತಗಿ, ”
1113 ಎಂ. ಸಿ. ಮಮದಾಪುರ, ”
1114 ಜಿ. ಹೆಚ್. ಪಾಟೀಲ ”
1115 ವಿನೋದ ಶಿವಲಿಂಗಪ್ಪ ಮನಗೂಳಿ, ”
1116 ಶಂಕರಗೌಡ ಬಸಗೊಂಡಪ್ಪ ಪಾಟೀಲ (ಸವನಳ್ಳಿ) ”
1117 ಪರಗೌಡ ಶಿವಗೌಡ ರುದ್ರಗೌಡರ, ”
1118 ಬಿ. ಹೆಚ್. ಇಳಕಲ್. ”
1119 ಮಲ್ಲಪ್ಪ ಕಾಶಪ್ಪ ಮೊಗಲಿ ”
1120 ಪಂಚಲಿಂಗಪ್ಪ ಸಿದ್ರಾಮಪ್ಪ ತಾಳೀಕೋಟಿ ಬ್ರದರ್ಸ್. ”
1121 ಶಶಿಧರ ವೀರಬಸಪ್ಪ ಹಕ್ಕಾಪಕ್ಕಿ. ”
1122 ರುದ್ರಗೌಡ ಬಸವಲಿಂಗಪ್ಪ ಪಾಟೀಲ, ಬರಟಗಿ. ”
1123 ಇಂದುಮತಿ ನಾಗಣಸೂರು, ಮೈಂದರಗಿ, ಮಹಾರಾಷ್ಟ್ರ
1124 ಬಸವನಗೌಡ ಬಲವಂತರಾಯ ಹಡಲಗೇರಿ, ಕೊಣ್ಣೂರು
1125 ಸೂಗವೀರಪ್ಪ ಗುರಪ್ಪ ಜಾಲಿಹಾಳ, ವಿಜಾಪುರ

1126	ನಿಂಗಪ್ಪ ಬಸಪ್ಪ ಹಳ್ಳಿ (ಧರಿ)	ಎಂಭತ್ತನಾಳ
1127	ಅಂದ್ಲಾನಪ್ಪ ಸಂಗಪ್ಪ ಕೋಟಗಿ,	ಬಿಜಾಪುರ
1128	ಮಹಾಂತಯ್ಯ ವೀರಭದ್ರಯ್ಯ ಬೋದರಾಚಾರಿಮಠ.	”
1129	ಡಾ॥ ಡಿ. ಎಸ್. ಬಿಳ್ಳೂರ,	”
1130	ಗೋಪಿಲಾಲ ಹರಸೂಕ ಬಾಲಕಿಶನ ಬುತಡಾ.	”
1131	ಬಸವರಾಜಪ್ಪ ಮಲ್ಲಿಕಾರ್ಜುನಪ್ಪ ಮಾಳಗೆ	”
1132	ಆರ್. ಡಿ. ಪಾಟೀಲ	”
1133	ಚನ್ನಪ್ಪ ಬಸಪ್ಪ ಮಾರಸನಹಳ್ಳಿ	”
1134	ಮಹಾದೇವಿ ಪವಾಡಬಸಪ್ಪ ಪೂಜಾರಿ	”
1135	ಚಂದ್ರಶೇಖರ ಸಿಗ್ಧಲಿಂಗಪ್ಪ ಕೋಳಕೂರ	”
1136	ಶಾರದಾ ಅಮರೇಶ ವಾಗೂರು, ಬಿಜಾಪುರ	”
113	ಕೆ. ಡಿ. ಪಾಟೀಲ, ಮಾಜಿಶಾಸಕರು, ಉಕ್ಕಲಿ.	”
113	ಕಲ್ಲಪ್ಪ ತಮ್ಮಣ್ಣಪ್ಪ ಬಳಗಾನೂರ,	ಬಿಜಾಪುರ
1139	ಶರಣಪ್ಪ ಭೀಮಪ್ಪ ಕೋರಿಶೆಟ್ಟಿ,	”
1140	ಮಲ್ಲಿಕಾರ್ಜುನ ದೊಡ್ಡಬಸಪ್ಪ ಅಪ್ಪಗೊಂಡ,	”
1141	ಕಲ್ಲಪ್ಪ ಶಿವಪ್ಪ ಜಮಖಂಡಿ,	”
1142	ಅನಿಲಕುಮಾರ ಸುಂದರಪ್ಪ ಧಾರವಾಡ,	”
1143	ಸಿದ್ಧಪ್ಪ ಅಣ್ಣಪ್ಪ ರೇಶಮಿ,	”
1144	ಎಸ್. ಎಸ್. ಗುಡ್ಡೊಡಗಿ,	”
1145	ಜಿ. ಬಿ. ಕೋರಿ,	ಬಿಜಾಪುರ
1146	ಯೋಗಪ್ಪ ಭೀಮಪ್ಪ ಹದನೂರು	”
1147	ಹೊನಮಲ್ಲಪ್ಪ ಸಿದ್ಧಪ್ಪ ಜಂಗಮಶೆಟ್ಟಿ,	”
1148	ಬಸವಂತಪ್ಪ ಭೀಮಣ್ಣಪ್ಪ ಗಚ್ಚಿನಕಟ್ಟಿ,	”
1149	ಅನ್ನಪೂರ್ಣ. ಸು. ಶಿರಗುಪ್ಪಿ,	”
1150	ಬಸವನಗೌಡ. ಸಿ. ಪಾಟೀಲ,	”
1151	ಬಾಬಾಸಾಹೇಬ ರೇವಣಸಿದ್ಧಪ್ಪ ಬಗಲಿ, ಹೊನ್ನುಟಗಿ,	”
1152	ಬಸಯ್ಯ ವೀರಭದ್ರಯ್ಯ ಜಂಗೀನ,	”
1153	ಎಲ್ಲಪ್ಪ ಮಲ್ಲಪ್ಪ ಉಕ್ಕಲಿ,	”
1154	ರುದ್ರಪ್ಪ ಈರಬಸಪ್ಪ ಕಲಶೆಟ್ಟಿ	”
1155	ಸೋಮಪ್ಪ ಬಸಪ್ಪ ಸಜ್ಜನ ಮನಗೂಳಿ	”
1156	ಈರಗೊಂಡಪ್ಪ ಮಳಗೊಂಡಪ್ಪ ಪಾಟೀಲ	”
1157	ಗುರುಬಸಪ್ಪ ರೇವಪ್ಪ ಬ್ಯಾಕೋಡ.	”

(ಮುಂದುವರಿಯುವುದು.)

(41 ನೇ ಪುಟದಿಂದ ಮುಂದುವರಿದಿದೆ)

ಜೋರತು ಪಡಿಸಿ ಸ್ವತಂತ್ರ ಗ್ರಂಥ ಬರೆದು ಜನರ ಮುಂದಿಡುವುದು ಶ್ರೇಯಸ್ಕರ. ಇದನ್ನು ವಿಶದೀಕರಿಸಲು ನನಗೊಂದು ಉಪಮೆ ನೆನಪಿಗೆ ಬರುತ್ತಿದೆ. ಶರಣ ಬಸವರಾಜಪ್ಪ ಮತ್ತು ಶರಣೆ. ವಚನಶ್ರೀ ಎಂಬ ದಂಪತಿಗಳಿಗೆ ಲಿಂಗರಾಜು ಎಂಬ ಸುಂದರ ಮಗನಿದ್ದಾನೆ. ಅವನಿಗೀಗ ಇಪ್ಪತ್ತು ವರ್ಷಗಳು. ತರುಣ ಬಹಳ ಸುಂದರ, ಸಾಹಸಿ, ಗುಣಶೀಲ, ವಿದ್ಯಾವಂತ, ಬಹುಜನರ ಪ್ರೀತಿಪಾತ್ರ. ಇವರ ಮನೆಗೆ ಒಂದು ದಿನ ಒಬ್ಬರು ಎಂಭತ್ತು ವರ್ಷದ ವೃದ್ಧರು ಬರುತ್ತಾರೆ. ಲಿಂಗರಾಜು-ವನ್ನು ಕಂಡು, "ಇವರು ನನಗೆ ಬಹಳ ಪರಿಚಯ. ನಾವಿಬ್ಬರೂ ಬಹಳ ಮಿತ್ರರು. ಬಾಲ್ಯದಲ್ಲಿ ಉಭಯತರೂ ಕೂಡಿ ಮರಳಿನಲ್ಲಿ ಗುಬ್ಬಿಗೂಡು ಕಟ್ಟುತ್ತಿದ್ದೆವು. ನಾವು ಲಂಗೋಟಿ ಮಿತ್ರರು" ಎನ್ನುತ್ತಾರೆ. ಆಗ ಅಲ್ಲಿ ನೆರೆದವರೆಲ್ಲ ಕಕ್ಕಾಬಿಕ್ಕಿಯಾಗುತ್ತಾರೆ. ಎಂಥಾ ಮಾತಿದು?!"ಯಜಮಾನ್ರೆ, ತಾವು 80 ವರ್ಷ ವಯಸ್ಸಿನವರು. ಈತ ಇಪ್ಪತ್ತು ವರ್ಷದ ತರುಣ. ನಿಮ್ಮ ಲಂಗೋಟಿ ಮಿತ್ರರಾಗಿ ಅದು ಹೇಗೆ ಮರಳಿನಲ್ಲಿ ಗುಬ್ಬಿ-ಗೂಡು ಕಟ್ಟಲು ಸಾಧ್ಯ ?" ಎಲ್ಲರಿಗೂ ಹುಬ್ಬೇರುತ್ತದೆ, ಪ್ರಶ್ನಿಸುತ್ತಾರೆ. "ಇವನಿಗೆ ಚೂಪಾದ ಮೂಗು, ಗುಂಗರು ಕೂದಲಿವೆ. ಅವನೂ ಹಾಗೇ ಇದ್ದ. ಆದ್ದರಿಂದ ಇವನು ಅವನೆಯೆ? ನನಗೆ ವಿಶ್ವಾಸವಿದೆ."

ಕೇವಲ ಚೂಪಾದ ಮೂಗು, ಗುಂಗುರು ಕೂದಲಿನ ಆಧಾರದ ಮೇಲೆಯೇ 20 ವರ್ಷದ ತರುಣ 80 ವರ್ಷದ ಮುದುಕನೊಡನೆ ಅವರ ಬಾಲ್ಯದಲ್ಲಿ ಆಟವಾಡಿದ ಎಂದರೆ ನಂಬಲು ಸಾಧ್ಯವೆ ?

ಆ ವಯಸ್ಕರು ಯಾರಾದರೂ ಮೂಗು ಚೂಪಿದ್ದ, ಗುಂಗುರು ಕೂದಲಿನ ವ್ಯಕ್ತಿ-ಯೊಡನೆ ಅವರ ಬಾಲ್ಯದಲ್ಲಿ ಆಟವಾಡಿರಬಹುದು. ಅದನ್ನು ನಾವು ಅಲ್ಲಗಳೆಯ ಬೇಕಿಲ್ಲ. ಆದರೆ ಲಿಂಗರಾಜು 20 ವರ್ಷದ ತರುಣ, ಅವರ ಅಪ್ಪ ಅಮ್ಮರ ವಿವರ ಗೊತ್ತಿದೆ ಎಂದ ಬಳಿಕ ಇವನು ಅವನಾಗಿರಲು ಸಾಧ್ಯವೇ ಇಲ್ಲವಷ್ಟೆ? ಏನೋ ಅವನೊಡನೆ ಸ್ವಲ್ಪ ಹೋಲಿಕೆ ಇವನಲ್ಲಿ ಇರಬಹುದು. ಅದೂ ಚೂಪಾದ ಮೂಗು, ಗುಂಗುರು ಕೂದಲಿನಲ್ಲಿ. ಹಾಗೆಂದ ಮಾತ್ರಕ್ಕೆ ಇವನು ಅವನೇ ಎಂದು ತಾಳೆಹಾಕುವುದು ಹಾಸ್ಯಾಸ್ಪದ.

ಶ್ರೀ ಡಾ॥ ಚಿದಾನಂದ ಮೂರ್ತಿಯವರ ವಾದ, 'ಲಿಂಗಾಯತ ಧರ್ಮದ ಇತಿ-ಹಾಸ ಕ್ರಿ. ಶ. 1100 ಕ್ಕೆ ಹೋಗುತ್ತದೆ. ಲಿಂಗ ಪದ ಅಂದೇ ಬಳಕೆಯಾಗಿದೆ.' ಎಂದು ಕೊಂಡಗುಳಿ ಕೇಶಿರಾಜ, ದೇವರ ದಾಸಿಮಯ್ಯ ಮುಂತಾದವರನ್ನು ಹೆಸರಿ-ಸುವುದು ಇಷ್ಟೇ ಹಾಸ್ಯಾಸ್ಪದವಾಗಿದೆ.

ಲಿಂಗಾಯತ ಧರ್ಮದ ಶಿಶುವಿಗೆ ತಂದೆ ಬಸವಣ್ಣನವರು. ತಾಯಿ ವಚನ ಸಾಹಿತ್ಯ. ಇದಕ್ಕೆ 800 ವರ್ಷಗಳ ಇತಿಹಾಸವಿದೆ; ಶರಣರ- ಶಿವಯೋಗಿಗಳ ಪರಂಪರೆ ಇದೆ. ಒಂದು ವೇಳೆ ಲಿಂಗ, ಜಂಗಮ ಪದಗಳು 12 ನೆಯ ಶತಮಾನಕ್ಕೂ ಮೊದಲೇ ಬಳಕೆಯಲ್ಲಿದ್ದರೆ ಅವುಗಳ ಸ್ವರೂಪ ಹೇಗೆ ? ಎಂಥಾ ಲಿಂಗವದು ? ಆ ಲಾಂಛನ ಉಳ್ಳ ಮತ ಯಾವುದು ? ಅದು ಮತವೇ, ಪಂಥವೇ, ಧರ್ಮವೆ? ಅದರ ಸ್ಥಾಪಕರು ಯಾರು. ಅದರ ಸಾಹಿತ್ಯವೇನು? ಎಂಬುದನ್ನು ಪ್ರತ್ಯೇಕವಾಗಿ ಹುಡುಕುವುದು ಸಂಶೋಧನೆಯೇ ವಿನಾ, ಐತಿಹಾಸಿಕವಾಗಿ ಲಭ್ಯವಿರುವ ಲಿಂಗಾಯತ ಧರ್ಮ-ಸಾಹಿತ್ಯ-ದರ್ಶನಶಾಸ್ತ್ರಗಳನ್ನು ತಿರುಚಿ, ವಿಕೃತಿಗೊಳಿಸಿ, ಪ್ರತಿಪಾದಿಸುವುದಲ್ಲ. ★

ಬಸವ ಧರ್ಮ ಪೀಠದ ಯೋಜನೆಗಳಿಗೆ ದಾಸೋಹ ಮಾಡಿದ ಎಲ್ಲ ಶರಣ ಬಂಧುಗಳಿಗೆ ವಿಶ್ವಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.

ಯಾದಿ ಪ್ರಕಟಣೆಯ ಆಗತ್ಯ

ಪ್ರವಚನ ನಡೆಯುವ ಸ್ಥಳಗಳಲ್ಲಿ ದಾಸೋಹಿಗಳು ಕಾಣಿಕೆ ನೀಡುವರು. ಅಂಚೆಯಲ್ಲಿ ಡಿ. ಡಿ; ಎಂ. ಓ. ರೂಪದಲ್ಲಿ ಬರುತ್ತಿರುವವು. ಅಲ್ಲದೆ ನಮ್ಮ ಶರಣ ಬಂಧುಗಳ ಕೈಲಿ ಸಹ ಅಲ್ಲಲ್ಲೇ ಅನೇಕರು ಕೊಡುತ್ತಿರುವರು. ಹೀಗೆ ಬಂದವು ಸರಿಯಾಗಿ ಸಂಸ್ಥೆಗೆ ಜಮಾ ಆದ ಬಗ್ಗೆ ಖಚಿತ ಪಡಿಸಿಕೊಳ್ಳಲು ಮತ್ತು ದಾಸೋಹಿಗಳ ಹೆಸರು ನಮ್ಮ ರಿಜಿಸ್ಟರದಲ್ಲಿ ದಾಖಲಾದುದನ್ನು ಖಚಿತ ಪಡಿಸಿಕೊಳ್ಳಲೋಸುಗ ಯಾದಿಯನ್ನು ಪ್ರಕಟಿಸುತ್ತೇವೆ. ಓದುಗರು ಬೇಜಾರುಪಡಬಾರದೆಂದು ನಮ್ರ ವಿನಂತಿ.

—ಸೋದರಿ ಜಯಮ್ಮ,
ಕೂಡಲ ಸಂಗಮ.

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಅಭಿಪ್ರಾಯ ತಿಳಿಸಿರಿ

ಚಿಂತನೆಗಾಗಿ : **—ಮಾತಾಜಿ**

1. ಮಾಡುವ ಸದಾಚಾರಕ್ಕೆ ಮೊದಲನೆಯ (ಲಿಂಗ) ಪೂಜೆಯೇ ಗುರು ಪೂಜೆ
ಮಾಡುವ ಸದಾಚಾರಕ್ಕೆ ಎರಡನೆಯ (ಲಿಂಗ) ಪೂಜೆಯೇ ಲಿಂಗ ಪೂಜೆ
ಮಾಡುವ ಸದಾಚಾರಕ್ಕೆ ಮೂರನೆಯ (ಲಿಂಗ) ಪೂಜೆಯೇ ಜಂಗಮಪೂಜೆ
ಮಾಡುವ ಸದಾಚಾರಕ್ಕೆ ಮೂರು ಪೂಜೆ
ಈ ಪೂಜೆ ಅನಂತ ಜನ್ಮ ದುರಿತ ಧ್ವಂಸ ನೋಡಾ
ಕೂಡಲ ಚನ್ನ ಸಂಗಮದೇವ ಸಾಕ್ಷಿಯಾಗಿ. (ಚ. ಬ. ವ. 126)

ಚನ್ನಬಸವಣ್ಣನವರ ವಚನದ ಪ್ರಕಾರ ಸದಾಚಾರಿಯಾದ ಶರಣನು ಗುರು-ಲಿಂಗ-ಜಂಗಮ ಪೂಜೆಗಳನ್ನು ಮಾಡಬೇಕು. ಗುರುಪೂಜೆ ಎಂಬಲ್ಲಿ 'ಬಸವಗುರು ಪೂಜೆ' ಎಂದು ಭಾವಿಸಿ, ದೀಕ್ಷಾಗುರು, ಶಿಕ್ಷಾ ಗುರುಗಳನ್ನು 'ಜಂಗಮ' ವರ್ಗದಲ್ಲಿ ಸೇರಿಸಬೇಕು. ಆಗ ಗುರು-ಲಿಂಗ-ಜಂಗಮ ಎಂಬ ತ್ರಿತತ್ತ್ವಗಳು ಸಂಪೂರ್ಣವಾಗಿ ಕ್ರೈಸ್ತ ಮತ್ತು ಬೌದ್ಧ ಧರ್ಮದ ತ್ರಿತತ್ತ್ವ *(Trinity)* ಗಳನ್ನು ಹೋಲುತ್ತವೆ.

ಕ್ರೈಸ್ತ ಧರ್ಮ : ದೇವರ ಮಗ (ಏಸುಕ್ರಿಸ್ತ) – ದೇವರು–ಪವಿತ್ರಾತ್ಮರು
ಬೌದ್ಧ ಧರ್ಮ : ಬುದ್ಧ – ಧರ್ಮ – ಸಂಘ
ಲಿಂಗಾಯತ ಧರ್ಮ : ಬಸವಣ್ಣ – ಇಷ್ಟಲಿಂಗ – ಜಂಗಮ.


ಲಿಂಗಾಯತ ಧರ್ಮದಲ್ಲಿ ಗಣಲಾಂಛನವಾದ, ದೇವರ ಕುರುಹಾದ ಇಷ್ಟಲಿಂಗವು ಅತ್ಯಂತ ಮಹತ್ವದ ಉಪಾಸ್ಯವಸ್ತು. ಆದ್ದರಿಂದ ನಿತ್ಯ ಪೂಜೆ ಮಾಡುವಾಗ ಮೊದಲು ಪ್ರಥಮ ಗಣಾಧೀಶ ಬಸವ ಗುರುವಿನ ಪೂಜೆ ಮಾಡಿ ಇಷ್ಟಲಿಂಗಾರ್ಚನೆ ಮಾಡುವುದು ಸೂಕ್ತವೋ ? ಅಥವಾ ಇಷ್ಟಲಿಂಗಾರ್ಚನೆ ಪೂರೈಸಿ ಬಸವ ಗುರುವಿನ ಪೂಜೆ ಮಾಡುವುದು ಸೂಕ್ತವೊ ?

2. **ತ್ರಿಕಾಲ ಅರ್ಚನೆ :**

ಲಿಂಗಮೂರ್ತಿಯನು ನಿತ್ಯವೂ
ಮೂರು ಬಾರಿ ತಪ್ಪದೆ ಅರ್ಚಿಸುವುದು ಉತ್ತಮ
ಎರಡು ವೇಳೆ ಅರ್ಚಿಸುವುದು ಮಧ್ಯಮ
ಒಂದು ಸಲ ಪೂಜಿಸುವುದು ಕನಿಷ್ಠ
ಈ ತ್ರಿವಿಧವನರಿಯದೆ ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವಡೆ
ಮುಕ್ತಿಯನೀವನೆ ನಮ್ಮ ಕೂಡಲ ಚನ್ನಸಂಗಮದೇವ ? ಚ.ಬ.ವ. 205

ಇಷ್ಟಲಿಂಗವನ್ನು ಮೂರು ಬಾರಿ ಅರ್ಚಿಸುವುದು ಉತ್ತಮ, ಎರಡು ಬಾರಿ ಅರ್ಚಿಸುವುದು ಮಧ್ಯಮ, ಒಂದು ಬಾರಿ ಅರ್ಚಿಸುವುದು ಕನಿಷ್ಠ ಎಂದು ಚನ್ನಬಸವಣ್ಣನವರು ಅಭಿಪ್ರಾಯಪಡುತ್ತಾರೆ. ಇಸ್ಲಾಂ ಧರ್ಮದಲ್ಲಿ ದಿನಕ್ಕೆ 5 ಬಾರಿ ನಮಾಜ್ ಮಾಡುವ ನೇಮವಿದ್ದಂತೆ ಈ ತ್ರಿಕಾಲ ಲಿಂಗಾರ್ಚನೆ. ಇಂದಿನ ಕಾಲಮಾನಕ್ಕೆ ಇದು ಸಾಧ್ಯವೆ ? ಈ ನೇಮವನ್ನು ಕೆಲವರಿಗೇ ಮೀಸಲಿಡುವುದು ಸೂಕ್ತವೆ ? ಶ್ರದ್ಧಾವಂತನಿಗೆ 3, 2, 1, ಇಷ್ಟು ಸಲದಲ್ಲಿ ಎಷ್ಟು ಸಲ ಮಾಡಬೇಕೆಂಬ ನಿಯಮ ಇರುವುದು ಸೂಕ್ತವಾದೀತು ?

ಈ ವಿಚಾರ ಕುರಿತು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ. ಬರಹವು ಹಾಳೆಯ ಒಂದೇ ಮಗ್ಗುಲಿನಲ್ಲಿರಬೇಕು; ಸ್ಪಷ್ಟವಾಗಿರಬೇಕು. ★



ಶ್ರೀ ಬಸವೇಶ್ವರ ಐಕ್ಯ ಮಂಟಪ